
ಸೋಮವಾರ, ಜೂನ್ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 154 | ಪುಟ 14
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಬೆಡಗು
ಬೆಂಗಳೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮವೊಂದರಲ್ಲಿ ನಟ ಕಾಜಲ್ ಅಗರ್‌ವಾಲ್ ಪಾಲ್ಗೊಂಡಿದ್ದರು

ವಿಧಾನ ಪರಿಷತ್ ಚುನಾವಣೆ: ಮೂರೂ ಪಕ್ಷಗಳ ಅಭ್ಯರ್ಥಿಗಳ ಅವಿರೋಧ ಆಯ್ಕೆ ನಿಚ್ಚಳ

11 ಸ್ಥಾನಗಳಿಗೆ ಅಭ್ಯರ್ಥಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್ತಿನ 11 ಸ್ಥಾನಗಳಿಗೆ ಇದೇ 13ರಂದು ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಜೆಡಿಎಸ್ ಕೂಡ ಅಭ್ಯರ್ಥಿಯನ್ನು ಆಖೈರು ಮಾಡಿದೆ. ಎಲ್ಲರೂ ಅವಿರೋಧವಾಗಿ ಆಯ್ಕೆ ಆಗುವುದು ಬಹುತೇಕ ನಿಚ್ಚಳವಾಗಿದೆ.

ನಾಮಪತ್ರ ಸಲ್ಲಿಕೆಗೆ ಸೋಮವಾರ (ಜೂನ್ 3) ಕಡೆಯ ದಿನವಾಗಿದ್ದು, ಮೂರೂ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಯನ್ನು ಭಾನುವಾರ ಅಂತಿಮಗೊಳಿಸಿವೆ. ಸಾಮಾಜಿಕ ನ್ಯಾಯ, ಪ್ರಾದೇಶಿಕ ಸಮತೋಲನ ಮತ್ತು ಪಕ್ಷ ನಿಷ್ಠೆಯನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಒತ್ತು ನೀಡಿವೆ.

ಒಟ್ಟು 11 ಸ್ಥಾನಗಳಲ್ಲಿ ಆಯಾ ಪಕ್ಷಗಳ ಶಾಸಕರ ಸಂಖ್ಯಾ ಬಲಕ್ಕೆ ಅನುಗುಣವಾಗಿ ಕಾಂಗ್ರೆಸ್ 7, ಬಿಜೆಪಿ 3 ಮತ್ತು ಜೆಡಿಎಸ್ ಒಂದು ಸ್ಥಾನ ಗೆಲ್ಲಲು ಅವಕಾಶವಿದೆ.

ಕಾಂಗ್ರೆಸ್‌ನ ಏಳು ಸ್ಥಾನಗಳಿಗೆ 300ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದರು. ಈ ಅವಕಾಶ ಗಿಟ್ಟಿಸಿಕೊಳ್ಳಲು ಹಲವರು ನಾನಾ ದಾರಿಗಳ ಮೂಲಕ ಹೈಕಮಾಂಡ್ ನಾಯಕರ ಮೇಲೆ ತೀವ್ರ ಒತ್ತಡ ಹೇರಿದ್ದರು. ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದರು.

ಹಾಲಿ ಸದಸ್ಯರ ಪೈಕಿ, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಮತ್ತು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಅವರಿಗೆ ಮತ್ತೆ ಅವಕಾಶ ಸಿಕ್ಕಿದೆ.

8ನೇ ಪುಟ ನೋಡಿ

ಅಭ್ಯರ್ಥಿಗಳ ಪಟ್ಟಿ

ಕಾಂಗ್ರೆಸ್
- ಎನ್.ಎಸ್. ಬೋಸರಾಜು (ಹಿಂದುಳಿದ– ರಾಜು ಕ್ಷತ್ರಿಯ)
- ಡಾ. ಯತೀಂದ್ರ (ಹಿಂದುಳಿದ– ಕುರುಬ)
- ಜಗದೇವ್ ಗುತ್ತೇದಾರ್ (ಹಿಂದುಳಿದ– ಈಡಿಗ)
- ಕೆ. ಗೋವಿಂದರಾಜ್ (ಒಕ್ಕಲಿಗ)
- ಎ. ವಸಂತಕುಮಾರ್ (ಪರಿಶಿಷ್ಟ ಜಾತಿ– ಬಲ)
- ಬಿಲ್ಕಿಸ್ ಬಾನು (ಮುಸ್ಲಿಂ)
- ಐವನ್ ಡಿಸೋಜ (ಕ್ರಿಶ್ಚಿಯನ್)
- ಜಗದೀಶ ಶೆಟ್ಟರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬಸನಗೌಡ ಬಾದರ್ಲಿ (ಲಿಂಗಾಯತ)

ಬಿಜೆಪಿ
- ಸಿ.ಟಿ.ರವಿ (ಒಕ್ಕಲಿಗ)
- ಎನ್.ರವಿಕುಮಾರ್ (ಹಿಂದುಳಿದ– ಗಂಗಾಮತಸ್ಥ)
- ಎಂ.ಜಿ.ಮುಳೆ (ಹಿಂದುಳಿದ–ಮರಾಠ)

ಜೆಡಿಎಸ್
- ಟಿ.ಎನ್. ಜವರಾಯಿಗೌಡ (ಒಕ್ಕಲಿಗ)

ಜವರಾಯಿಗೌಡ ಜೆಡಿಎಸ್ ಅಭ್ಯರ್ಥಿ

ಜೆಡಿಎಸ್ ತನಗೆ ಲಭಿಸಲಿರುವ ಒಂದು ಸ್ಥಾನಕ್ಕೆ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ಸ್ಪರ್ಧಿಸಿ ಸೋತಿರುವ ಟಿ.ಎನ್. ಜವರಾಯಿಗೌಡ ಅವರನ್ನು ಆಯ್ಕೆಮಾಡಿದೆ.

'ವಿಧಾನ ಪರಿಷತ್‌ನ ಹಾಲಿ ಸದಸ್ಯ ಬಿ.ಎಂ.ಫಾರೂಕ್, ರಾಜ್ಯಸಭೆಯ ಮಾಜಿ ಸದಸ್ಯ ಡಿ. ಕುಪೇಂದ್ರ ರೆಡ್ಡಿ ಮತ್ತು ಜವರಾಯಿಗೌಡ ಪರಿಷತ್ ಸದಸ್ಯ ಸ್ಥಾನದ ಆಕಾಂಕ್ಷಿಗಳಾಗಿದ್ದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮತ್ತು ಇತರ ಪ್ರಮುಖರ ಜತೆ ಚರ್ಚಿಸಿದ ಬಳಿಕ ಜವರಾಯಿಗೌಡ ಅವರ ಹೆಸರನ್ನು ಅಂತಿಮಗೊಳಿಸಿದ್ದಾರೆ' ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ನಾಮಪತ್ರ ಸಲ್ಲಿಕೆಗೆ ಸೋಮವಾರ ಕೊನೆಯ ದಿನ. ಜೆಡಿಎಸ್ ಅಧಿಕೃತವಾಗಿ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿಲ್ಲ. ಸೋಮವಾರ ಬೆಳಿಗ್ಗೆ ವಿಧಾನಸೌಧದಲ್ಲಿ ಪಕ್ಷದ ಶಾಸಕರ ಸಭೆ ನಡೆಸಿ, ಅಭ್ಯರ್ಥಿ ಹೆಸರು ಘೋಷಿಸಲಾಗುತ್ತದೆ. ಆ ಬಳಿಕ ಪಕ್ಷದ ಪ್ರಮುಖರೊಂದಿಗೆ ತೆರಳಿ ಜವರಾಯಿಗೌಡ ಅವರು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಪರಿಷತ್: ಇಂದು ಮತದಾನ 8

ಸಿ.ಟಿ.ರವಿ, ರವಿಕುಮಾರ್, ಮುಳೆಗೆ ಮಣೆ

ಬಿಜೆಪಿ ಗೆಲ್ಲಲು ಅವಕಾಶವಿರುವ ಮೂರು ಸ್ಥಾನಗಳಿಗೆ ಮಾಜಿ ಸಚಿವ ಸಿ.ಟಿ.ರವಿ, ವಿಧಾನ ಪರಿಷತ್‌ನ ಹಾಲಿ ಸದಸ್ಯ ಎನ್.ರವಿಕುಮಾರ್ ಮತ್ತು ಮಾಜಿ ಶಾಸಕ ಎಂ.ಜಿ ಮುಳೆ ಅವರಿಗೆ ಟಿಕೆಟ್ ಪ್ರಕಟಿಸಿದೆ.

ಎನ್.ರವಿಕುಮಾರ್ ಅವರಿಗೆ ಎರಡನೇ ಅವಧಿಗೆ ಅವಕಾಶ ಸಿಕ್ಕಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋತಿದ್ದ ಸಿ.ಟಿ.ರವಿ ಅವರನ್ನು ಮೇಲ್ಮನೆಗೆ ಕಳುಹಿಸಲು ವರಿಷ್ಠರು ತೀರ್ಮಾನಿಸಿದ್ದಾರೆ.

ಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕ ಕೋಟ ಶ್ರೀನಿವಾಸಪೂಜಾರಿ ಅವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಅವರು ಸಂಸದರಾಗಿ ಆಯ್ಕೆಯಾದರೆ ತೆರವಾಗುವ ವಿರೋಧಪಕ್ಷದ ನಾಯಕ ಸ್ಥಾನಕ್ಕೆ ರವಿ ಆಯ್ಕೆ ಆಗುವ ಸಾಧ್ಯತೆಗಳಿವೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಪರಿಷತ್ತಿನಲ್ಲಿ ವಿರೋಧಪಕ್ಷದ ಮುಖ್ಯ ಸಚೇತಕ ಆಗಿರುವ ಎನ್. ರವಿಕುಮಾರ್ ಅವರು ಸದನದ ಒಳಗೆ ಮತ್ತು ಪಕ್ಷದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರುವುದು ಹಾಗೂ ಪಕ್ಷದ ಸಂಘಟನೆಯಲ್ಲಿ ಉತ್ತಮ ಕೆಲಸ ಮಾಡಿರುವ ಕಾರಣಕ್ಕೆ ಎರಡನೇ ಬಾರಿ ಅವಕಾಶ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಸವಕಲ್ಯಾಣ ಕ್ಷೇತ್ರದ ಮಾಜಿ ಶಾಸಕ ಮತ್ತು ಮರಾಠ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಂ.ಜಿ.ಮುಳೆ ಅವರ ಆಯ್ಕೆ ಪಕ್ಷದಲ್ಲಿ ಅಚ್ಚರಿ ಮೂಡಿಸಿದೆ. ಹಿಂದೆ ಜೆಡಿಎಸ್‌ನಲ್ಲಿದ್ದು, ಕಳೆದ ಉಪ ಚುನಾವಣೆಯಲ್ಲಿ ಬಿಜೆಪಿ ಸೇರಿದ್ದರು.

ರವಿ ಒಕ್ಕಲಿಗ ಸಮಾಜ, ಎನ್.ರವಿಕುಮಾರ್ ಕೋಲಿ ಸಮಾಜ ಮತ್ತು ಮುಳೆ ಅವರು ಹಿಂದುಳಿದ ಮರಾಠ ಸಮಾಜಕ್ಕೆ ಸೇರಿದ್ದಾರೆ. ಈ ಮೂಲಕ ಪಕ್ಷ ನಿಷ್ಠೆ, ಸಿದ್ಧಾಂತ ಬದ್ಧತೆ, ಜಾತಿ ಸಮೀಕರಣ ತೂಗಿ ಆಯ್ಕೆ ಮಾಡಿದ್ದಾರೆ.

ಬಿಜೆಪಿಯಲ್ಲಿ 40ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದರು, ಈ ಪೈಕಿ 15 ಆಕಾಂಕ್ಷಿಗಳ ಪಟ್ಟಿಯನ್ನು ಬಿಜೆಪಿ ರಾಜ್ಯ ಘಟಕವು ವರಿಷ್ಠರಿಗೆ ಕಳುಹಿಸಿತ್ತು. ಸಂಸದೆ ಸುಮಲತಾ, ಜೆ.ಸಿ.ಮಾಧುಸ್ವಾಮಿ ಸೇರಿ ಹಲವರ ಹೆಸರು ಚರ್ಚೆಯಲ್ಲಿತ್ತು.

ಮಾಧುಸ್ವಾಮಿ ಅವರ ಹೆಸರು ಅಂತಿಮಗೊಳಿಸಲು ಬಿ.ಎಸ್. ಯಡಿಯೂರಪ್ಪ ವರಿಷ್ಠರಿಗೆ ಮನವಿ ಮಾಡಿದ್ದರು. ಆದರೆ, ಅವರು ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರದಲ್ಲಿ ಸಕ್ರಿಯವಾಗಿ ತೊಡಗದ ಕಾರಣ ವರಿಷ್ಠರು ಬೇಸರಗೊಂಡಿದ್ದು, ಮನವಿ ಪುರಸ್ಕೃತವಾಗಿಲ್ಲ ಎಂದು ಮೂಲಗಳು ಹೇಳಿವೆ.



ಬೆಂಗಳೂರಿನ ಎಂ.ಜಿ.ರಸ್ತೆಯ ಮೆಯೋ ಹಾಲ್ ಬಳಿ ಭಾನುವಾರ ಭಾರಿ ಮಳೆಗೆ ಜಲಾವೃತವಾದ ರಸ್ತೆಯಲ್ಲಿ ಸಂಚರಿಸಲು ದ್ವಿಚಕ್ರ ವಾಹನ ಸವಾರರೊಬ್ಬರು ಹರಸಾಹಸಪಟ್ಟರು –ಪ್ರಜಾವಾಣಿ ಚಿತ್ರ / ಎಂ.ಎಸ್.ಮಂಜುನಾಥ್

ವಿವಿಧೆಡೆ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ತುಮಕೂರು: ರಾಜ್ಯದ ಹಲವೆಡೆ ಶನಿವಾರ ರಾತ್ರಿ ಮತ್ತು ಭಾನುವಾರ ಮಳೆಯಾಗಿದೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಭಾನುವಾರ ಸಂಜೆ ಜೋರು ಗಾಳಿಯೊಂದಿಗೆ ಧಾರಾಕಾರ ಮಳೆ ಸುರಿಯಿತು.

ಸಂಜೆ 6.30ರ ಸುಮಾರಿಗೆ ಆರಂಭವಾದ ಮಳೆ, ನಂತರ ಒಂದು ಗಂಟೆಗೂ ಹೆಚ್ಚು ಕಾಲ ಬಿರುಸಾಗಿ ಸುರಿಯಿತು. ಪೀಣ್ಯ–ದಾಸರಹಳ್ಳಿ, ವಿದ್ಯಾಪೀಠ, ಹಡ್ಸನ್ ವೃತ್ತ, ಎಂ.ಜಿ.ರಸ್ತೆ, ಶೇಷಾದ್ರಿ ರಸ್ತೆ, ಬನಶಂಕರಿ, ಜಯನಗರ, ಜೆಪಿ ನಗರ, ಮೈಸೂರು ರಸ್ತೆ, ಜೆ.ಸಿ. ರಸ್ತೆ, ಕೆ.ಆರ್.ಮಾರುಕಟ್ಟೆ, ಮೆಜೆಸ್ಟಿಕ್ ಸುತ್ತಮುತ್ತ, ಕೆ.ಎಚ್.ರಸ್ತೆ ವ್ಯಾಪ್ತಿಯಲ್ಲಿ ಜೋರು ಮಳೆಯಾಯಿತು.

ಆನಂದರಾವ್ ಸರ್ಕಲ್ ಕೆಳಸೇತುವೆ ಸೇರಿದಂತೆ ನಗರದ ವಿವಿಧ ಅಂಡರ್ ಪಾಸ್‌ಗಳು ಜಲಾವೃತಗೊಂಡಿದ್ದವು. 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಟ್ರಿನಿಟಿ ನಿಲ್ದಾಣದ ಬಳಿ ಭಾನುವಾರ ಸಂಜೆ ಸುರಿದ ಮಳೆಯಿಂದಾಗಿ ಹಳಿಗೆ ಮರದ ಕೊಂಬೆ ಮುರಿದು ಬಿದ್ದಿದೆ. ಇದರಿಂದ ಮೆಟ್ರೊ ರೈಲು ಸಂಚಾರ ವ್ಯತ್ಯಯಗೊಂಡಿತು.

ತುಮಕೂರು ಜಿಲ್ಲೆಯ ವಿವಿಧೆಡೆ ಶನಿವಾರ ರಾತ್ರಿ ಉತ್ತಮ ಮಳೆಯಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರಿನಲ್ಲಿ 10 ಸೆಂ.ಮೀ ಮಳೆ ಬಿದ್ದಿದೆ. ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿ 8 ಸೆಂ.ಮೀ, ಕಡಬದಲ್ಲಿ 6 ಸೆ.ಮೀ ಮಳೆ ಸುರಿದಿದೆ. ಒಂದು ವಾರ ಬಿಡುವು ನೀಡಿದ್ದ ಮಳೆ ಇದೀಗ ಮತ್ತೆ ಶುರುವಾಗಿದ್ದು, ಪೂರ್ವ ಮುಂಗಾರಿನ ಬೆಳೆಗೆ ಜೀವ ಕಳೆ ಬಂದಿದೆ.

ಹುಳಿಯಾರು ಪಟ್ಟಣದ ರಾಮಗೋಪಾಲ್ ವೃತ್ತದಲ್ಲಿ ಅವೈಜ್ಞಾನಿಕ ಕಾಮಗಾರಿಯಿಂದ ನೀರು ಹರಿದು ಹೋಗಲು ಆಗದೆ ರಸ್ತೆ ಕೆರೆಯಂತಾಗಿತ್ತು.

ಕಲಬುರಗಿ ವರದಿ: ಕಲಬುರಗಿ ನಗರ ಸೇರಿದಂತೆ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಹಾಗೂ ಬೀದರ್ ಜಿಲ್ಲೆಯ ಹಲವೆಡೆ ಉತ್ತಮ ಮಳೆ ಸುರಿಯಿತು.

8ನೇ ಪುಟ ನೋಡಿ

ತಿಹಾರ್‌ಗೆ ಮರಳಿದ ಕೇಜ್ರಿವಾಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ನೀಡಿದ್ದ ಮಧ್ಯಂತರ ಜಾಮೀನಿನ ಅವಧಿ ಕೊನೆಗೊಂಡಿದ್ದರಿಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಭಾನುವಾರ ಸಂಜೆ ತಿಹಾರ್ ಜೈಲಿಗೆ ಹೋಗಿ, ಶರಣಾದರು.

ಇದಕ್ಕೂ ಮುನ್ನ ಅವರು ರಾಜ್‌ಘಾಟ್‌ಗೆ ತೆರಳಿ ಮಹಾತ್ಮ ಗಾಂಧೀಜಿ ಅವರ ಸಮಾಧಿಗೆ ನಮಿಸಿದರು. ಬಳಿಕ ಹನುಮಾನ್ ದೇಗುಲದಲ್ಲಿ ಪ್ರಾರ್ಥಿಸಿದರು. ಆ ನಂತರ ಅವರು ಎಎಪಿ ಮುಖ್ಯ ಕಚೇರಿಗೆ ಹೋಗಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. 'ಭ್ರಷ್ಟಾಚಾರದ ಕಾರಣಕ್ಕಾಗಿ ನನ್ನಬಂಧನವಾಗಿಲ್ಲ. ಬದಲಿಗೆ ಸರ್ವಾಧಿಕಾರದ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ ಬಂಧಿಸಲಾಗಿದೆ' ಎಂದು ಕೇಜ್ರಿವಾಲ್ ಹೇಳಿದರು.

ಈ ವೇಳೆ ಕೇಜ್ರಿವಾಲ್ ಅವರ ಜತೆಗೆ ಅವರ ಪತ್ನಿ ಸುನೀತಾ ಕೇಜ್ರಿವಾಲ್, ದೆಹಲಿ ಸಚಿವರಾದ ಆತಿಶಿ, ಕೈಲಾಶ್ ಗೆಹಲೋತ್, ಸೌರಭ್ ಭಾರದ್ವಾಜ್, ರಾಜ್ಯಸಭಾ ಸದಸ್ಯರಾದ ಸಂಜಯ್ ಸಿಂಗ್, ಸಂದೀಪ್ ಪಾಠಕ್, ಪಕ್ಷದ ನಾಯಕ ದುರ್ಗೇಶ್ ಪಾಠಕ್ ಸೇರಿದಂತೆ ಇತರರು ಇದ್ದರು.

ಕೇಜ್ರಿವಾಲ್ ಅವರಿಗೆ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲು ಸುಪ್ರೀಂ ಕೋರ್ಟ್ ಮೇ 10ರಂದು ಮಧ್ಯಂತರ ಜಾಮೀನು ನೀಡಿತ್ತು. ಜಾಮೀನು ಅವಧಿಯು ಜೂನ್ 1ಕ್ಕೆ ಕೊನೆಗೊಂಡಿತು. ಜೂನ್ 2ರಂದು (ಭಾನುವಾರ) ಶರಣಾಗಬೇಕು ಎಂದು ಸುಪ್ರೀಂ ಕೋರ್ಟ್ ಕೇಜ್ರಿವಾಲ್ ಅವರಿಗೆ ಸೂಚಿಸಿತ್ತು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಿಧಾನಸಭಾ ಚುನಾವಣೆ: ಸಿಕ್ಕಿಂನಲ್ಲಿ ಎಸ್‌ಕೆಎಂಗೆ ಭಾರಿ ಗೆಲುವು

ಅರುಣಾಚಲ: 'ಕಮಲ' ಹ್ಯಾಟ್ರಿಕ್


ಇಟಾನಗರ/ ಗ್ಯಾಂಗ್ಟಕ್ (ಪಿಟಿಐ): ಅರುಣಾಚಲ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ 'ಹ್ಯಾಟ್ರಿಕ್' ಗೆಲುವು ಸಾಧಿಸಿದೆ. ಸಿಕ್ಕಿಂನಲ್ಲಿ 32 ಸ್ಥಾನಗಳಲ್ಲಿ 31 ಕ್ಷೇತ್ರ ಗೆದ್ದುಕೊಂಡ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಸತತ ಎರಡನೇ ಬಾರಿ ಆಡಳಿತದ ಚುಕ್ಕಾಣಿ ಹಿಡಿದಿದೆ.

ಏಪ್ರಿಲ್ 19ರಂದು ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನದ ಜತೆಯಲ್ಲೇ ಈಶಾನ್ಯ ಭಾರತದ ಈ ಎರಡು ರಾಜ್ಯಗಳ ವಿಧಾನಸಭೆಗಳಿಗೂ ಚುನಾವಣೆ ನಡೆದಿದ್ದವು. ಮತ ಎಣಿಕೆ ಭಾನುವಾರ ನಡೆಯಿತು.

ಅರುಣಾಚಲ ಪ್ರದೇಶದ 60 ಸ್ಥಾನಗಳಲ್ಲಿ ಬಿಜೆಪಿ 46ರಲ್ಲಿ ಗೆದ್ದಿದೆ. ಮುಖ್ಯಮಂತ್ರಿ ಪೆಮಾ ಖಂಡು ಸೇರಿದಂತೆ ಬಿಜೆಪಿಯ 10 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದರಿಂದ, 50 ಕ್ಷೇತ್ರಗಳಿಗೆ ಮತದಾನ ನಡೆದಿತ್ತು. ಇದರಲ್ಲಿ 36 ಸ್ಥಾನಗಳನ್ನು ಬಿಜೆಪಿ ಜಯಿಸಿದೆ. ಕಮಲ ಪಾಳಯವು 2019ರಲ್ಲಿ 41 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಿತ್ತು. ಈ ಬಾರಿ ತನ್ನ ಬಲವನ್ನು ಇನ್ನಷ್ಟು ಹೆಚ್ಚಿಸಿಕೊಂಡಿದೆ.

2016ರವರೆಗೂ ರಾಜ್ಯದ ಪ್ರಮುಖ ಪಕ್ಷವಾಗಿದ್ದ ಕಾಂಗ್ರೆಸ್ ಭಾರಿ ಮುಖಭಂಗ ಅನುಭವಿಸಿದ್ದು, ಕೇವಲ ಒಂದು ಸ್ಥಾನ ಗೆದ್ದಿದೆ. ಬಿಜೆಪಿಯ ಮಿತ್ರಪಕ್ಷಗಳಾದ ನ್ಯಾಷನಲ್ ಪೀಪಲ್ಸ್ ಪಾರ್ಟಿ (ಎನ್‌ಪಿಪಿ) 5 ಮತ್ತು ಅಜಿತ್ ಪವಾರ್ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಎನ್‌ಸಿಪಿ) 3 ಸ್ಥಾನಗಳನ್ನು ಗೆದ್ದುಕೊಂಡವು.

9ನೇ ಪುಟ ನೋಡಿ



‘ಕಿರಿಯ ಲೆಕ್ಕ ಅಧಿಕಾರಿ’ ಮಧ್ಯಸ್ಥಿಕೆ?

ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಗರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಯಿಂದ ₹89.62 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಪ್ರಕರಣದಲ್ಲಿ, ನಿಗಮದ ‘ಕಿರಿಯ ಲೆಕ್ಕ ಅಧಿಕಾರಿ’ ಎನ್ನಲಾದ ಶಿವಕುಮಾರ್ ಎಂಬವರ ಮೂಲಕ ಬ್ಯಾಂಕ್ ವ್ಯವಹಾರ ನಡೆದಿರುವ ಮಾಹಿತಿಯನ್ನು ಎಸ್‌ಐಟಿ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜಿ. ಪದ್ಮನಾಭ ಮತ್ತು ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರುಗಣ್ಣವರ ಅವರನ್ನು ಎಸ್‌ಐಟಿ ಅಧಿಕಾರಿಗಳು ಈಗಾಗಲೇ ಬಂಧಿಸಿ, ಕಸ್ಟಡಿಗೆ ಪಡೆದು ವಿಚಾರಣೆ ಮುಂದುವರಿಸಿದ್ದಾರೆ.


‘ಬಂಧಿತ ಪದ್ಮನಾಭ ಹಾಗೂ ಪರುಶುರಾಮ್ ಅವರು ಅಕ್ರಮ ವರ್ಗಾವಣೆಗೂ ತಮಗೂ ಸಂಬಂಧ ಇಲ್ಲವೆಂದು ವಾದಿಸುತ್ತಿದ್ದಾರೆ. ಲಭ್ಯ ಪ್ರಾಥಮಿಕ ದಾಖಲೆಗಳನ್ನು ಪರಿಶೀಲಿಸಿದಾಗ, ಬ್ಯಾಂಕ್ ವಹಿವಾಟಿನ ಪ್ರತಿಯೊಂದು ದಾಖಲೆಗಳಲ್ಲಿ ಇಬ್ಬರ ಸಹಿ ಹಾಗೂ ಮೊಹರು ಇರುವುದು ಕಂಡುಬಂದಿದೆ. ಈ ದಾಖಲೆಗಳನ್ನು ಆಧರಿಸಿ ಇಬ್ಬರನ್ನೂ ಬಂಧಿಸಲಾಗಿದೆ. ದಾಖಲೆಗಳು ಅಸಲಿಯೋ ಅಥವಾ ನಕಲಿಯೋ ಎಂಬುದು ತನಿಖೆಯಿಂದಲೇ ತಿಳಿಯಬೇಕಿದೆ’ ಎಂದು ಮೂಲಗಳು ಹೇಳಿವೆ.

‘ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಎಂ.ಜಿ. ರಸ್ತೆಯ ಶಾಖೆಯಲ್ಲಿರುವ ನಿಗಮದ ಖಾತೆಗೆ ಸಂಬಂಧಪಟ್ಟಂತೆ ಚೆಕ್ ಸ್ವೀಕರಿಸಲು, ಠೇವಣಿ ರಶೀದಿ ಪಡೆಯಲು, ಓವರ್ ಡ್ರಾಫ್ಟ್ ದಾಖಲೆ ಹಾಗೂ ಇತರೆ ದಾಖಲೆಗಳ ಪಡೆಯಲು ಕಿರಿಯ ಲೆಕ್ಕ ಅಧಿಕಾರಿ ಶಿವಕುಮಾರ್ (ಉದ್ಯೋಗಿ ಸಂಖ್ಯೆ–18163) ಅವರಿಗೆ ಅಧಿಕಾರ ನೀಡಲಾಗಿದೆ’ ಎಂಬುದಾಗಿ ಪದ್ಮನಾಭ ಅವರು ಮೇ 4ರಂದು ಬ್ಯಾಂಕ್‌ಗೆ ಪತ್ರ ಬರೆದಿದ್ದರು. ಈ ಪತ್ರ ಆಧರಿಸಿ ತನಿಖೆ ನಡೆದಿದೆ. ಶಿವಕುಮಾರ್ ಯಾರು ಎಂಬುದನ್ನು ಪತ್ತೆ ಮಾಡಲಾಗಿದೆ. ಆತನನ್ನು ವಿಚಾರಣೆ ನಡೆಸಿದರೆ, ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ತಿಳಿಸಿವೆ.

8ನೇ ಪುಟ ನೋಡಿ

ಇಂದಿನಿಂದ ಹೆದ್ದಾರಿ ಬಳಕೆ ಶುಲ್ಕ ಶೇ 5ರಷ್ಟು ಏರಿಕೆ

ನವದೆಹಲಿ (ಪಿಟಿಐ): ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ರಾಷ್ಟ್ರೀಯ ಹೆದ್ದಾರಿ ಬಳಕೆದಾರರ ಶುಲ್ಕವನ್ನು ಶೇ 5ರಷ್ಟು ಹೆಚ್ಚಿಸಿದ್ದು, ಸೋಮವಾರದಿಂದಲೇ (ಜೂನ್ 3ರಂದು) ಈ ಪರಿಷ್ಕೃತ ದರ ಜಾರಿಗೆ ಬರಲಿದೆ.



ಪ್ರಾಧಿಕಾರವು ವಾರ್ಷಿಕವಾಗಿ ಬಳಕೆದಾರರ ಶುಲ್ಕವನ್ನು ಹೆಚ್ಚಿಸುತ್ತದೆ. ದೇಶದ ಎಲ್ಲಾ ಹೆದ್ದಾರಿಗಳಿಗೂ ಅನ್ವಯಿಸುವ ಈ ಪರಿಷ್ಕರಣೆಯು ಏಪ್ರಿಲ್ 1ರಿಂದ ಜಾರಿಗೆ ಬರುತ್ತಿತ್ತು. ಆದರೆ, ಈ ಬಾರಿ ಲೋಕಸಭಾ ಚುನಾವಣೆಯ ಕಾರಣ ಶುಲ್ಕ ಏರಿಕೆಯನ್ನು ಮುಂದೂಡಿತ್ತು.

ಪ್ರತಿವರ್ಷವೂ ಸಗಟು ಹಣದುಬ್ಬರ ಆಧಾರದ ಮೇಲೆ ಬಳಕೆದಾರರ ಶುಲ್ಕವನ್ನು ಪರಿಷ್ಕರಿಸಲಾಗುತ್ತದೆ ಎಂದು ಪ್ರಾಧಿಕಾರ ತಿಳಿಸಿದೆ. ದೇಶದಲ್ಲಿ ಒಟ್ಟು 855 ಟೋಲ್ ಪ್ಲಾಜಾಗಳಿವೆ. ಈ ಪೈಕಿ 675 ಪ್ಲಾಜಾಗಳು ಸರ್ಕಾರದ ನೆರವಿನೊಂದಿಗೆ ಕಾರ್ಯಾಚರಣೆ ನಡೆಸುತ್ತವೆ. ಉಳಿದ 180 ಪ್ಲಾಜಾಗಳು ಖಾಸಗಿ ಕಂಪನಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯಾಚರಣೆ ನಡೆಸುತ್ತವೆ.

ಗಡಿಭಾಗದ ಕನ್ನಡ ಶಾಲೆ ಉಳಿಸಲು ಮುಖ್ಯಶಿಕ್ಷಕನ ಪ್ರಯತ್ನ

1ನೇ ತರಗತಿಗೆ ದಾಖಲಾದರೆ ₹1 ಸಾವಿರ ಠೇವಣಿ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಜಿಲ್ಲೆಯ ಅಥಣಿ ತಾಲ್ಲೂಕಿನ ಅಡಹಳ್ಳಟ್ಟಿಯ ಹಿಪ್ಪರಗಿ ತೋಟದ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2024–25ನೇ ಸಾಲಿನಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ಹೆಸರಿನಲ್ಲಿ ಮುಖ್ಯಶಿಕ್ಷಕ ಸಿದ್ದಮಲ್ಲ ಖೋತ ಅವರು ತಮ್ಮ ಸ್ವಂತ ಹಣದಿಂದ ತಲಾ ₹1 ಸಾವಿರ ಠೇವಣಿ ಇರಿಸಲು ಮುಂದಾಗಿದ್ದಾರೆ.



ಸಿದ್ದಮಲ್ಲ ಖೋತ

ಕರ್ನಾಟಕ–ಮಹಾರಾಷ್ಟ್ರ ಗಡಿಯಲ್ಲಿರುವ ಈ ಶಾಲೆ 2005ರಲ್ಲಿ ಸ್ಥಾಪನೆಯಾಗಿದೆ. 2015ರವರೆಗೂ ಇಲ್ಲಿ 1ರಿಂದ 7ನೇ ತರಗತಿಯಲ್ಲಿ 60ರಿಂದ 70 ವಿದ್ಯಾರ್ಥಿಗಳು ಓದುತ್ತಿದ್ದರು. ಶಿಕ್ಷಕರು ಮತ್ತು ಮೂಲಸೌಕರ್ಯ ಕೊರತೆಯಿಂದಾಗಿ ಮಕ್ಕಳ ದಾಖಲಾತಿ ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಕುಸಿದಿದೆ. ಕಳೆದ ವರ್ಷ 18 ಮಕ್ಕಳಷ್ಟೇ ಇದ್ದರು.

2023ರ ಜುಲೈನಲ್ಲಿ ಈ ಶಾಲೆಗೆ ನಿಯೋಜನೆಗೊಂಡ ಖೋತ, ಮಕ್ಕಳನ್ನು ಸೆಳೆಯಲು ನಾನಾ ಶೈಕ್ಷಣಿಕ ಕಾರ್ಯಕ್ರಮ ರೂಪಿಸುತ್ತಿದ್ದಾರೆ. ಊರಲ್ಲಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗಾಗಿ ತಿಂಗಳಿಗೊಮ್ಮೆ ರಸಪ್ರಶ್ನೆ ಸ್ಪರ್ಧೆ ಆಯೋಜಿಸಿ, ತಾವೇ ಸ್ವತಃ ಬಹುಮಾನ ನೀಡುತ್ತಿದ್ದಾರೆ. ಗ್ರಾಮದ ಯುವಕ–ಯುವತಿಯರಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಕುರಿತು ತರಬೇತಿ ಕಾರ್ಯಾಗಾರ ಸಂಘಟಿಸಿದ್ದಾರೆ. ಅಲ್ಲದೆ, ಈ ಬೇಸಿಗೆಯಲ್ಲೂ ತಮ್ಮ ವಿದ್ಯಾರ್ಥಿಗಳಿಗಾಗಿ ವಿಶೇಷ ತರಗತಿ ನಡೆಸಿದ್ದಾರೆ. ದಾನಿಗಳ ನೆರವಿನೊಂದಿಗೆ ಶಾಲೆ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಇದರೊಂದಿಗೆ ಒಂದನೇ ತರಗತಿಯಿಂದಲೇ ದಾಖಲಾತಿ ಹೆಚ್ಚಿಸುವ ಪ್ರಯತ್ನಕ್ಕೂ ಕೈಹಾಕಿದ್ದಾರೆ.





ಅಡಹಳ್ಳಟ್ಟಿಯ ಹಿಪ್ಪರಗಿ ತೋಟದ ಶಾಲೆ

9 ಮಕ್ಕಳು ಪ್ರವೇಶ: 'ಕಳೆದ ವರ್ಷ ನಮ್ಮಲ್ಲಿ 1ನೇ ತರಗತಿಗೆ ಇಬ್ಬರು ಮಕ್ಕಳಿದ್ದರು. ಈ ಬಾರಿ ಶಾಲೆ ಆರಂಭೋತ್ಸವ ದಿನವೇ 9 ಮಕ್ಕಳು ಪ್ರವೇಶ ಪಡೆದಿದ್ದಾರೆ. ಠೇವಣಿ ಇರಿಸುವುದು ಸಣ್ಣ ಪ್ರಯತ್ನವಷ್ಟೇ. ನಮಗೆ ಲಭ್ಯವಿರುವ ಸೌಕರ್ಯ ಬಳಸಿಕೊಂಡು ಒಂದು ವರ್ಷದ ಅವಧಿಯಲ್ಲಿ ಕೈಗೊಂಡ ಶೈಕ್ಷಣಿಕ ಕಾರ್ಯಕ್ರಮ ಮೆಚ್ಚಿ ಮಕ್ಕಳು ನಮ್ಮ ಶಾಲೆಗೆ ಬರುತ್ತಿದ್ದಾರೆ' ಎಂದು ಸಿದ್ದಮಲ್ಲ ಖೋತ 'ಪ್ರಜಾವಾಣಿ'ಗೆ ತಿಳಿಸಿದರು.

'ಶಾಲೆಯಲ್ಲಿನ ಶಿಕ್ಷಕರೆಲ್ಲ ಸೇರಿಕೊಂಡು ದಾಖಲಾತಿ ಅಭಿಯಾನ ನಡೆಸುತ್ತಿದ್ದೇವೆ. ವಿವಿಧ ತರಗತಿಗಳ ಪ್ರವೇಶಕ್ಕೂ ಹಲವರು ಸಂಪರ್ಕಿಸಿದ್ದು, ಈ ವಾರ ಮಕ್ಕಳ ದಾಖಲಾತಿ 40 ದಾಟಲಿದೆ' ಎಂದರು.

'ಈ ಶಾಲೆಗೆ ಆವರಣ ಗೋಡೆ, ಸುಸಜ್ಜಿತ ಶೌಚಗೃಹ ನಿರ್ಮಿಸಬೇಕು. ಕುಡಿಯುವ ನೀರಿನ ಫಿಲ್ಟರ್, ಆಧುನಿಕ ಕಲಿಕೋಪಕರಣಗಳ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ' ಎಂಬುದು ವಿದ್ಯಾರ್ಥಿಗಳ ಪಾಲಕರ ಒತ್ತಾಯ.

> ರಾಷ್ಟ್ರೀಕೃತ ಬ್ಯಾಂಕ್‌ವೊಂದರಲ್ಲಿ ಪ್ರತಿ ಮಗುವಿನ ಹೆಸರಿನಲ್ಲಿ ಠೇವಣಿ ಇರಿಸುತ್ತೇನೆ. 18 ವರ್ಷ ವಯಸ್ಸಾದ ನಂತರ ಮಕ್ಕಳು ಆ ಹಣ ಪಡೆಯಬಹುದು
> **ಸಿದ್ದಮಲ್ಲ ಖೋತ,** ಮುಖ್ಯಶಿಕ್ಷಕ

> ನಮ್ಮೂರಿನ ಶಾಲೆ ಉಳಿವಿಗಾಗಿ ಶಿಕ್ಷಕರು ಪ್ರಯತ್ನಿಸುತ್ತಿದ್ದಾರೆ. ಹಾಗಾಗಿ ಖಾಸಗಿ ಶಾಲೆ ಬದಲಿಗೆ, ಸರ್ಕಾರಿ ಶಾಲೆಗೆ ನನ್ನ ಮಗನನ್ನು ಸೇರಿಸಿದ್ದೇನೆ
> **ಮಲ್ಲಿಕಾರ್ಜುನ ಕೂಡಲಪ್ಪಗೋಳ,** ಪಾಲಕ

CMR UNIVERSITY

Private University Estd in Karnataka State by Act No. 45 of 2013

RECOGNIZED BY UGC

now I know why

I have a competitive edge and enhanced employability. Engaging in diverse research initiatives and industry visits provides firsthand industry knowledge, networking opportunities, and a glimpse into practical applications of theoretical learning, enhancing academic learning and career readiness.



DISCOVER YOURSELF

SCAN TO UNLOCK A DEDUCTION **OF 25% IN** APPLICATION FEES

- **Ranked 1st** - School of Management in All India Level Category for Campus Design Excellence by Education World
- **Ranked 3rd** - School of Architecture in All India Level Category for Best Academia Industry Alliance by Education World
- **Ranked 4th** - School of Legal Studies in All India Level Category for Quality of Campus Life by Education World

CMR University (CMRU), Bengaluru, founded in 2013, fosters creative communities by promoting new ideas and diverse subjects, preparing students for successful careers. Guided by the mission to develop global creative thinkers, CMRU, backed by the CMR Jnanadhara Trust, nurtures over 20,000 students from 45+ countries, committed to quality education.

Create The Future

- 20+ INSTITUTIONS
- 75+ ACADEMIC DEPARTMENTS
- 1000+ WORLD CLASS FACULTY
- STUDENTS OF 45+ NATIONALITIES
- 20000+ ALUMNI ACROSS THE GLOBE

Admissions Open AY 2024-25

3rd RANK IN INDIA — **Emerging Institutes and Placement category**
Source: Times All India Engineering Institutes Ranking Survey 2024

Programmes Offered

We honour JEE, Comedk, & all National-level tests.

CMRU Accelerated Credits | **APPLY TODAY**
STAY AHEAD OF THE COMPETITION | to get trained and certified for FREE in niche courses

CET codes: B.Tech. - **E257** | B.Arch. - **E245**
PGCET code: MBA (City Campus) - **B150** | MBA (OMBR Campus) - **B149**
MBA (Lakeside Campus) - **B395** | MCA (OMBR Campus) - **C527**
MCA (Lakeside Campus) - **C521**

SCHOOL OF ARCHITECTURE

B.Arch.

SCHOOL OF ENGINEERING & TECHNOLOGY

B.Tech.
- Computer Science & Engineering
- Computer Science & Engineering (Artificial Intelligence & Machine Learning)
- Computer Science & Engineering (Data Science)
- Computer Engineering NEW
- Computer Science and Technology NEW
- Information Technology
- Electronics and Communication Engineering

M.Tech. (For Regular and Professionals)
- Computer Science & Engineering
- Artificial Intelligence

Ph.D.
- Computer Science and Engineering (Artificial Intelligence & Machine Learning, Networking and Cloud Computing, Data Analytics, Cyber Security, Data Science and Internet of Things)
- ECE • Mechanical Engineering

SCHOOL OF DESIGN

B.Des.
- Communication Design • Product Design
- Fashion Design • Interior Design

SCHOOL OF LIBERAL STUDIES (Formerly School of Social Science & Humanities)

B.A. / B.A (Hons) (Major + Minor)
- Psychology • English • Journalism
- Economics • Political Science
- History • Sociology • Media Studies
- Travel & Tourism NEW

B.Sc. | Psychology

M.Sc. | Psychology
- Clinical • Counselling • Human Resource Development and Management

Ph.D.
- Psychology

SCHOOL OF ECONOMICS & COMMERCE

B.Com. / B.Com. (Hons.)
- General • International Accounting & Finance • Professional - CA Integrated
- Data Science NEW • Certified Management Accountant (US CMA) NEW

Ph.D.
- Economics • Commerce

SCHOOL OF LEGAL STUDIES

B.A., LL.B. (Hons.)

B.B.A., LL.B. (Hons.)

LL.B.

LL.M.
- Constitutional Law • Commercial Law
- Criminal Law NEW

Ph.D. | Law

SCHOOL OF SCIENCE & COMPUTER STUDIES (Formerly School of Science Studies)

BCA / BCA (Hons)
- General • Cloud Computing
- Data Science • Game Development

B.Sc.
- Sound Engineering • Visual Effects & Animation • Information Technology NEW

M.Sc.
- Information Technology in Data Science NEW

MCA

Ph.D. | Computer Application

SCHOOL OF MANAGEMENT

BBA / BBA (Hons.)
- General • Digital Marketing
- Business Analytics

MBA with Dual Specialisation in
- Marketing • HR • Finance
- Business Analytics • Digital Marketing
- Supply Chain Management

MBA | Business Analytics & Business Intelligence NEW

Executive MBA | Product Leadership

Ph.D. | Management

CELEBRATING 30 YEARS — CMRIT — CMR INSTITUTE OF TECHNOLOGY, BENGALURU.

ACCREDITED WITH GRADE A++ NAAC

AICTE • NBA NATIONAL BOARD of ACCREDITATION • nirf RANKED

CMR INSTITUTE OF TECHNOLOGY

Permanently affiliated to VTU • Approved by AICTE • Recognised by the Govt. of Karnataka • Accredited by NAAC with A++ grade • NBA Accredited • NIRF Ranked

B.E. | CSE • CSE (AI & ML) • AI & DS • AI & ML, CSE (Data Science) • ISE • ECE

MBA | **MCA**

Ph.D. | CSE • ECE • EEE • Mechanical • Civil • Physics • Mathematics, Chemistry • Business Administration • Computer Applications

B.E : CET code - **E097** • ComedK code - **E032**
PGCET code : MCA - **C420MC** • MBA - **B151MB**

www.cmrit.ac.in
admission@cmrit.ac.in

SCAN FOR DETAILS

200+ recruiters

BOSCH • amazon • Flipkart • Deloitte. • KPMG • HCL • Capgemini • IBM • zomato • EY • and many more..

Registrations Open
CMRUAT
Providing opportunities to get scholarship worth 12 Crores

+91 93429 00666 | **www.cmr.edu.in** | **admissions@cmr.edu.in**

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037


ಚರ್ಚ್ ಸ್ಟ್ರೀಟ್‌ನಲ್ಲಿ ಭಾನುವಾರ ಸುರಿದ ಮಳೆಗೆ ಯುವಕರು ಸಂಭ್ರಮಿಸಿದರು


ಖೋಡೆ ವೃತ್ತದ ರೈಲ್ವೆ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು


ನಗರದ ಮಾಗಡಿ ರಸ್ತೆಯ ಮೆಟ್ರೊ ನಿಲ್ದಾಣದ ಬಳಿ ಭಾನುವಾರ ಮರವೊಂದು ಉರುಳಿ ಬಿದ್ದಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿಯು ತೆರವು ಕಾರ್ಯಾಚರಣೆ ನಡೆಸಿದರು

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

50ಕ್ಕೂ ಹೆಚ್ಚು ಸ್ಥಳಗಳು ಜಲಾವೃತ ● ನೂರಕ್ಕೂ ಹೆಚ್ಚು ಕಡೆಗಳಲ್ಲಿ ಮುರಿದು ಬಿದ್ದ ಮರಗಳು

ಗುಡುಗು ಸಹಿತ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಭಾನುವಾರ ಸಂಜೆ ಒಂದು ಗಂಟೆಗೂ ಅಧಿಕ ಸಮಯ ಗುಡುಗು, ಮಿಂಚು, ಗಾಳಿ ಸಹಿತ ಭಾರಿ ಮಳೆಯಾಗಿದೆ. 50ಕ್ಕೂ ಹೆಚ್ಚು ಪ್ರದೇಶಗಳು ಜಲಾವೃತಗೊಂಡಿದ್ದು, ನೂರಕ್ಕೂ ಹೆಚ್ಚು ಕಡೆಗಳಲ್ಲಿ ಮರ, ಮರದ ಕೊಂಬೆಗಳು ಮುರಿದು ಬಿದ್ದಿವೆ. ವಿವಿಧೆಡೆ ಆಟೊಗಳ ಮೇಲೆ ಮರ ಬಿದ್ದಿದೆ.

ಸಂಜೆ ಶುರುವಾದ ಸಣ್ಣದಾಗಿ ಶುರುವಾದ ಮಳೆ, ನಂತರ ಬಿರುಸಾಗಿ ಆರಂಭವಾಯಿತು. ಹೊರಮಾವಿನಲ್ಲಿ 7 ಸೆಂ.ಮೀ, ವಿದ್ಯಾಪೀಠದಲ್ಲಿ 5 ಸೆಂ.ಮೀ. ಹಾಗೂ ಕೋಡಿಹಳ್ಳಿ, ಕಾಟನ್‌ಪೇಟೆ, ಪುಲಕೇಶಿ ನಗರ, ದೊರೆಸಾನಿಪಾಳ್ಯ, ಪಟ್ಟಾಭಿರಾಮ ನಗರ, ಕುಶಾಲನಗರ, ದೊಡ್ಡನೆಕ್ಕುಂದಿ, ಬಿಳೆಕಳ್ಳಿ ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಯಿತು. ನಗರದಲ್ಲಿ 5 ಸೆಂ.ಮೀ ನಿಂದ 7 ಸೆಂ.ಮೀ ನಷ್ಟು ಮಳೆಯಾಗಿದೆ.

ನಗರದ ಆನಂದರಾವ್ ಸರ್ಕಲ್, ಖೋಡೆ ಸರ್ಕಲ್, ಶೇಷಾದ್ರಿಪುರಂ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿರುವ ಕೆಳಸೇತುವೆಗಳು ಜಲಾವೃತಗೊಂಡವು. ಅನೇಕ ಕಡೆಗಳಲ್ಲಿ ರಸ್ತೆಯಲ್ಲಿಯೇ ನೀರು ಹರಿದ ಕಾರಣ ವಾಹನಗಳು ಮುಂದಕ್ಕೆ ಚಲಿಸಲು ಪರದಾಡುವಂತಾಯಿತು. ಗಂಟೆಗಟ್ಟಲೆ ವಾಹನದಟ್ಟಣೆ ಉಂಟಾಯಿತು. ಕೆ.ಆರ್. ಮಾರುಕಟ್ಟೆಯಲ್ಲಿ ನೀರು ನಿಂತು ವ್ಯಾಪಾರಕ್ಕೂ, ವಾಹನ ಸಂಚಾರಕ್ಕೂ ತೊಂದರೆ ಉಂಟಾಯಿತು.

ಲಾಲ್‌ಬಾಗ್ ಮುಖ್ಯ ಗೇಟ್ ರಸ್ತೆಯ ಬಳಿ ಮರದ ಕೊಂಬೆ ಬಿದ್ದ ಕಾರಣ ಲಾಲ್‌ಬಾಗ್ ಪಶ್ಚಿಮ ಗೇಟ್ ಕಡೆಗೆ ವಾಹನ ಸಂಚಾರಕ್ಕೆ ಸಮಸ್ಯೆಯಾಯಿತು. ಜಯನಗರ ಮೂರನೇ ಬ್ಲಾಕ್ ಕೆನರಾ ಬ್ಯಾಂಕ್ ಜಂಕ್ಷನ್ ಬಳಿ ಮರದ ಕೊಂಬೆ ಬಿದ್ದ ಕಾರಣ, ಸಿಂಡಿಕೇಟ್ ಬ್ಯಾಂಕ್ ಜಂಕ್ಷನ್ ಕಡೆಗೆ ವಾಹನಗಳು ಚಲಿಸದಂತಾಯಿತು. ಜಯನಗರ 3ನೇ ಬ್ಲಾಕ್ 27ನೇ ಕ್ರಾಸ್ ಜಂಕ್ಷನ್ ಬಳಿ ಮರ ಬಿದ್ದಿದ್ದರಿಂದ ಯಡಿಯೂರು ಜಂಕ್ಷನ್ ಕಡೆಗೆ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು. ಜಯನಗರ ಐದನೇ ಬ್ಲಾಕ್ ಅರವಿಂದ ಜಂಕ್ಷನ್ ಬಳಿ ಮರ ಬಿದ್ದಿದ್ದರಿಂದ ರಾಜಲಕ್ಷ್ಮಿ ಜಂಕ್ಷನ್ ಕಡೆಗೆ ವಾಹನ ಸಂಚರಿಸಲು ತೊಂದರೆಯುಂಟಾಯಿತು.

ಕೆಎಚ್ ಸೇತುವೆ ಬಳಿ ಮರ ಬಿದ್ದಿದ್ದು ಜೈಮುನಿ ಸರ್ಕಲ್ ಕಡೆಗೆ ಸಂಚಾರ ಬಂದ್ ಆಯಿತು. ಮೇಕ್ರಿ ವೃತ್ತದ ಬಳಿ ಮರ ಬಿದ್ದಿದ್ದರಿಂದ ಯಶವಂತಪುರ ಕಡೆಗೆ ವಾಹನಗಳು ಕೆಲವು ಸಮಯ ಸಂಚರಿಸದಂತಾಯಿತು. ಯಲಹಂಕದ ಸಂದೀಪ್ ಉನ್ನಿಕೃಷ್ಣನ್ ರಸ್ತೆ ಬಳಿ ಮರ ಬಿದ್ದಿದ್ದರಿಂದ ದೊಡ್ಡಬಳ್ಳಾಪುರ ರಸ್ತೆ ಕಡೆಗೆ ವಾಹನ ಸಂಚಾರ ನಿಧಾನವಾಯಿತು. ದೊಮ್ಮಲೂರು ಮೇಲ್ಸೇತುವೆ ಬಳಿ ಮರ ಬಿದ್ದಿದ್ದರಿಂದ ಎಚ್‌ಎಎಲ್ ಕಡೆಗೆ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ಎಚ್‌ಎಂಟಿ ಮುಖ್ಯರಸ್ತೆಯಲ್ಲಿ ಮರ ಬಿದ್ದಿದ್ದರಿಂದ ಪ್ಲಾಟಿನಂ ಸಿಟಿ ಕಡೆಗೆ ಸಂಚಾರ ನಿಧಾನಗೊಂಡಿತು.

ರಸ್ತೆಯಲ್ಲಿಯೇ ನೀರು ನಿಂತಿದ್ದರಿಂದ ನಾಯಂಡಹಳ್ಳಿ ಜಂಕ್ಷನ್‌ನಿಂದ ಬಿಎಚ್‌ಇಎಲ್ ಕಡೆಗೆ, ರಾಜೀವ್ ಗಾಂಧಿ ಜಂಕ್ಷನ್‌ನಿಂದ ಮಂತ್ರಿಮಾಲ್ ಕಡೆಗೆ, ಖೋಡೆ ಸರ್ಕಲ್‌ನಿಂದ ಲುಲು ಮಾಲ್ ಕಡೆಗೆ, ಯಲಹಂಕದಿಂದ ಕೋಗಿಲೆ ಕ್ರಾಸ್ ಕಡೆಗೆ, ಹೆಬ್ಬಾಳದಲ್ಲಿ ಮೇಲಿನ ರ್‍ಯಾಂಪ್, ಫ್ಲೈಓವರ್ ಕೆಳ ರ್‍ಯಾಂಪ್ ಕೆಂಪಾಪುರ ಕಡೆಗೆ, ಯೋಗೇಶ್ವರನಗರ ಕ್ರಾಸ್‌ನಿಂದ ಹೆಬ್ಬಾಳ ವೃತ್ತದ ಕಡೆಗೆ ಸಂಚಾರ ಕಷ್ಟವಾಯಿತು.

ಟಿನ್ ಫ್ಯಾಕ್ಟರಿ ಕಡೆಯಿಂದ ಕಸ್ತೂರಿ ನಗರ ಕಡೆಗೆ ಹೋಗುವ ಮಾರ್ಗದಲ್ಲಿ ಗ್ರಾಂಡ್ ಸೀಸನ್ ಹೋಟೆಲ್ ಹತ್ತಿರ ಮಳೆ ನೀರು ನಿಂತು ಸಮಸ್ಯೆ ಉಂಟಾಯಿತು.

ಕೆಎಫ್‌ಸಿ ರಸ್ತೆಯಿಂದ ಗುಂಜೂರು ರಸ್ತೆ ಕಡೆಗೆ, ಫೀನಿಕ್ಸ್ ಮಾಲ್ ಮಹದೇವಪುರ ದಿಂದ ಹೂಡಿ ಕಡೆಗೆ, ಚಿಕ್ಕಜಾಲ ಕೋಟೆ ಕ್ರಾಸ್‌ನಿಂದ ನಗರದ ಕಡೆಗೆ, ಹೆಬ್ಬಾಳ ವೃತ್ತದಿಂದ ವೀರಣ್ಣಪಾಳ್ಯ ಕಡೆಗೆ,- ಬೆನ್ನಿಗಾನಹಳ್ಳಿ ರೈಲ್ವೆ ಸೇತುವೆಯಿಂದ ನಗರದ ಕಡೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ವೀರಸಂದ್ರ ಗೇಟ್ ಬಳಿ ನೀರು ನಿಂತಿರುವುದರಿಂದ ಹೊಸೂರು ರಸ್ತೆ ಕಡೆಗೆ ವಾಹನಗಳು ಸಾಗುವುದೇ ಕಷ್ಟವಾಯಿತು. ಯಲಹಂಕದ ಶೇಷಾದ್ರಿಪುರಂ ಕಾಲೇಜು ಬಳಿ ನೀರು ನಿಂತಿರುವುದರಿಂದ ದೊಡ್ಡಬಳ್ಳಾಪುರ ರಸ್ತೆ ಕಡೆಗೆ ಸಂಚರಿಸುವ ವಾಹನಗಳು ಪರದಾಡುವಂತಾಯಿತು.


ಮೆಟ್ರೋ ಸ್ಥಗಿತಗೊಂಡಿದ್ದರಿಂದ ಜನರು ಬಸ್ ಮತ್ತು ಆಟೊಗಳಿಗಾಗಿ ಎಂ.ಜಿ.ರಸ್ತೆಯಲ್ಲಿ ಕಾದು ನಿಂತಿದ್ದರು —ಪ್ರಜಾವಾಣಿ ಚಿತ್ರ


ಹೆಬ್ಬಾಳದಲ್ಲಿ ಮಳೆ ನೀರಿನಿಂದ ಕಾಲುವೆಯಂತಾದ ರಸ್ತೆಯಲ್ಲೇ ವಾಹನ ಸಾಗಿದವು


ಮಾಗಡಿ ರಸ್ತೆಯ ಮೆಟ್ರೊ ನಿಲ್ದಾಣದ ಬಳಿ ಮರ ಬಿದ್ದಿದ್ದರಿಂದ ಆಟೊ ಜಖಂಗೊಂಡಿದ್ದು, ಚಾಲಕ ಜೀವಾಪಾಯದಿಂದ ಪಾರಾಗಿದ್ದಾರೆ


ಲಾಲ್‌ಬಾಗ್ ಬಳಿ ರಸ್ತೆ ಮೇಲೆ ಮರ ಬಿದ್ದಿದೆ

ಆಟೊಗಳ ಮೇಲೆ ಬಿದ್ದ ಮರ

ಬಸವೇಶ್ವರ ನಗರ 8ನೇ ಅಡ್ಡರಸ್ತೆಯಲ್ಲಿ ಆಟೊ ಮೇಲೆ ಮರ ಬಿದ್ದಿದ್ದರಿಂದ ಚಾಲಕ ಗಾಯಗೊಂಡಿದ್ದಾರೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮರ ಬಿದ್ದಿದ್ದರಿಂದ ರಸ್ತೆ ಬಂದ್ ಆಗಿ, ವಾಹನ ಸಂಚಾರಕ್ಕೆ ತೊಡಕು ಉಂಟಾಯಿತು.

ಕೋರಮಂಗಲದಲ್ಲಿ ಆಟೊ ಮತ್ತು ವಿದ್ಯುತ್ ಕಂಬದ ಮೇಲೆ ಮರ ಮುರಿದು ಬಿದ್ದಿದ್ದು, ಚಾಲಕ ಅಪಾಯದಿಂದ ಪಾರಾಗಿದ್ದಾರೆ. ಮಾಗಡಿ ರಸ್ತೆಯಲ್ಲಿ ಮರ ಬಿದ್ದಿದ್ದು, ಕೂದಲೆಳೆ ಅಂತರದಲ್ಲಿ ಆಟೊ ಚಾಲಕ ಪಾರಾಗಿದ್ದಾರೆ. ಕೈಗೆ ಗಾಯಗಳಾಗಿವೆ.

ಹೆಚ್ಚು ಮಳೆಯಾದ ಪ್ರದೇಶ	ಸೆಂ.ಮೀ.
ಹೊರಮಾವು	7.1
ವಿದ್ಯಾಪೀಠ	5.3
ಕೊಡಿಗೆಹಳ್ಳಿ	4.6
ಕಾಟನ್‌ಪೇಟೆ	3.9
ದಯಾನಂದನಗರ	3.9
ಪೀಣ್ಯ ಕೈಗಾರಿಕಾ ಪ್ರದೇಶ	3.7
ಜಕ್ಕೂರು	3.6
ನಾಗಪುರ	3.3
ಬೊಮ್ಮನಹಳ್ಳಿ	3.0
ಬಿ.ಟಿ.ಎಂ.ಲೇಔಟ್	3.0
ಮಾರುತಿಮಂದಿರ	3.0
ಚೌಡೇಶ್ವರಿ ವಾರ್ಡ್	2.8
ಯಲಹಂಕ	2.4
ಉತ್ತರಹಳ್ಳಿ	2.3
ಸಂಪಂಗಿರಾಮನಗರ	2.1
ನಾಯಂಡಹಳ್ಳಿ	2.0

ಪ್ರಯಾಣ ಮುಂದುವರಿಸಲು ಪರದಾಡಿದ ಪ್ರಯಾಣಿಕರು

ಹಳಿಗೆ ಬಿದ್ದ ಮರದ ಕೊಂಬೆ: ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಟ್ರಿನಿಟಿ ನಿಲ್ದಾಣದ ಬಳಿ ಭಾನುವಾರ ಮಳೆಯಿಂದಾಗಿ ಹಳಿಗೆ ಮರದ ಕೊಂಬೆ ಮುರಿದು ಬಿದ್ದಿದೆ. ಇದರಿಂದ ಮೆಟ್ರೊ ರೈಲು ಸಂಚಾರ ವ್ಯತ್ಯಯಗೊಂಡಿತು.

ಟ್ರಿನಿಟಿ ನಿಲ್ದಾಣ–ಎಂ.ಜಿ. ರಸ್ತೆ ನಡುವೆ ಹಳಿಗಳ ಮೇಲೆ ಭಾನುವಾರ ರಾತ್ರಿ 7.25ರ ಹೊತ್ತಿಗೆ ಮರದ ಕೊಂಬೆ ಮುರಿದು ಬಿತ್ತು. ಇದರಿಂದ ಈ ಮಾರ್ಗದಲ್ಲಿ ಸುಮಾರು 20 ನಿಮಿಷ ಮೆಟ್ರೊ ಸಂಚಾರ ಸ್ಥಗಿತಗೊಂಡಿತು.

ಬಳಿಕ, ಇಂದಿರಾನಗರ ಮೆಟ್ರೊ ನಿಲ್ದಾಣದಿಂದ ವೈಟ್‌ಫೀಲ್ಡ್ ಕಡೆಗೆ ಹಾಗೂ ಎಂ.ಜಿ. ರಸ್ತೆಯಿಂದ ಚಲ್ಲಘಟ್ಟ ಕಡೆಗೆ ಮೆಟ್ರೊ ಕಾರ್ಯಾಚರಣೆ ಆರಂಭವಾಯಿತು. ಇಂದಿರಾನಗರದಿಂದ ಎಂ.ಜಿ. ರಸ್ತೆವರೆಗೆ ಮೆಟ್ರೊ ರೈಲು ಇಲ್ಲದೇ ಪ್ರಯಾಣಿಕರು ಪರದಾಡುವಂತಾಯಿತು. ಮೆಟ್ರೊ ನಿಲ್ದಾಣದಿಂದ ಹೊರಬಂದ ಪ್ರಯಾಣಿಕರಿಗೆ ಸರಿಯಾದ ಸಮಯಕ್ಕೆ ಬಸ್ ಸಿಗದೇ ರಸ್ತೆ ಬದಿಯಲ್ಲಿ ಕಾಯುವಂತಾಯಿತು.

'ಮೆಜೆಸ್ಟಿಕ್‌ನಿಂದ ವೈಟ್‌ಫೀಲ್ಡ್‌ಗೆ ಮೆಟ್ರೊದಲ್ಲಿ ಬಂದಿದ್ದು, ಎಂ.ಜಿ. ರಸ್ತೆಯ ನಿಲ್ದಾಣದಲ್ಲಿ ಇಳಿಸಿದ್ದಾರೆ. ಇಲ್ಲಿಂದ ಮುಂದೆ ಮೆಟ್ರೊ ರೈಲು ಸಂಚಾರ ಇಲ್ಲದ ಕಾರಣ ಕೆಳಗೆ ರಸ್ತೆಗೆ ಬಂದರೆ ಬಸ್‌ಗಳೇ ಇಲ್ಲ. ಇಂದಿರಾನಗರದವರೆಗೆ ಹೋದರೆ ಅಲ್ಲಿಂದ ಮುಂದೆ ರೈಲಿದೆ. ಅಲ್ಲಿವರೆಗೆ ಹೋಗುವುದೇ ಕಷ್ಟವಾಗಿದೆ' ಎಂದು ಪ್ರಯಾಣಿಕ ಸುರೇಶ್ ಅಸಹಾಯಕತೆ ತೋಡಿಕೊಂಡರು.

ಮೆಟ್ರೊ ನೇರಳೆ ಮಾರ್ಗದಲ್ಲಿ ಹಳಿಗಳ ಮೇಲೆ ಮರದ ಕೊಂಬೆ ಬಿದ್ದು, ಎಂ.ಜಿ ರಸ್ತೆಯಿಂದ ವೈಟ್ ಫೀಲ್ಡ್ ಕಡೆಗೆ ಮೆಟ್ರೊ ಸಂಚಾರ ಸ್ಥಗಿತಗೊಳಿಸಿದ್ದ ಹಿನ್ನೆಲೆಯಲ್ಲಿ, ಎಂ.ಜಿ.ರಸ್ತೆಯ ಎರಡೂ ಬದಿಯ ಮೆಟ್ರೊ ನಿಲ್ದಾಣಗಳು ಜನ ದಟ್ಟಣೆಯಿಂದ ತುಂಬಿತ್ತು.

ವೈಟ್‌ಫೀಲ್ಡ್ ಕಡೆಗೆ ಹೋಗುವ ಪ್ರಯಾಣಿಕರು ಎಂ.ಜಿ.ರಸ್ತೆಯಲ್ಲಿ ಬಸ್‌ಗಳಿಗೆ ಕಾಯುತ್ತಿದ್ದರು. ಬಸ್ ಸಂಚಾರ ವಿರಳವಾದ ಕಾರಣ, ಬಹುತೇಕರು ಆಟೊ, ಟ್ಯಾಕ್ಸಿಗಳನ್ನು ಬುಕ್ ಮಾಡಿ ರಸ್ತೆ ಬದಿ ಕಾಯುತ್ತಿದ್ದರು. ಹೀಗಾಗಿ ರಸ್ತೆ ಬದಿಯಲ್ಲೂ ಜನದಟ್ಟಣೆ ಹೆಚ್ಚಾಯಿತು.

'ಇಂದಿರಾ ನಗರಕ್ಕೆ ಹೋಗಲು ಆಟೊದವರು ದುಬಾರಿ ಹಣ ಕೇಳ್ತಿದ್ದಾರೆ' ಎಂದು ಪ್ರಯಾಣಿಕರೊಬ್ಬರು ಬೇಸರ ವ್ಯಕ್ತಪಡಿಸಿದರು.

ವಾಹನಗಳು ವಿಳಂಬವಾದ ಕಾರಣ ಮೆಟ್ರೊ ನಿಲ್ದಾಣದೊಳಗೆ ಹಾಗೂ ಆಸುಪಾಸಿನಲ್ಲಿದ್ದ ಹೋಟೆಲ್‌ಗಳಲ್ಲಿ ಪ್ರಯಾಣಿಕರು ಆಹಾರ ಸೇವಿಸಿದರು. ಕೆಲವರು ಚರ್ಚ್ ಸ್ಟ್ರೀಟ್ ಭಾಗದ ನಿಲ್ದಾಣದ ಒಳಗೆ ನೆಲದಮಲೆ ಕುಳಿತು ವಾಹನಗಳ ಬರುವಿಕೆಗಾಗಿ ಕಾದರು.


ಟ್ರಿನಿಟಿ ಮೆಟ್ರೊ ನಿಲ್ದಾಣದ ಬಳಿ ಮೆಟ್ರೊ ಹಳಿ ಮೇಲೆ ಮರ ಉರುಳಿರುವುದು —ಪ್ರಜಾವಾಣಿ ಚಿತ್ರ

ರಾಮನಗರ ಸೇರಿದಂತೆ ವಿವಿಧೆಡೆ ಧಾರಾಕಾರ ಮಳೆ

ಮಳೆ ಅಬ್ಬರ; ಸರ್ವೀಸ್ ರಸ್ತೆ ಜಲಾವೃತ

ಪ್ರಜಾವಾಣಿ ವಾರ್ತೆ

ರಾಮನಗರ: ನಗರದಲ್ಲಿ ಭಾನುವಾರ ರಾತ್ರಿಯಿಡೀ ಧಾರಾಕಾರ ಮಳೆ ಸುರಿಯಿತು. ಮಳೆ ಅಬ್ಬರಕ್ಕೆ ನಗರದ ಹೊರವಲಯದ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕೆಲವೆಡೆ ರಸ್ತೆಯಲ್ಲಿ ನೀರು ಸಂಗ್ರಹಗೊಂಡಿದ್ದರಿಂದ ಕಿಲೋಮೀಟರ್ ನಷ್ಟು ದೂರ ವಾಹನಗಳ ದಟ್ಟಣೆ ಕಂಡುಬಂತು. ಇದರಿಂದಾಗಿ ವಾಹನ ಸವಾರರು ತೊಂದರೆ ಅನುಭವಿಸಿದರು.

ಸಂಜೆ 6ರ ಸುಮಾರಿಗೆ ಭಾರಿ ಗಾಳಿಯೊಂದಿಗೆ ಶುರುವಾದ ಮಳೆ ಸತತ ಎರಡು ತಾಸು ಬಿಡದೆ ಸುರಿಯಿತು. ಇದರಿಂದಾಗಿ ಸಂಗಬಸವನದೊಡ್ಡಿ ಬಳಿಯ ಹೆದ್ದಾರಿಯ ಸೇತುವೆ ಸೇರಿದಂತೆ ತಗ್ಗು ಪ್ರದೇಶಗಳಲ್ಲಿ ನೀರು ನಿಂತಿತು. ಕೆಳ ಸೇತುವೆಗಳ ಬಳಿಯೂ ನೀರು ಸಂಗ್ರಹಗೊಂಡಿತು. ಇದರಿಂದಾಗಿ ವಾಹನಗಳು ಸಾಲುಗಟ್ಟಿ ನಿಂತವು. ದ್ವಿಚಕ್ರ ವಾಹನಗಳ ಸವಾರರು ಅತ್ತ ಮಳೆಯಿಂದ ತಪ್ಪಿಸಿಕೊಳ್ಳಲು ಆಗದೆ, ಇತ್ತ ಬೇಗನೇ ಹೋಗಲು ಆಗದೆ ಪರದಾಡಿದರು.


ವಿಷಯ ತಿಳಿದು ಸ್ಥಳಕ್ಕೆ ಬಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕಾರ್ಮಿಕರನ್ನು ಕರೆಸಿದರು. ವಿವಿಧೆಡೆ ಸಂಗ್ರಹಗೊಂಡಿದ್ದ ನೀರು, ರಸ್ತೆ ಪಕ್ಕ ಸರಾಗವಾಗಿ ಹರಿದು ಹೋಗುವಂತೆ ಮಾಡಿದರು. ಇದರಿಂದಾಗಿ, ಸವಾರರು ಮಳೆ ಲೆಕ್ಕಿಸದೆ ಕೆಲ ಹೊತ್ತು ರಸ್ತೆಯಲ್ಲೇ ಕಳೆಯಬೇಕಾಯಿತು.

'ಮಳೆ ನೀರು ಹೆದ್ದಾರಿ ಮತ್ತು ಸರ್ವೀಸ್ ರಸ್ತೆಯ ಪಕ್ಕದಲ್ಲಿರುವ ಚರಂಡಿಗಳಿಗೆ ಸರಾಗವಾಗಿ ಹರಿದು ಹೋಗಬೇಕು. ಆದರೆ, ಕೆಲವೆಡೆ ನೀರು ಹರಿದು ಹೋಗುವ ತೂತುಗಳಲ್ಲಿ ಕಸ ಕಟ್ಟಿಕೊಂಡಿರುವುದರಿಂದ ನೀರು ಸಂಗ್ರಹಗೊಂಡಿತು. ಕೆಲವೆಡೆ ತೀರಾ ತಗ್ಗು ಪ್ರದೇಶವಿರುವುದರಿಂದ ಎಲ್ಲಾ ನೀರು ಅಲ್ಲಿಗೇ ಬಂದು ಸೇರಿಕೊಂಡಿತು. ಇದರಿಂದಾಗಿ ಕೆಲವೆಡೆ ರಸ್ತೆ ಜಲಾವೃತವಾಯಿತು' ಎಂದು ಬೈಕ್ ಸವಾರರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.


ರಾಮನಗರದ ರೈಲು ನಿಲ್ದಾಣ ಬಳಿಯ ರೈಲ್ವೆ ಕೆಳ ಸೇತುವೆಯಲ್ಲಿ ಸಂಗ್ರಹಗೊಂಡಿದ್ದ ಮಳೆ ನೀರಿನಲ್ಲೇ ವಾಹನಗಳು ಸಂಚರಿಸಿದವು

ಟೆರಿಟೋರಿಯಲ್ ಆರ್ಮಿಗೆ ಭವ್ಯಾ ನೇಮಕ

ಪ್ರಜಾವಾಣಿ ವಾರ್ತೆ



ಭವ್ಯಾ ನರಸಿಂಹಮೂರ್ತಿ

ಬೆಂಗಳೂರು: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಭವ್ಯಾ ನರಸಿಂಹಮೂರ್ತಿ ಅವರು ಭಾರತೀಯ ಸೇನೆಯ ಮೀಸಲು ಘಟಕವಾದ ಪ್ರಾದೇಶಿಕ ಸೇನೆಗೆ (ಟೆರಿಟೋರಿಯಲ್ ಆರ್ಮಿ) ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ.

ಈ ಬಗ್ಗೆ ತನ್ನ 'ಎಕ್ಸ್' ತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ನಾನು 2022ನೇ ಸಾಲಿನಲ್ಲಿ ನಡೆದ ಟಿಎ ಪರೀಕ್ಷೆಯಲ್ಲಿ ಆಯ್ಕೆಯಾಗಿ ಪ್ರಾದೇಶಿಕ ಸೇನೆಯಲ್ಲಿ ಕಮಿಷನ್ಡ್ ಆಫೀಸರ್ ಆಗಿ ನಿಯೋಜನೆಗೊಂಡ ಏಕೈಕ ಮತ್ತು ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಮೊದಲ ಮಹಿಳಾ ಅಧಿಕಾರಿಯಾಗಿದ್ದೇನೆ' ಎಂದಿದ್ದಾರೆ.

ಟೆರಿಟೋರಿಯಲ್ ಆರ್ಮಿಯಲ್ಲಿ ಇಲಾಖೆ (ಡಿಪಾರ್ಟ್‌ಮೆಂಟಲ್) ಮತ್ತು ಇಲಾಖೇತರ (ನಾನ್-ಡಿಪಾರ್ಟ್‌ಮೆಂಟಲ್) ಎಂಬ ಎರಡು ವಿಭಾಗಗಳಿವೆ. ಡಿಪಾರ್ಟ್‌ಮೆಂಟಲ್‌ನಲ್ಲಿ ಭಾರತೀಯ ನಾಗರಿಕ ಸೇವಾ ಅಧಿಕಾರಿಗಳು, ಸಿಬ್ಬಂದಿ ಹಾಗೂ ರೈಲ್ವೆಯ ನಿವೃತ್ತ ಉದ್ಯೋಗಿಗಳು ಸೇರಿಕೊಳ್ಳಬಹುದು. ನಾನ್ ಡಿಪಾರ್ಟಮೆಂಟಲ್‌ನಲ್ಲಿ ಯಾವುದೇ ಭಾರತೀಯ ನಾಗರಿಕರು ಸೇರಿಕೊಳ್ಳಬಹುದು.

ಭವ್ಯಾ ಅವರು ನಾನ್ ಡಿಪಾರ್ಟಮೆಂಟಲ್ ವಿಭಾಗದಿಂದ ನೇಮಕವಾಗಿದ್ದಾರೆ. ಟೆರಿಟೋರಿಯಲ್ ಆರ್ಮಿ ಸೇರುವವರು ಭಾರತೀಯ ಸೇನೆಗೆ ಅಗತ್ಯ ಬಿದ್ದಾಗ ಸ್ವಯಂಸೇವಕರ ರೀತಿ ಕೆಲಸ ಮಾಡಬೇಕಾಗುತ್ತದೆ. ಅದರಲ್ಲೂ ಕಮಿಷನ್ಡ್ ಹಾಗೂ ನಾನ್ ಕಮಿಷನ್ಡ್ ಎಂಬ ಎರಡು ಹಂತಗಳಿವೆ. ಕಮಿಷನ್ಡ್ ಹುದ್ದೆಗಳು ಅಧಿಕಾರಿ ಹಂತದ ಹುದ್ದೆಗಳಾಗಿದ್ದರೆ, ನಾನ್ ಕಮಿಷನ್ಡ್ ಇತರ ಸೇವಾ ಸಿಬ್ಬಂದಿ ಹಂತದ ಹುದ್ದೆಗಳಾಗಿವೆ. ದೇಶದಾದ್ಯಂತ ಐದು ವಲಯಗಳನ್ನು ಹೊಂದಿರುವ ಈ ಸೇನೆಯಲ್ಲಿ 40 ಸಾವಿರಕ್ಕೂ ಹೆಚ್ಚು ಸ್ವಯಂಸೇವಕರಿದ್ದಾರೆ. ಈ ಸೇನೆ ಸೇರುವವರು ವರ್ಷದಲ್ಲಿ ಕನಿಷ್ಠ ಎರಡು ತಿಂಗಳು ಸ್ವಯಂಸೇವಕರಾಗಿ ಸೇನೆಯ ಜೊತೆ ಕೆಲಸ ಮಾಡಬಹುದು.

ಕ್ರಿಕೆಟಿಗ ಎಂ.ಎಸ್. ಧೋನಿ, ಕೇಂದ್ರ ಸಚಿವ ಅನುರಾಗ್ ಠಾಕೂರ್, ಐಎಎಸ್ ಅಧಿಕಾರಿ ಕ್ಯಾಪ್ಟನ್ ಮಣಿವಣ್ಣನ್ ಸೇರಿದಂತೆ ಹಲವರು ಟೆರಿಟೋರಿಯಲ್ ಆರ್ಮಿಯ ಸದಸ್ಯರಾಗಿದ್ದಾರೆ.

ಜೂನ್ 4ಕ್ಕೆ ಮತ ಎಣಿಕೆ: ಕೇಂದ್ರಗಳಿಗೆ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಭೇಟಿ

ಮತ ಎಣಿಕೆ ಕೇಂದ್ರಗಳಲ್ಲಿ ಭರದ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯ ಮತ ಎಣಿಕೆ ಕಾರ್ಯ ಜೂನ್ 4ರಂದು ನಡೆಯಲಿದ್ದು, ನಗರದ ಮೂರು ಕೇಂದ್ರಗಳಲ್ಲಿ ಎಣಿಕೆಗೆ ಎಲ್ಲ ಸಿದ್ಧತೆಗಳನ್ನು ಅಧಿಕಾರಿಗಳು ಮಾಡುತ್ತಿದ್ದಾರೆ.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಮಲ್ಯ ರಸ್ತೆ ಸೇಂಟ್ ಜೋಸೆಫ್ ಕಾಲೇಜು, ಜಯನಗರದ ಎಸ್.ಎಸ್.ಎಂ.ಆರ್.ವಿ ಕಾಲೇಜು, ವಸಂತನಗರದಲ್ಲಿರುವ ಮೌಂಟ್ ಕಾರ್ಮೆಲ್ ಕಾಲೇಜುಗಳಲ್ಲಿ ಎಣಿಕೆ ಕಾರ್ಯ ನಡೆಯಲಿದೆ.

ಬೆಳಿಗ್ಗೆ 8ಕ್ಕೆ ಮತ ಎಣಿಕೆ ಆರಂಭಗೊಳ್ಳಲಿದೆ. ಪ್ರತಿ ಟೇಬಲ್‌ಗೆ ಸೂಕ್ಷ್ಮ ವೀಕ್ಷಕ, ಮತ ಎಣಿಕೆ ಮೇಲ್ವಿಚಾರಕರು ಮತ್ತು ಮತ ಎಣಿಕೆ ಸಹಾಯಕರನ್ನು ನಿಯೋಜನೆ ಮಾಡಲಾಗಿದೆ. ಒಂದು ಕೊಠಡಿಯಲ್ಲಿ 14 ಟೇಬಲ್‌ಗಳನ್ನು ಹಾಕಲು ಅವಕಾಶವಿದ್ದು, ದೊಡ್ಡ ಕೊಠಡಿಗಳಿದ್ದರೆ ಹೆಚ್ಚಿನ ಟೇಬಲ್‌ಗಳನ್ನು ಹಾಕಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸುದ್ದಿಗಾರರಿಗೆ ಭಾನುವಾರ ಮಾಹಿತಿ ನೀಡಿದರು.

ಮತ ಎಣಿಕೆ ಸಿಬ್ಬಂದಿ ಹಾಗೂ ಅಭ್ಯರ್ಥಿಗಳ ಮತ ಎಣಿಕೆ ಏಜೆಂಟ್‌ಗಳನ್ನು ಬೆಳಿಗ್ಗೆ 6 ಗಂಟೆಗೆ ಬರಲು ತಿಳಿಸಲಾಗಿದೆ. ಗುರುತಿನ ಚೀಟಿ ಇರುವವರಿಗೆ ಮಾತ್ರ ಮತ ಎಣಿಕೆ ಕೇಂದ್ರದ ಒಳಗೆ ಪ್ರವೇಶವಿರಲಿದೆ ಎಂದರು.

ಅಂಚೆ ಮತದಾನವು ಈ ಬಾರಿ ಹೆಚ್ಚಾಗಿದೆ. ಇದರ ಎಣಿಕೆ ಕಾರ್ಯ ನಿರಂತರವಾಗಿ ನಡೆಯಲಿದ್ದು, ಕೊನೆಯ ಸುತ್ತಿಗೆ ಮುಂಚಿತವಾಗಿ ಅಂಚೆ ಮತದಾನದ ಎಣಿಕೆಯನ್ನು ಪೂರ್ಣಗೊಳಿಸಲಾಗುವುದು. ಪ್ರತಿ ಕೊಠಡಿಯಲ್ಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಅದರ ಜೊತೆಗೆ ಚುನಾವಣಾಧಿಕಾರಿ ನಿರ್ದೇಶನದ ಮೇರೆಗೆ ಇನ್ನಿತರ ಕಡೆಗಳಲ್ಲಿಯೂ ಸಿಸಿಟಿವಿ ಕ್ಯಾಮೆರಾ ಹಾಗೂ ವಿಡಿಯೊಗ್ರಫಿ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ವಿವರಿಸಿದರು.

ಮತ ಎಣಿಕೆ ಕೇಂದ್ರದಲ್ಲಿ ವೀಕ್ಷಕರಿಗಾಗಿ ಒಂದು ಕೊಠಡಿ, ಚುನಾವಣಾಧಿಕಾರಿಗಾಗಿ ಒಂದು ಕೊಠಡಿ ಇರಲಿದೆ. ಮಾಧ್ಯಮ ಕೇಂದ್ರ ಕೂಡ ಇರಲಿದ್ದು, ಇಲ್ಲಿ ಮಾತ್ರ ಮಾಧ್ಯಮದವರು ಮೊಬೈಲ್ ಬಳಸಬಹುದು. ಹೊರಗಡೆ ಮೊಬೈಲ್ ಬಳಸಲು ಅವಕಾಶವಿರುವುದಿಲ್ಲ. ಮತ ಎಣಿಕೆ ಕಾರ್ಯದಲ್ಲಿ ಕಾರ್ಯ ನಿರ್ವಹಿಸುವ ಯಾವುದೇ ಸಿಬ್ಬಂದಿ ಎಣಿಕೆ ಕೇಂದ್ರದಲ್ಲಿ ಮೊಬೈಲ್/ಬ್ಯಾಗ್ ತರುವ ಹಾಗಿಲ್ಲ. ಏಜೆಂಟ್‌ಗಳು ಕೂಡ ತರುವಂತಿಲ್ಲ ಎಂದು ತಿಳಿಸಿದರು.

ತುಷಾರ್ ಗಿರಿನಾಥ್ ಅವರು ಮತ ಎಣಿಕೆ ಕೇಂದ್ರಗಳನ್ನು ಪರಿಶೀಲಿಸಿದರು. ಚುನಾವಣಾಧಿಕಾರಿಗಳಾದ ಕೆ. ಹರೀಶ್ ಕುಮಾರ್, ದಯಾನಂದ್, ವಿನೋತ್ ಪ್ರಿಯಾ ಉಪಸ್ಥಿತರಿದ್ದರು.



ಲೋಕಸಭಾ ಚುನಾವಣೆಯ ಮತ ಎಣಿಕೆಗೆ ಕೇಂದ್ರಗಳನ್ನು ಸಿಬ್ಬಂದಿ ಸಿದ್ಧಗೊಳಿಸಿದರು

ಲೋಕಸಭಾ ಕ್ಷೇತ್ರಗಳ ಮತ ಎಣಿಕೆ ಕೇಂದ್ರಗಳ ವಿವರ

ಬೆಂಗಳೂರು ಕೇಂದ್ರ	
ಮತ ಎಣಿಕೆ ಕೇಂದ್ರ	ಮೌಂಟ್ ಕಾರ್ಮೆಲ್ ಕಾಲೇಜು
ವಿಧಾನಸಭಾ ಕ್ಷೇತ್ರಗಳ ಸಂಖ್ಯೆ	8
ಮತಗಟ್ಟೆಗಳ ಸಂಖ್ಯೆ	2125
ಮತ ಎಣಿಕೆ ಕೊಠಡಿಗಳ ಸಂಖ್ಯೆ	10
ಟೇಬಲ್‌ಗಳು	135
ಸಿಬ್ಬಂದಿ	416

ಬೆಂಗಳೂರು ಉತ್ತರ	
ಮತ ಎಣಿಕೆ ಕೇಂದ್ರ	ಸೇಂಟ್ ಜೋಸೆಫ್ ಕಾಲೇಜು
ವಿಧಾನಸಭಾ ಕ್ಷೇತ್ರಗಳ ಸಂಖ್ಯೆ	8
ಮತಗಟ್ಟೆಗಳ ಸಂಖ್ಯೆ	2911
ಮತ ಎಣಿಕೆ ಕೊಠಡಿಗಳ ಸಂಖ್ಯೆ	19
ಟೇಬಲ್‌ಗಳು	130
ಸಿಬ್ಬಂದಿ	390

ಬೆಂಗಳೂರು ದಕ್ಷಿಣ	
ಮತ ಎಣಿಕೆ ಕೇಂದ್ರ	ಎಸ್.ಎಸ್.ಎಂ.ಆರ್.ವಿ ಕಾಲೇಜು
ವಿಧಾನಸಭಾ ಕ್ಷೇತ್ರಗಳ ಸಂಖ್ಯೆ	8
ಮತಗಟ್ಟೆಗಳ ಸಂಖ್ಯೆ	2120
ಮತ ಎಣಿಕೆ ಕೊಠಡಿಗಳ ಸಂಖ್ಯೆ	9
ಟೇಬಲ್‌ಗಳು	118
ಸಿಬ್ಬಂದಿ	354



ಬೆಂಗಳೂರು ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಸರ್ಕಾರಿ ಕಲಾ ಕಾಲೇಜಿನಲ್ಲಿ ಇರುವ ಮಸ್ಟರಿಂಗ್ ಕೇಂದ್ರಕ್ಕೆ ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭೇಟಿ ನೀಡಿ, ಪರಿಶೀಲಿಸಿದರು.

ಪದವೀಧರ ಕ್ಷೇತ್ರದ ಮಸ್ಟರಿಂಗ್ ಕೇಂದ್ರದ ಪರಿಶೀಲನೆ

ಬೆಂಗಳೂರು: ಬೆಂಗಳೂರು ಪದವೀಧರ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿದಂತೆ ಜೂನ್ 3ರಂದು ಮತದಾನ ನಡೆಯಲಿದ್ದು, ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸರ್ಕಾರಿ ಕಲಾ ಕಾಲೇಜಿನಲ್ಲಿರುವ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಮಸ್ಟರಿಂಗ್ ಕೇಂದ್ರದಿಂದ ಬ್ಯಾಲೆಟ್ ಬಾಕ್ಸ್, ಬ್ಯಾಲೆಟ್ ಪೇಪರ್ ಸಹಿತ ಮತಗಟ್ಟೆ ಸಾಮಗ್ರಿಗಳನ್ನು ತೆಗೆದುಕೊಂಡು ನಿಯೋಜಿಸಲಾದ ವಾಹನಗಳ ಮೂಲಕ ಪೊಲೀಸ್ ಬಂದೋಬಸ್ತ್‌ನಲ್ಲಿ ಮತಗಟ್ಟೆ ಅಧಿಕಾರಿಗಳು, ಸಿಬ್ಬಂದಿ ಮತಗಟ್ಟೆಗಳಿಗೆ ತೆರಳಿದರು.

ಬಿಬಿಎಂಪಿ ವ್ಯಾಪ್ತಿಯ ಎಲ್ಲ 28 ವಿಧಾನಸಭಾ ಕ್ಷೇತ್ರಗಳಲ್ಲಿ 106 ಮತಗಟ್ಟೆಗಳಿದ್ದು, ಜೂನ್ 3ರಂದು ಬೆಳಿಗ್ಗೆ 7ಕ್ಕೆ ಅಣಕು ಮತದಾನ ನಡೆಯಲಿದೆ. ಬೆಳಿಗ್ಗೆ 8ರಿಂದ ಸಂಜೆ 4ರ ವರೆಗೆ ಮತದಾನ ನಡೆಯಲಿದೆ.

ಪರಿಶೀಲನೆಯ ವೇಳೆ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಜಿಲ್ಲಾ ಹೆಚ್ಚುವರಿ ಚುನಾವಣಾಧಿಕಾರಿಗಳಾದ ಕೆ. ಹರೀಶ್ ಕುಮಾರ್, ಸ್ನೇಹಲ್, ವಿನೋತ್ ಪ್ರಿಯಾ, ಚುನಾವಣಾ ವಿಭಾಗದ ಸಹಾಯಕ ಆಯುಕ್ತ ರವಿ ಚಂದ್ರ ನಾಯ್ಕ್ ಉಪಸ್ಥಿತರಿದ್ದರು.

ಅಮೂಲ್ ಹಾಲಿನ ದರ ಲೀಟರ್‌ಗೆ ₹2 ಹೆಚ್ಚಳ

ನವದೆಹಲಿ (ಪಿಟಿಐ): ಗುಜರಾತ್ ಸಹಕಾರಿ ಹಾಲು ಮಾರಾಟ ಮಹಾ ಮಂಡಳವು (ಜಿಸಿಎಂಎಂಎಫ್) ದೇಶದಾದ್ಯಂತ ಸೋಮವಾರದಿಂದ ಜಾರಿಗೆ ಬರುವಂತೆ ಅಮೂಲ್ ಹಾಲಿನ ದರವನ್ನು ಪ್ರತಿ ಲೀಟರ್‌ಗೆ ₹2 ಹೆಚ್ಚಿಸಿದೆ.

ಹಿಂಸಾಚಾರ ಆತಂಕ: ಮತ ಕೇಂದ್ರದಲ್ಲಿ ಭದ್ರತೆಗೆ ಮನವಿ

ಪ್ರಜಾವಾಣಿ ವಾರ್ತೆ

ರಾಮನಗರ: ಲೋಕಸಭಾ ಚುನಾವಣೆಯಲ್ಲಿ ತೀವ್ರ ಪೈಪೋಟಿಗೆ ಸಾಕ್ಷಿಯಾಗಿರುವ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಮತ ಎಣಿಕೆ (ಜೂನ್ 4) ದಿನದಂದು ಹಿಂಸಾಚಾರ ಸಂಭವಿಸುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿರುವ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್ ಅವರು ಎಣಿಕೆ ಕೇಂದ್ರದಲ್ಲಿ ಹೆಚ್ಚಿನ ಭದ್ರತೆ ಒದಗಿಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ.

'ಕ್ಷೇತ್ರದಲ್ಲಿ ಚುನಾವಣೆಗೆ ಮುಂಚೆ ಮತ್ತು ನಂತರವೂ ಮತದಾರರನ್ನು ಬೆದರಿಸುವ ಘಟನೆಗಳು ಗಮನಕ್ಕೆ ಬಂದಿವೆ. ನನಗೆ ಬಂದಿರುವ ವಿಶ್ವಸನೀಯ ಮಾಹಿತಿ ಪ್ರಕಾರ, ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರು ಸೋಲುವ ಸಾಧ್ಯತೆ ಕಂಡುಬಂದರೆ ಹಿಂಸಾಚಾರದ ಜೊತೆಗೆ, ಎಣಿಕೆ ಪ್ರಕ್ರಿಯೆಗೆ ಅಡ್ಡಿಪಡಿಸುವ ಪ್ರಯತ್ನಗಳು ನಡೆಯಲಿವೆ' ಎಂದು ಜೂನ್ 1ರಂದು ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಸುರೇಶ್ ಅವರ ಸಹೋದರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ವಿಷಯದಲ್ಲಿ ಪ್ರಭಾವ ಬೀರುವ ಜೊತೆಗೆ, ಸರ್ಕಾರಿ ವ್ಯವಸ್ಥೆಯೇ ಅಂತಹ ಕೃತ್ಯಕ್ಕೆ ಬಳಕೆಯಾಗುವ ಸಾಧ್ಯತೆ ಇದೆ. ಹಾಗಾಗಿ, ಎಣಿಕೆ ಕಾರ್ಯವು ಶಾಂತಿಯುತವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಕಠಿಣ ಭದ್ರತಾ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ. ಎಣಿಕೆ ಕೇಂದ್ರದ ಬಳಿ ಪೊಲೀಸರು ಮತ್ತು ಹೆಚ್ಚುವರಿ ಅರೆ ಸೇನಾಪಡೆಗಳನ್ನು ನಿಯೋಜಿಸಬೇಕು ಎಂದು ಒತ್ತಾಯಿಸಿದ್ದಾರೆ.

ನಿವೃತ್ತರಿಗೆ ₹7,500 ಕನಿಷ್ಠ ಪಿಂಚಣಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆ ಆಗ್ರಹಿಸಿದೆ.

ಭಾನುವಾರ ನಡೆದ ಇಪಿಎಸ್ ಪಿಂಚಣಿದಾರರ 77ನೇ ಮಾಸಿಕ ಸಭೆಯಲ್ಲಿ ಸಂಘದ ಕಾರ್ಯಾಧ್ಯಕ್ಷ ನಂಜುಂಡೇಗೌಡ, 'ಇಪಿಎಸ್ ನಿವೃತ್ತರ ಪರವಾಗಿ 2022ರ ನವೆಂಬರ್ 4ರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಇಪಿಎಫ್‌ಒ ಅಧಿಕಾರಿಗಳು ಇದುವರೆಗೂ ಅನುಷ್ಠಾನಗೊಳಿಸಿಲ್ಲ. ವಿಳಂಬ ನೀತಿ ಅನುಸರಿಸುತ್ತಿರುವ ಅಧಿಕಾರಿಗಳ ನಡೆಯನ್ನು ಖಂಡಿಸಿದರು. ಮುಂದಿನ ದಿನಗಳಲ್ಲಿ ನಮ್ಮ ಹೋರಾಟವನ್ನು ತೀವ್ರಗೊಳಿಸುವ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ತಿಳಿಸಿದರು.

ರಾಷ್ಟ್ರೀಯ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಜಿಎಸ್‌ಎಂ ಸ್ವಾಮಿ, 'ದೇಶದ ಅಭಿವೃದ್ಧಿಯಲ್ಲಿ ನಿವೃತ್ತರು ಸಮರ್ಪಣಾ ಭಾವದಿಂದ ಕೆಲಸ ಮಾಡಿದ್ದಾರೆ. ಕೇಂದ್ರ ಸರ್ಕಾರ ನಮ್ಮೆಲ್ಲರ ಬೇಡಿಕೆಗಳಿಗೆ ಸ್ಪಂದಿಸುವ ಮೂಲಕ ಈಡೇರಿಸಬೇಕಾಗಿತ್ತು. ಆದರೆ, ಅದು ಸಾಧ್ಯವಾಗಿಲ್ಲ. ಹೊಸ ಸರ್ಕಾರ ರಚನೆಯಾದ ನಂತರ ರಾಜ್ಯದ ಪ್ರತಿಯೊಬ್ಬ ಸಂಸದನನ್ನು ಭೇಟಿಯಾಗಿ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಲಾಗುವುದು' ಎಂದರು.

ಸಂಘದ ವೀರ ಕುಮಾರ್ ಗಡದ್, 'ಜೂನ್ 6ರಂದು ರಾಷ್ಟ್ರೀಯ ಸಂಘರ್ಷ ಸಮಿತಿ ಸಂಸ್ಥಾಪನಾ ದಿನವನ್ನು ದೇಶದಾದ್ಯಂತ ಆಚರಿಸಲಾಗುವುದು. ಈ ಬಗ್ಗೆ ಕಾರ್ಯಕ್ರಮ ಪಟ್ಟಿಯನ್ನು ಸಂಘಟನೆಯ ನಿವೃತ್ತ ನೌಕರರಿಗೆ ನೀಡಲಾಗುವುದು' ಎಂದು ತಿಳಿಸಿದರು. ಸಂಘದ ಪದಾಧಿಕಾರಿಗಳಾದ ಡೋಲಪ್ಪನವರ, ನಾಗರಾಜು, ಮನೋಹರ್, ರುಕ್ಮೇಶ್ ಭಾಗವಹಿಸಿದ್ದರು.



ಲಾಲ್‌ಬಾಗ್‌ನಲ್ಲಿ ಭಾನುವಾರ ನಡೆದ ತಿಂಗಳ ಸಭೆಯಲ್ಲಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆ ಸದಸ್ಯರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಇಂಡಿಯನ್ ಗ್ರೀನ್ ಎನರ್ಜಿ ಎಕ್ಸ್‌ಪೊ: ಉದ್ಘಾಟನೆ: ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ಅತಿಥಿಗಳು: ಗೌರವ್ ಗುಪ್ತಾ, ಮಹಾಂತೇಶ ಬೀಳಗಿ, ಮನೋಜ್ ಕುಮಾರ್, ರುದ್ರಪ್ಪಯ್ಯ, ಬಾಲಕೃಷ್ಣ, ಸುರೇಂದ್ರ ಕುಮಾರ್ ಕೆ.ಆರ್., ರಮೇಶ್ ಶಿವಣ್ಣ, ಎ.ಸಿ. ಈಶ್ವರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ತುಮಕೂರು ರಸ್ತೆ, ಬೆಳಿಗ್ಗೆ 10.30

ವಿಶ್ವ 'ಮಲ್ಟಿಪಲ್ ಸ್ಕ್ಲೆರೋಸಿಸ್' ದಿನ–2024: ಆಯೋಜನೆ: ಮಲ್ಟಿಪಲ್ ಸ್ಕ್ಲೆರೋಸಿಸ್ ಸೊಸೈಟಿ ಆಫ್ ಇಂಡಿಯಾ, ಸ್ಥಳ: ಅಶ್ವಿನಿ ಹಾಲ್, ನಿಮ್ಹಾನ್ಸ್, ಮಧ್ಯಾಹ್ನ 2.30

ಅನಂತ ದತ್ತಾತ್ರೇಯ ಹರಿಹರ ಅವರಿಗೆ ಶ್ರದ್ಧಾಂಜಲಿ: ಆಯೋಜನೆ: ಅನಾಮಿಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಅರ್ಥಶಾಸ್ತ್ರಜ್ಞ ಟಿ.ಆರ್. ಚಂದ್ರಶೇಖರ್ ಹೇಳಿಕೆ

'ಶ್ರಮ, ಶ್ರಮಿಕರ ಮಹತ್ವ ತಿಳಿಸಿದ್ದು ಕಾರ್ಲ್‌ಮಾರ್ಕ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಡಿಮೆ ಮತ್ತು ದುಡಿಮೆಗಾರರ ಮಹತ್ವವನ್ನು ಜಗತ್ತಿಗೆ ತಿಳಿಸಿಕೊಟ್ಟಿದ್ದು ಕಾರ್ಲ್‌ಮಾರ್ಕ್ಸ್ ಎಂದು ಅರ್ಥಶಾಸ್ತ್ರಜ್ಞ ಟಿ.ಆರ್. ಚಂದ್ರಶೇಖರ್ ತಿಳಿಸಿದರು.

ಕ್ರಿಯಾ ಮಾಧ್ಯಮ ಮತ್ತು ನವಕರ್ನಾಟಕ ಪ್ರಕಾಶನ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ 'ಏಂಗೆಲ್ಸ್–200 ಮಾಲಿಕೆ ಸಮಾರೋಪ, 'ಬಂಡವಾಳ' ಸಂಪುಟ–2 ಕೃತಿ ಹಾಗೂ 'ಬಂಡವಾಳ ಸಂಪುಟ–ಪ್ರವೇಶಿಕೆ ಮತ್ತು ಗೈಡ್' ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದುಡಿಮೆಗಾರರ ಶೋಷಣೆ, ಅನ್ಯಾಯದ ಬಗ್ಗೆ ಸೈದ್ಧಾಂತಿಕವಾಗಿ ಮತ್ತು ವಿವರವಾಗಿ ಕಾರ್ಲ್‌ಮಾರ್ಕ್ಸ್ ತಿಳಿಸಿದ್ದಾರೆ. ಇವತ್ತಿನ ಅಸಹನೀಯ ಅಸಮಾನತೆಯನ್ನು ಅರ್ಥ ಮಾಡಿಕೊಳ್ಳಲು ಇದು ಸಹಕಾರಿಯಾಗಿದೆ ಎಂದು ವಿವರಿಸಿದರು.

'ನಮ್ಮ ದೇಶದಲ್ಲಿ 50 ಕೋಟಿ ಕಾರ್ಮಿಕರಿದ್ದಾರೆ. ಅದರಲ್ಲಿ ಸುಮಾರು 45 ಕೋಟಿ ಕಾರ್ಮಿಕರು ಅಸಂಘಟಿತ ವಲಯದಲ್ಲಿದ್ದಾರೆ. ಆದರೂ ಇಂದಿಗೂ ದುಡಿಮೆ ಮತ್ತು ದುಡಿಮೆಗಾರರ ಬಗ್ಗೆ ನಮ್ಮಲ್ಲಿ ಗೌರವವಿಲ್ಲ. ಬಡವರಿಗೆ ನೀಡುವ ಯೋಜನೆಗಳನ್ನು ಬಿಟ್ಟಿ ಎಂದು ಹೀಯಾಳಿಸಲಾಗುತ್ತಿದೆ. ಜಮೀನು, ನೀರು, ವಿದ್ಯುತ್‌ಗಳನ್ನು ಅತಿ ಕಡಿಮೆ ಬೆಲೆಗೆ ಪಡೆದು ಅನುಭವಿಸುತ್ತಿರುವ ಕಾರ್ಪೊರೇಟ್ ಕಂಪನಿಗಳು ನಿಜವಾಗಿ ಬಿಟ್ಟಿ ಪಡೆಯುತ್ತಿರುವುದು ಎಂಬುದು ಜನರಿಗೆ ಅರ್ಥವಾಗುತ್ತಿಲ್ಲ' ಎಂದು ವಿಷಾದಿಸಿದರು.

ಚಿಂತಕ ಜಿ.ರಾಮಕೃಷ್ಣ ಮಾತನಾಡಿ, 'ಕಾರ್ಲ್‌ಮಾರ್ಕ್ಸ್ ಅವರ ಆರ್ಥಿಕ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳದೇ ಪೂಜಿಸುವುದರಿಂದ ಪ್ರಯೋಜನವಿಲ್ಲ. ಬಂಡವಾಳ ವ್ಯವಸ್ಥೆ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಬಗೆಗಿನ ಕಾರ್ಲ್‌ಮಾರ್ಕ್ಸ್ ಅವರ ಚಿಂತನೆಗಳ ಬರಹಗಳನ್ನು ಫ್ರೆಡರಿಕ್ ಏಂಗೆಲ್ಸ್ ಸಂಪಾದನೆ ಮಾಡಿದ್ದರು. ಅದು ಕನ್ನಡಕ್ಕೆ ಅನುವಾದಗೊಂಡಿದ್ದು, ಎಲ್ಲರೂ ಅಧ್ಯಯನ ಮಾಡಬೇಕು' ಎಂದು ಸಲಹೆ ನೀಡಿದರು.

ಅಮೆರಿಕ ಸಹಿತ ಯಾವುದೇ ದೇಶದಲ್ಲಿ ಆರ್ಥಿಕ ಕುಸಿತ ಉಂಟಾದಾಗ ಕಾರ್ಲ್‌ಮಾರ್ಕ್ಸ್ ಪುಸ್ತಕಗಳಿಗೆ ಬೇಡಿಕೆ ಬರುತ್ತದೆ. ಆರ್ಥಿಕ ಸಂಕಷ್ಟಗಳಿಗೆ ಕಾರಣ ಮತ್ತು ಪರಿಹಾರ ಒದಗಿಸುವ ಚಿಂತನೆಗಳು ಈ ಕೃತಿಯಲ್ಲಿವೆ ಎಂದರು.

'ಇಂದಿನ ಬಂಡವಾಳಶಾಹಿಯನ್ನು ಅರ್ಥೈಸಲು ಬಂಡವಾಳದ ಓದು' ವಿಚಾರ ಸಂಕಿರಣದಲ್ಲಿ ಪ್ರೊ. ವೆಂಕಟೇಶ್ ಆತ್ರೇಯ ದಿಕ್ಸೂಚಿ ಭಾಷಣ ಮಾಡಿದರು. ಚಿಂತಕರಾದ ರಾಜೇಂದ್ರ ಚೆನ್ನಿ, ರತಿ ರಾವ್, ಕೆ.ಎನ್. ಉಮೇಶ್ ವಿಚಾರ ಮಂಡನೆ ಮಾಡಿದರು.

ಲೇಖಕರಾದ ಪಿ.ವಿ. ಕುಮಾರ್, ವಿ.ಎನ್. ಲಕ್ಷ್ಮೀನಾರಾಯಣ, ಕ್ರಿಯಾ ಮಾಧ್ಯಮ ಮತ್ತು ನವಕರ್ನಾಟಕ ಪ್ರಕಾಶನದ ಸಿದ್ದನಗೌಡ ಪಾಟೀಲ, ವಸಂತರಾಜ್ ಎನ್.ಕೆ., ವಿಮಲಾ ಕೆ.ಎಸ್. ಭಾಗವಹಿಸಿದ್ದರು.



ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಜಿ.ರಾಮಕೃಷ್ಣ ರವರು 'ಕಾರ್ಲ್ ಮಾರ್ಕ್ಸ್ ಬಂಡವಾಳ' ಸಂಪುಟ 1 ಮತ್ತು 2 ಪುಸ್ತಕವನ್ನು ಬಿಡುಗಡೆ ಮಾಡಿದರು. ಪಿ.ಎ. ಕುಮಾರ್, ವಿ. ಎನ್ ಲಕ್ಷ್ಮೀನಾರಾಯಣ, ಟಿ. ಆರ್ ಚಂದ್ರಶೇಖರ್, ಸಿದ್ದನಗೌಡ ಪಾಟೀಲ್ ಮತ್ತು ಎನ್‌ಕೆ.ವಸಂತರಾಜ ಪಾಲ್ಗೊಂಡಿದ್ದಾರೆ

'ದ್ಯಾಮಜ್ಜಿ ಪುರಾಣ'ಕ್ಕೆ ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ ಕಥಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಅಕ್ಷರ ಸಾಹಿತ್ಯ ವೇದಿಕೆಯಿಂದ ನೀಡಲಾಗುವ 2024ನೇ ಸಾಲಿನ ಡಾ.ಪ್ರಹ್ಲಾದ ಅಗಸನಕಟ್ಟೆ ವಿದ್ಯಾರ್ಥಿ ಕಥಾ ಪ್ರಶಸ್ತಿಯು ಸಂಜಯ್ ಚಿತ್ರದುರ್ಗ ಅವರ 'ದ್ಯಾಮಜ್ಜಿ ಪುರಾಣ' ಕಥೆಗೆ ದೊರೆತಿದೆ.



ಸಂಜಯ್ ಚಿತ್ರದುರ್ಗ

ಪುರಸ್ಕಾರವು ₹5 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ಕಥೆಗಾರರಾದ ಭಾಗ್ಯಜ್ಯೋತಿ ಹಿರೇಮಠ ಮತ್ತು ಲಿಂಗರಾಜ ಸೊಟ್ಟಪ್ಪನವರ ಅಂತಿಮ ಸುತ್ತಿನ ಆಯ್ಕೆಯ ತೀರ್ಪುಗಾರರಾಗಿದ್ದರು.

'ಏಳನೇ ವರ್ಷದ ಸ್ಪರ್ಧೆ ಇದಾಗಿದ್ದು, ಪ್ರಶಸ್ತಿ ಪ್ರದಾನ ಸಮಾರಂಭ ಜೂನ್‌ನಲ್ಲಿ ನಡೆಯಲಿದ್ದು, ದಿನಾಂಕ ನಿಗದಿ ಆಗಿಲ್ಲ' ಎಂದು ಪ್ರಕಟಣೆ ತಿಳಿಸಿದೆ. ಚಿತ್ರದುರ್ಗದ ಸಂಜಯ್, ಸದ್ಯ ಉಜಿರೆಯ ಎಸ್‌ಡಿಎಂ ಸ್ನಾತಕೋತ್ತರ ಕೇಂದ್ರದಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿದ್ದಾರೆ.

ವೃತ್ತಿಪರ ಕೋರ್ಸ್: ಸರ್ಕಾರಿ ಕೋಟಾದ ಸೀಟು ಮೆರಿಟ್ ಆಧಾರದಲ್ಲೇ ಹಂಚಿಕೆ

‘ನೀಟ್ ಫಲಿತಾಂಶ ಬಳಿಕ ಕೌನ್ಸೆಲಿಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ರ್‍ಯಾಂಕ್ ತಡೆಹಿಡಿದಿರುವ ಅಥವಾ ರ್‍ಯಾಂಕ್ ನೀಡದಿರುವ ಅಭ್ಯರ್ಥಿಗಳು ಆತಂಕಪಡುವ ಅಗತ್ಯ ಇಲ್ಲ. ಅಂಥವರು ಕೆಇಎ ಸೋಮವಾರ ಬಿಡುಗಡೆ ಮಾಡುವ ಪೋರ್ಟಲ್‌ನಲ್ಲಿ ತಮ್ಮ ಅಂಕ ದಾಖಲಿಸಿ ರ್‍ಯಾಂಕ್ ಪಡೆಯಬಹುದು’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದರು.

ಸಿಇಟಿ ಫಲಿತಾಂಶವನ್ನು ಕೆಇಎ ಶನಿವಾರ ಪ್ರಕಟಿಸಿದೆ. ಈ ಹಿನ್ನೆಲೆಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪಿಯುಸಿಯಲ್ಲಿ ನೀಡಿದ್ದ ವಿಶಿಷ್ಟ ಸಂಖ್ಯೆಯನ್ನು ಸಿಇಟಿಗೆ ಅರ್ಜಿ ಸಲ್ಲಿಸುವಾಗ ಕೆಲವರು ತಪ್ಪಾಗಿ ನಮೂದಿಸಿದ್ದಾರೆ. ಅಂಥವರ ರ್‍ಯಾಂಕ್ ಪ್ರಕಟಿಸಿಲ್ಲ. ಅಂತಹ ಅಭ್ಯರ್ಥಿಗಳಿಗೆ ಸರಿ ಮಾಡಿಕೊಳ್ಳಲು ಅವಕಾಶ ಸಿಗಲಿದೆ. ಸುಮಾರು 3 ಸಾವಿರ ವಿದ್ಯಾರ್ಥಿಗಳ ರ್‍ಯಾಂಕ್ ತಡೆಹಿಡಿಯಲಾಗಿದೆ’ ಎಂದರು.

‘ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯ (ನೀಟ್) ಫಲಿತಾಂಶದ ನಂತರ ಮತ್ತು ಅದರ ಕೌನ್ಸೆಲಿಂಗ್ ವೇಳಾಪಟ್ಟಿ ನೋಡಿಕೊಂಡು ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಒಟ್ಟಿಗೆ ಕೌನ್ಸೆಲಿಂಗ್ ನಡೆಸಲಾಗುವುದು’ ಎಂದು ವಿವರಿಸಿದರು.

‘ನೀಟ್ ಪರೀಕ್ಷೆ ತೆಗೆದುಕೊಂಡಿದ್ದರೂ ರಾಜ್ಯದ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಬೇಕಾದರೆ ಕೆಇಎಗೆ ಅರ್ಜಿ ಸಲ್ಲಿಸುವುದು ಕಡ್ಡಾಯ. ಆದರೆ, ಕೆಲವರು ಈ ರೀತಿ ಅರ್ಜಿ ಸಲ್ಲಿಸಿಲ್ಲ ಎಂದು ಹೇಳುತ್ತಿದ್ದು, ಅಂಥವರಿಗೆ ನೀಟ್ ಫಲಿತಾಂಶದ ನಂತರ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ನೀಡಲಾಗುವುದು’ ಎಂದರು.

ಆನ್ ಲೈನ್‌ನಲ್ಲಿ ದಾಖಲೆ ಪರಿಶೀಲನೆ: ‘ವಿಶೇಷ ಮಕ್ಕಳ ವೈದ್ಯಕೀಯ ತಪಾಸಣೆ ಬಿಟ್ಟರೆ ಬಹುತೇಕ ಎಲ್ಲ ದಾಖಲೆಗಳ ಪರಿಶೀಲನೆ ಆನ್ ಲೈನ್‌ನಲ್ಲಿ ನಡೆಯಲಿದೆ. ಯಾರೂ ಕೆಇಎ ಕಚೇರಿಗೆ ಬರುವ ಅಗತ್ಯ ಇಲ್ಲ. ಅಭ್ಯರ್ಥಿಗಳು ಅಪ್ಲೋಡ್ ಮಾಡಿರುವ ಶೈಕ್ಷಣಿಕ ದಾಖಲೆಗಳನ್ನು (ವ್ಯಾಸಂಗ ಪ್ರಮಾಣಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣಪತ್ರ, ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ, ಧಾರ್ಮಿಕ ಅಲ್ಪಸಂಖ್ಯಾತ ಮೀಸಲಾತಿ, ಭಾಷಾ ಅಲ್ಪಸಂಖ್ಯಾತ ಮೀಸಲಾತಿ) ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆನ್‌ಲೈನ್‌ನಲ್ಲಿ ಪರಿಶೀಲನೆ ನಡೆಸಿ, ಮಂಜೂರಾತಿ ನೀಡುತ್ತಿದ್ದು, ಯಾವುದೇ ಗೊಂದಲ ಇಲ್ಲದೆ ಸಾಗಿದೆ. ಸೋಮವಾರಕ್ಕೆ ಇದು ಪೂರ್ಣವಾಗಲಿದೆ’ ಎಂದು ಹೇಳಿದರು.

‘ಊಹಾಪೋಹಗಳಿಗೆ ಕಿವಿಗೊಡಬೇಡಿ’

‘ವೃತ್ತಿಪರ ಕೋರ್ಸ್‌ಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳನ್ನು ಮೆರಿಟ್ ಆಧಾರದಲ್ಲಿ ಕೆಇಎ ಮೂಲಕವೇ ಹಂಚಿಕೆ ಮಾಡಲಾಗುತ್ತದೆ. ಈ ವಿಷಯದಲ್ಲಿ ಗೊಂದಲ ಬೇಡ’ ಎಂದು ಪ್ರಸನ್ನ ತಿಳಿಸಿದರು.

‘ಫಲಿತಾಂಶ ವಿಳಂಬವಾಯಿತು. ಹೀಗಾಗಿ ಎಲ್ಲ ಸೀಟುಗಳನ್ನು ಖಾಸಗಿ ಕಾಲೇಜು ಆಡಳಿತ ಮಂಡಳಿಗಳು ಹೆಚ್ಚಿನ ಡೊನೇಷನ್ ಪಡೆದು ಭರ್ತಿ ಮಾಡಿಕೊಳ್ಳುತ್ತಿವೆ ಎಂದು ಕೆಲವರು ಗೊಂದಲ ಸೃಷ್ಟಿಸುತ್ತಿದ್ದು, ಅಂತಹ ಊಹಾಪೋಹಗಳಿಗೆ ಕಿವಿಗೊಡಬೇಡಿ’ ಎಂದು ಪೋಷಕರಿಗೆ ಅವರು ಮನವಿ ಮಾಡಿದರು.

ಸೀಟ್ ಮ್ಯಾಟ್ರಿಕ್ಸ್: ‘ಪ್ರಸಕ್ತ ಸಾಲಿನ ಸೀಟ್ ಮ್ಯಾಟ್ರಿಕ್ಸ್ ಇನ್ನೂ ಸರ್ಕಾರದಿಂದ ಬಂದಿಲ್ಲ. ಬಂದ ನಂತರ ಕಾಲೇಜು/ಕೋರ್ಸ್‌ವಾರು ಸೀಟ್ ಮ್ಯಾಟ್ರಿಕ್ಸ್ ಅನ್ನು ಕೆಇಎ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅದೇ ರೀತಿ ಕೋರ್ಸ್‌ಗಳ ಶುಲ್ಕ ನಿಗದಿ ಸಂಬಂಧ ಒಂದು ಸಭೆ ನಡೆದಿದ್ದು, ಸದ್ಯದಲ್ಲೇ ಆ ಕುರಿತು ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಲಿದೆ’ ಎಂದರು.

ವೈದೇಹಿ ಸಾಹಿತ್ಯ ಕಾರ್ಯಕ್ರಮದಲ್ಲಿ ವಿಮರ್ಶಕ ವಿಜಯಶಂಕರ ಅಭಿಮತ

‘ಸ್ತ್ರೀ ಸಂಕುಲದ ಸಂಕಷ್ಟ ಜೀವಂತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಸಂಸ್ಕೃತಿ ಮತ್ತು ಸ್ತ್ರೀಯರನ್ನು ಮಾತೆಯ ಸ್ಥಾನದಲ್ಲಿಟ್ಟು, ಗೌರವದಿಂದ ಕಾಣುವ ಬಗ್ಗೆ ಮಾತನಾಡುತ್ತಾರೆ. ಆದರೆ, ಈ ನೆಲದ ಸ್ತ್ರೀ ಸಂಕುಲದ ಸಂಕಷ್ಟಗಳು, ನೋವಿನ ಸಂಕೋಲೆಗಳು ಜೀವಂತವಾಗಿಯೇ ಉಳಿದಿವೆ’ ಎಂದು ವಿಮರ್ಶಕ ಎಸ್.ಆರ್ ವಿಜಯಶಂಕರ ಕಳವಳ ವ್ಯಕ್ತಪಡಿಸಿದರು.

ವೈದೇಹಿ ಅಭಿಮಾನಿಗಳ ಬಳಗ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ವೈದೇಹಿ ಸಾಹಿತ್ಯ; ‘ಸೀಮಾಂತೆ ಅಲ್ಲ ಸೀಮಾತೀತೆ’, ‘ನೆನಪು ಏಕತಾರಿ’, ‘ಹೆಗಲಲಿದೆ ಸಾವಿರ ಸವಾಲು’ ಪುಸ್ತಕಗಳ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ಕಾಲ ಬದಲಾದರೂ ಹೆಣ್ಣಿನ ಮೇಲಿನ ದೌರ್ಜನ್ಯ ನಿಂತಿಲ್ಲ. ಇದರಿಂದಾಗಿ ಈಗಲೂ ಸ್ತ್ರೀಯರು ಧೈರ್ಯದಿಂದ ರಾತ್ರಿ ವೇಳೆ ಓಡಾಡುವ ವಾತಾವರಣವಿಲ್ಲ. ನನ್ನ ಪತ್ನಿ ಕಾಲೇಜೊಂದರಲ್ಲಿ ಪ್ರಾಧ್ಯಾಪಕಿಯಾಗಿ, ಬಳಿಕ ಪ್ರಾಚಾರ್ಯೆಯಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದಾಳೆ. ಆದರೆ, ಊರಿನಿಂದ ಹೊರಟ ರೈಲು ಮಲ್ಲೇಶ್ವರವನ್ನು ರಾತ್ರಿ ತಲುಪಿದಲ್ಲಿ, ರೈಲು ನಿಲ್ದಾಣದಿಂದ ಅನತಿ ದೂರದಲ್ಲಿರುವ ಮನೆಗೆ ನಡೆದು ಸಾಗಲು ಆಕೆ ಹಿಂಜರಿಯುತ್ತಾಳೆ. ಇಷ್ಟು ಅಧೈರ್ಯದ ವಾತಾವರಣಕ್ಕೆ ಬಂದು ತಲುಪಿದ್ದೇವೆ’ ಎಂದು ಹೇಳಿದರು.

‘ಇತ್ತೀಚೆಗೆ ನಾನು ಮತ್ತು ಪತ್ನಿ ಇಂಗ್ಲೆಂಡ್‌ನ ಒಂದು ಉದ್ಯಾನದಲ್ಲಿ ರಾತ್ರಿ 12.45ಕ್ಕೆ ಒಂದು ಸಂಗೀತ ಕಛೇರಿ ಮುಗಿಸಿ, 2.5 ಮೈಲು ನಿರ್ಜನ ಪ್ರದೇಶದಲ್ಲಿಯೂ ನಡೆದು ನಾವು ತಂಗಿದ್ದ ಸ್ಥಳ ತಲುಪಿದೆವು. ಆ ವಾತಾವರಣ ನಮ್ಮೂರಿನಲ್ಲಿ ಯಾಕಿಲ್ಲ ಎಂಬುದು ಸದಾ ಮನಸ್ಸಿಗೆ ಕಾಡುತ್ತಿದೆ’ ಎಂದರು.

ವಿಮರ್ಶಕಿ ಎಂ.ಎಸ್. ಆಶಾದೇವಿ, ‘ಇಡೀ ಲೋಕಕ್ಕೆ ಹೆಣ್ಣಿನ ಅಂತಃಕರಣದ ಚಿಕಿತ್ಸೆ ಬೇಕಿದೆ. ಹೆಣ್ಣಿನ ಅನುಭವ ಲೋಕವು ಪುರುಷ ಅನುಭವ ಲೋಕಕ್ಕಿಂತ ಭಿನ್ನವಾಗಿ ಇರಲಿದೆ. ಆದರೆ, ಮಾನವಾನುಭವವಾಗಿ ಪುರುಷ ಅನುಭವ ಲೋಕದಷ್ಟೇ ಮುಖ್ಯವಾದದ್ದಾಗಿದೆ. ಪುರುಷರಿಗೆ ಮತ್ತು ಲೋಕಕ್ಕೆ ಅಪರಿಚಿತವಾದ ಹೆಣ್ಣಿನ ಒಳಲೋಕವನ್ನು ಅದರ ಎಲ್ಲ ಬಣ್ಣಗಳೊಂದಿಗೆ, ಪದರಗಳೊಂದಿಗೆ, ಜೀವಂತಿಕೆಯೊಂದಿಗೆ ಮತ್ತು ಅದರ ಎಲ್ಲ ಶಕ್ತಿಯೊಂದಿಗೆ ವೈದೇಹಿಯವರ ಸಾಹಿತ್ಯ ಕಾಣಿಸುತ್ತದೆ’ ಎಂದು ಹೇಳಿದರು.

ವಿಮರ್ಶಕ ಬಸವರಾಜ ಕಲ್ಗುಡಿ, ‘ಎರಡನೇ ಮಹಾಯುದ್ಧದಲ್ಲಿ ನಿಶ್ಶಬ್ದವಾಗಿ ನೋವು ಅನುಭವಿಸಿದವಳು ಹೆಣ್ಣು. ಆದರೆ, ಈ ಬಗ್ಗೆ ಯಾರೂ ಬರೆದಿಲ್ಲ. ಯುದ್ಧ, ಸಾವು, ಸೈನಿಕರು, ಗೆಲುವು ಹೀಗೆ ಪುರುಷ ಕೇಂದ್ರಿತ ಬರಹಗಳೇ ಬಂದವು. ಯುದ್ಧದಲ್ಲಿ ತಮ್ಮವರನ್ನು ಕಳೆದುಕೊಂಡ ಹೆಣ್ಣಿನ ಯಾತನೆ ಕೇಳಿದವರಿಲ್ಲ. ಹೆಣ್ಣಿನ ಅಸ್ತಿತ್ವ, ಬದುಕು, ಸ್ವಾತಂತ್ರ್ಯ ಹಾಗೂ ಒಂಟಿತನದ ಬಗ್ಗೆ ವೈದೇಹಿ ಅವರ ಸಾಹಿತ್ಯ ಕಟ್ಟಿಕೊಡುತ್ತದೆ’ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಬಿಡುಗಡೆಯಾದ ‘ಸೀಮಾಂತೆ ಅಲ್ಲ ಸೀಮಾತೀತೆ’, ‘ನೆನಪು ಏಕತಾರಿ’ ಹಾಗೂ ‘ಹೆಗಲಲಿದೆ ಸಾವಿರ ಸವಾಲು’ ಪುಸ್ತಕದ ಪ್ರತಿಯನ್ನು ಎಂ.ಎಸ್. ಆಶಾದೇವಿ (ಎಡದಿಂದ ನಾಲ್ಕನೆಯವರು) ವಿತರಿಸಿದರು. (ಎಡದಿಂದ) ಲೇಖಕಿ ಜಯಲಕ್ಷ್ಮಿ ಪಾಟೀಲ, ಬಿ.ಎನ್.ಸುಮಿತ್ರಾ ಬಾಯಿ, ಬಸವರಾಜ ಕಲ್ಗುಡಿ ಮತ್ತು ಎಸ್.ಆರ್. ವಿಜಯಶಂಕರ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**



ಬನಶಂಕರಿಯ ಯಾರಬ್ ನಗರದ ರಸ್ತೆಯಲ್ಲಿ ಹಾಕಿರುವ ಶೆಡ್

‘ಶೆಡ್ ತೆರವುಗೊಳಿಸಿ’

ಲೋಕಸಭಾ ಚುನಾವಣೆಯ ಸಮಯದಲ್ಲಿ ವಾಹನಗಳ ತಪಾಸಣೆಗೆಂದು ಅನೇಕ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಶೆಡ್‌ಗಳನ್ನು ನಿರ್ಮಿಸಲಾಗಿದೆ. ಕರ್ನಾಟಕದಲ್ಲಿ ಚುನಾವಣೆ ಮುಗಿದು ಒಂದು ತಿಂಗಳಾದರೂ, ಆ ಶೆಡ್‌ಗಳನ್ನು ಇನ್ನೂ ತೆರವುಗೊಳಿಸಿಲ್ಲ. ಇದರಿಂದ, ವಾಹನ ಸವಾರರಿಗೆ ಸಂಚಾರಕ್ಕೆ ತೊಂದರೆಯಾಗಿದೆ. ಬನಶಂಕರಿಯ ಯಾರಬ್ ನಗರದ ಮುಖ್ಯರಸ್ತೆಯಲ್ಲಿ ಹಾಕಿರುವ ಶೆಡ್ ಪುಂಡ ಪೋಕರಿಗಳ ಅಡ್ಡೆಯಾಗಿ ಮಾರ್ಪಟ್ಟಿದೆ. ಆದ್ದರಿಂದ, ನಗರದಲ್ಲಿ ಹಾಕಿರುವ ಇಂತಹ ಶೆಡ್‌ಗಳನ್ನು ತೆರವುಗೊಳಿಸಬೇಕು.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

‘ಮರ ನೆಲಕ್ಕುರುಳುವ ಸಾಧ್ಯತೆ’



ಎನ್.ಆರ್. ಕಾಲೊನಿಯ ಬಸ್ ನಿಲ್ದಾಣದ ಬಳಿ ಮರವೊಂದು ವಾಲಿರುವುದು

ಎನ್.ಆರ್. ಕಾಲೊನಿಯ ಬಸ್ ನಿಲ್ದಾಣದ ಸಮೀಪದಲ್ಲಿರುವ ಮರವೊಂದು ರಸ್ತೆಯ ಕಡೆಗೆ ವಾಲಿಕೊಂಡಿದೆ. ಇದರ ಬೇರುಗಳು ಮೇಲೆ ಬಂದಿದ್ದು, ಬುಡಕ್ಕೆ ಗೆದ್ದಲು ಹಿಡಿದಿದೆ. ಇಲ್ಲಿ ಮರದ ಸುತ್ತಮುತ್ತ ಹಲವರು ಕೈಗಾಡಿಯಲ್ಲಿ ಹೂವು ಮತ್ತು ತರಕಾರಿಯ ವ್ಯಾಪಾರ ಮಾಡುತ್ತಾರೆ. ಎಲ್ಲ ಸಂದರ್ಭಗಳಲ್ಲೂ ಇಲ್ಲಿ ಜನ ಇರುತ್ತಾರೆ. ಮಳೆಗಾಲ ಆರಂಭವಾಗಿದೆ. ಆಗಾಗ್ಗೆ ಬಿರುಗಾಳಿಯೂ ಬೀಸುತ್ತಿರುವುದರಿಂದ ಈ ಮರ ಯಾವುದೇ ಸಂದರ್ಭದಲ್ಲಿ ನೆಲಕ್ಕುರುಳುವ ಸಾಧ್ಯತೆಯಿದೆ. ಆದ್ದರಿಂದ ಬಿಬಿಎಂಪಿಯವರು ಈ ಬಗ್ಗೆ ಗಮನಹರಿಸಿ, ಅಗತ್ಯ ಕ್ರಮಗಳನ್ನು ಕೈಗೊಂಡರೆ ಮುಂದೆ ಆಗುವ ಅಪಾಯಗಳನ್ನು ತಪ್ಪಿಸಬಹುದು.

ಕೆ.ಎಸ್. ನಾಗರಾಜ್, ಎನ್.ಆರ್. ಕಾಲೊನಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ಮೈಸೂರು ಬ್ಯಾಂಕ್ ಬಸ್ ತಂಗುದಾಣದಿಂದ ಕೆಂಪೇಗೌಡ ರಸ್ತೆಯ ಕಾವೇರಿ ಭವನ ಮುಂಭಾಗದಲ್ಲಿರುವ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಪೇವರ್ಸ್‌ಗಳು ಕಿತ್ತು ಹೋಗಿದ್ದು, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗಿದೆ. ಮೈಸೂರು ಬ್ಯಾಂಕ್ ವೃತ್ತದ ಸುತ್ತಮುತ್ತ ಸರ್ಕಾರಿ ಕಚೇರಿಗಳು ಸೇರಿದಂತೆ ಸಿವಿಲ್ ನ್ಯಾಯಾಲಯದ ಸಂಕೀರ್ಣ ಇರುವುದರಿಂದ ಈ ಮಾರ್ಗದಲ್ಲಿ ಪ್ರತಿನಿತ್ಯ ನೂರಾರು ಜನ ಓಡಾಡುತ್ತಾರೆ. ಪಾದಚಾರಿ ಮಾರ್ಗ ಹಾಳಾಗಿ ಇಷ್ಟು ದಿನಗಳಾದರೂ ದುರಸ್ತಿಗೊಳಿಸಿಲ್ಲ. ಇದರಿಂದ, ವೃದ್ಧರು, ಮಹಿಳೆಯರು ಸೇರಿದಂತೆ ಮಕ್ಕಳು ಮುಖ್ಯರಸ್ತೆಯಲ್ಲಿ ಹಾದು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ಶಿವಪ್ರಸಾದ್, ಪಾದಚಾರಿ



ಮೈಸೂರು ರಸ್ತೆಯ ಪಾದಚಾರಿ ಮಾರ್ಗದ ಪೇವರ್ಸ್ ಕಿತ್ತು ಹೋಗಿರುವುದು

‘ರಸ್ತೆ ದುರಸ್ತಿಗೊಳಿಸಿ’

ಹೆಬ್ಬಾಳದ ಕೆಂಪಾಪುರದಲ್ಲಿರುವ ಎಲ್ಲ ಪ್ರಮುಖ ರಸ್ತೆಗಳು ಹಾಳಾಗಿವೆ. ಇದರಿಂದ, ಈ ಭಾಗದಲ್ಲಿ ಪ್ರತಿನಿತ್ಯ ಸಂಚಾರ ದಟ್ಟಣೆ ಇರುತ್ತದೆ. ವಿದ್ಯಾನಿಕೇತನ ಶಾಲೆಗೆ ಸಂಪರ್ಕಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆ ಸಂಪೂರ್ಣ ಹದಗೆಟ್ಟಿದೆ. ಇದೇ ರಸ್ತೆಯ ಒಳಚರಂಡಿ ಪಕ್ಕದಲ್ಲಿ ಭಾರಿ ಹಳ್ಳ ಬಿದ್ದಿದ್ದು, ವಾಹನ ಸಂಚಾರ ಮಾಡುವುದೇ ದುಸ್ತರವಾಗಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಬಿದ್ದು ಗಾಯ ಮಾಡಿಕೊಂಡಿದ್ದಾರೆ. ಬಿಬಿಎಂಪಿ ಕೂಡಲೇ ಈ ರಸ್ತೆಯನ್ನು ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವರಾಜ್, ಕೆಂಪಾಪುರ



ಕೆಂಪಾಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ದುಃಸ್ಥಿತಿ

‘ಶುದ್ಧ ಕುಡಿಯುವ ನೀರಿನ ಘಟಕ ದುರಸ್ತಿಗೊಳಿಸಿ’

ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ಹಾಳಾಗಿದ್ದು, ಪ್ರಯಾಣಿಕರು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಿಲ್ದಾಣಕ್ಕೆ ಪ್ರತಿನಿತ್ಯ ಸಾವಿರಾರು ಪ್ರಯಾಣಿಕರು ಭೇಟಿ ನೀಡುತ್ತಾರೆ. ಆದರೆ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಎಂಟಿಸಿ ಅಧಿಕಾರಿಗಳು ಕೂಡಲೇ ಇಲ್ಲಿನ ಶುದ್ಧ ಕುಡಿಯುವ ನೀರಿನ ಘಟಕದ ದುರಸ್ತಿಗೆ ಕ್ರಮ ಕೈಗೊಳ್ಳಬೇಕು. **ಕಿರಣ್ ಕುಮಾರ್ ಜೆ.** ಪ್ರಯಾಣಿಕ



ಅಲ್ಟಿಮೇಟ್ ಸಿವಿಕ್ ಬಿಲ್ಡ್ ಟೆಕ್ ಕಂಪನಿ ಪಾಲುದಾರರ ವಿರುದ್ಧ ಎಫ್ಐಆರ್

30 ಫ್ಲ್ಯಾಟ್ ಅಕ್ರಮ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ (ಕೆಎಸ್ಎಫ್‌ಸಿ) ₹8 ಕೋಟಿ ಸಾಲ ಪಡೆದು ನಿರ್ಮಿಸಿದ್ದ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡಲಾಗಿದ್ದು, ಈ ಸಂಬಂಧ ಅಲ್ಟಿಮೇಟ್ ಸಿವಿಕ್ ಬಿಲ್ಡ್ ಟೆಕ್ ಕಂಪನಿ ಆಡಳಿತ ಪಾಲುದಾರರ ವಿರುದ್ಧ ಪ್ರಕರಣ ದಾಖಲಾಗಿದೆ.

‘ಫ್ಲ್ಯಾಟ್‌ಗಳ ಅಕ್ರಮ ಮಾರಾಟಕ್ಕೆ ಸಂಬಂಧಪಟ್ಟಂತೆ ಕೆಎಸ್ಎಫ್‌ಸಿ ಸಹಾಯಕ ಪ್ರಧಾನ ವ್ಯವಸ್ಥಾಪಕ ಜಿ. ವಿಶ್ವನಾಥ್ ಅವರು ಇತ್ತೀಚೆಗೆ ದೂರು ನೀಡಿದ್ದಾರೆ. ಅಲ್ಟಿಮೇಟ್ ಸಿವಿಕ್ ಬಿಲ್ಡ್ ಟೆಕ್ ಆಡಳಿತ ಪಾಲುದಾರರಾದ ಹರಿಪ್ರಸಾದ್, ರಘುವೀರ್ ಸ್ವಾಮಿ ಹಾಗೂ ಎಂ. ಸುಬ್ರಮಣಿ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಹೈಗ್ರೌಂಡ್ಸ್ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಯಲಹಂಕ ಹೋಬಳಿಯ ಹಾರೋಹಳ್ಳಿಯಲ್ಲಿ ನಿರ್ಮಾಣ
- ಕೆಎಸ್ಎಫ್‌ಸಿಯಿಂದ ಉಳಿದ ಫ್ಲ್ಯಾಟ್‌ಗಳ ಮುಟ್ಟುಗೋಲು
- ಸಾಲದ ಭದ್ರತೆಗಾಗಿ ಕಂಪನಿಯಿಂದ ಜಾಗ ಅಡವು

‘ದೂರುದಾರರು ಪ್ರಕರಣದ ಹಲವು ದಾಖಲೆಗಳನ್ನು ಒದಗಿಸಿದ್ದಾರೆ. ಅವುಗಳ ಪರಿಶೀಲನೆ ನಡೆಸಲಾಗುತ್ತಿದೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿ ಮುಂದಿನ ಕ್ರಮ ಜರುಗಿಸ ಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

85 ಫ್ಲ್ಯಾಟ್‌ಗಳ ನಿರ್ಮಾಣ: ‘ಯಲಹಂಕ ಹೋಬಳಿಯ ಹಾರೋಹಳ್ಳಿ ಗ್ರಾಮದಲ್ಲಿ 85 ಫ್ಲ್ಯಾಟ್‌ಗಳ ವಸತಿ ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಲು ಆರೋಪಿಗಳು

ಅಪರಾಧ ಸುದ್ದಿ

ಯೋಜನೆ ರೂಪಿಸಿದ್ದರು. ಯೋಜನೆ ಜಾರಿಗೆ ಅಗತ್ಯವಿದ್ದ ₹8 ಕೋಟಿ ಸಾಲ ಕೇಳಿ ಕೆಎಸ್ಎಫ್‌ಸಿಗೆ ಅರ್ಜಿ ಸಲ್ಲಿಸಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಿದ ನಂತರ, ಕೆಎಸ್ಎಫ್‌ಸಿಯಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದು ಫ್ಲ್ಯಾಟ್ ಮಾರಾಟ ಮಾಡುವುದಾಗಿಯೂ ಆರೋಪಿಗಳು ಅಫಿಡ್‌ವಿಟ್ ಸಲ್ಲಿಸಿದ್ದರು. ಜೊತೆಗೆ, ಸಾಲದ ಭದ್ರತೆಗೆಂದು ಜಾಗವನ್ನು ಅಡವಿಟ್ಟಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಾಣ ಕೆಲಸ ಪೂರ್ಣಗೊಂಡಿದ್ದು, 85 ಫ್ಲ್ಯಾಟ್‌ಗಳು ಮಾರಾಟಕ್ಕೆ ಸಿದ್ಧವಾಗಿವೆ. ಈ ಸಂದರ್ಭದಲ್ಲಿ ಆರೋಪಿಗಳು, ಕೆಎಸ್ಎಫ್‌ಸಿ ಕಡೆಯಿಂದ ಎನ್‌ಒಸಿ ಪಡೆದು ಫ್ಲ್ಯಾಟ್ ಮಾರಾಟ ಮಾಡಬೇಕು. ಆದರೆ, ಆರೋಪಿಗಳು ಯಾವುದೇ ಎನ್‌ಒಸಿ ಪಡೆಯದೇ 32 ಫ್ಲ್ಯಾಟ್‌ಗಳನ್ನು ಈಗಾಗಲೇ ಮಾರಾಟ ಮಾಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸಾಲ ಮರುಪಾವತಿಗೆ ಶೋಕಾಸ್: ‘ಅಪಾರ್ಟ್‌ಮೆಂಟ್ ಸಮುಚ್ಚಯ ನಿರ್ಮಿಸಿ ಫ್ಲ್ಯಾಟ್ ಮಾರುತ್ತಿದ್ದರೂ ಆರೋಪಿಗಳು ನಿಗದಿತ ಸಮಯಕ್ಕೆ ಸಾಲ ಹಾಗೂ ಅದರ ಬಡ್ಡಿ ಪಾವತಿ ಮಾಡುತ್ತಿರಲಿಲ್ಲ. ₹9.73 ಕೋಟಿ ಸಾಲ ಬಾಕಿ ಇತ್ತು. ಈ ಬಗ್ಗೆ ಕೆಎಸ್ಎಫ್‌ಸಿ ಅಧಿಕಾರಿಗಳು ಹಲವು ಬಾರಿ ನೋಟಿಸ್ ನೀಡಿದ್ದರು. ಅಷ್ಟಾದರೂ ಆರೋಪಿಗಳು, ಉತ್ತರ ನೀಡಿರಲಿಲ್ಲ’ ಎಂದು ಮೂಲಗಳು ಹೇಳಿವೆ.

‘ನೋಟಿಸ್‌ಗೆ ಉತ್ತರ ಬಾರದಿದ್ದರಿಂದ ಕೆಎಸ್ಎಫ್‌ಸಿ ಅಧಿಕಾರಿಗಳು, ಸ್ಥಳ ಪರಿಶೀಲನೆ ನಡೆಸಿದ್ದರು. ಆಗ, ಆರೋಪಿಗಳು 32 ಫ್ಲ್ಯಾಟ್ ಮಾರಿದ್ದ ಸಂಗತಿ ಗೊತ್ತಾಗಿತ್ತು. ನಂತರ, ಉಳಿದ ಫ್ಲ್ಯಾಟ್‌ಗಳನ್ನು ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಬುದ್ಧಾ ಕೊಲೆ: ದೋಷಾರೋಪ ಪಟ್ಟಿ ಸಲ್ಲಿಕೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎ ವಿದ್ಯಾರ್ಥಿನಿ ಆರ್. ಪ್ರಬುದ್ಧಾ(20) ಕೊಲೆ ಪ್ರಕರಣದ ಆರೋಪಿಯಾದ 14 ವರ್ಷದ ಬಾಲಕನನ್ನು ವಶಕ್ಕೆ ಪಡೆದಿದ್ದ ಸುಬ್ರಹ್ಮಣ್ಯ ಪುರ ಠಾಣೆ ಪೊಲೀಸರು, ಪುರಾವೆಗಳನ್ನು ಸಂಗ್ರಹಿಸಿ ದೋಷಾರೋಪ ಪಟ್ಟಿ ಸಿದ್ಧಪಡಿಸುತ್ತಿದ್ದಾರೆ.

ಪದ್ಮನಾಭನಗರ ಬಳಿಯ ಬೃಂದಾವನ ಲೇಔಟ್‌ನಲ್ಲಿರುವ ಮನೆಯೊಂದರಲ್ಲಿ ಮೇ 15ರಂದು ಪ್ರಬುದ್ಧಾ ಕೊಲೆ ಆಗಿತ್ತು. ₹2 ಸಾವಿರಕ್ಕಾಗಿ ಕೃತ್ಯ ಎಸಗಿದ್ದ ಆರೋಪದಡಿ ಬಾಲಕನನ್ನು ಮೇ 23ರಂದು ಬಂಧಿಸಲಾಗಿತ್ತು.

‘ಆರೋಪಿ ಬಾಲಕನಾಗಿದ್ದರಿಂದ, ಪ್ರಕರಣ ಸೂಕ್ಷ್ಮವಾಗಿದೆ. ಬಾಲಕನನ್ನು ವಶಕ್ಕೆ ಪಡೆದು ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿತ್ತು. ನಂತರ, ಬಾಲಕನನ್ನು ಆಪ್ತ ಸಮಾಲೋಚನೆಗೆ ಒಳಪಡಿಸಲಾಗಿತ್ತು. ಬಳಿಕವೇ ಪ್ರಕರಣದ ಬಗ್ಗೆ ಬಾಲಕನಿಂದ ಮಾಹಿತಿ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.



ಆನೇಕಲ್ ತಾಲ್ಲೂಕಿನ ಗೊಲ್ಲಹಳ್ಳಿಯಲ್ಲಿ ವಿದ್ಯುತ್ ತಗುಲಿದ್ದರಿಂದ ಹೊತ್ತಿ ಉರಿಯುತ್ತಿರುವ ಪಲ್ಲಕ್ಕಿ

ವಿದ್ಯುತ್ ಹರಿದು ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಗೊಲ್ಲಹಳ್ಳಿ ಸಮೀಪ ಪಲ್ಲಕ್ಕಿ ಮೆರವಣಿಗೆ ಮಾಡಿ ಗ್ರಾಮಕ್ಕೆ ಹಿಂದಿರುಗುವ ವೇಳೆ ಪಲ್ಲಕ್ಕಿಗೆ ವಿದ್ಯುತ್ ಪ್ರವಹಿಸಿ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ಯುವಕರನ್ನು ಜಿಗಣಿ ಸಮೀಪದ ಯಾರಂಡಹಳ್ಳಿಯ ಹರಿಬಾಬು(25) ಮತ್ತು ವೀರಸಂದ್ರ ರಂಗನಾಥ್(30) ಎಂಬುದಾಗಿ ಗುರುತಿಸಲಾಗಿದೆ.

ತಾಲ್ಲೂಕಿನ ಟಿ.ಗೊಲ್ಲಹಳ್ಳಿಯಲ್ಲಿ ಕರಗದ ಪ್ರಯುಕ್ತ ಪಲ್ಲಕ್ಕಿ ಮೆರವಣಿಗೆ ಏರ್ಪಡಿಸಲಾಗಿತ್ತು. ಭಾನುವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ಪಲ್ಲಕ್ಕಿ ಮೆರವಣಿಗೆ ಮುಗಿಸಿ ಹಿಂತಿರುಗುವ ವೇಳೆ ಪಲ್ಲಕ್ಕಿಗೆ ವಿದ್ಯುತ್ ಸ್ಪರ್ಶವಾಗಿದೆ. ಈ ವೇಳೆ ಪಲ್ಲಕ್ಕಿ ಭಸ್ಮವಾಗಿದ್ದು, ಪಲ್ಲಕ್ಕಿಯಲ್ಲಿದ್ದ ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ಎಲೆಕ್ಟ್ರಾನಿಕ್‌ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಮಾರಾಟ ನಿರ್ಬಂಧ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸುವವರು ತಮ್ಮ ಉತ್ಪಾದನೆಯ ಪೂರ್ಣ ಪ್ರಮಾಣದ ವಿದ್ಯುತ್ ಅನ್ನು ರಾಜ್ಯ ಸರ್ಕಾರಕ್ಕೆ ಮಾರಾಟ ಮಾಡಬೇಕೆಂಬ ನಿರ್ಬಂಧವನ್ನು ಇಂಧನ ಇಲಾಖೆ ಹಿಂಪಡೆದಿದೆ.

ಬರಗಾಲ ಮತ್ತು ವಿದ್ಯುತ್ ಬೇಡಿಕೆಯಲ್ಲಿನ ಹೆಚ್ಚಳದ ಕಾರಣದಿಂದ ರಾಜ್ಯದಲ್ಲಿನ ಎಲ್ಲ ವಿದ್ಯುತ್ ಉತ್ಪಾದಕರು ಉತ್ಪಾದನೆಯಾದ ಸಂಪೂರ್ಣ ವಿದ್ಯುತ್ ಅನ್ನು ಸರ್ಕಾರಕ್ಕೆ ಮಾರಾಟ ಮಾಡುವುದನ್ನು ಕಡ್ಡಾಯಗೊಳಿಸಿ 2023ರ ಅಕ್ಟೋಬರ್ 16ರಂದು ಅದೇಶ ಹೊರಡಿಸಲಾಗಿತ್ತು.

ಈಗ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗುತ್ತಿರುವುದರಿಂದ ವಿದ್ಯುತ್ ಬೇಡಿಕೆ ತಗ್ಗಿದೆ. ಮುಂಗಾರು ಅವಧಿಯಲ್ಲಿ ಹೆಚ್ಚು ಮಳೆಯಾಗುವ ನಿರೀಕ್ಷೆ ಇದೆ. ಅಲ್ಲದೆ ಪವನ ವಿದ್ಯುತ್ ಉತ್ಪಾದನೆಯಲ್ಲೂ ಹೆಚ್ಚಳವಾಗುವ ಸಾಧ್ಯತೆಯನ್ನು ಮನಗಂಡು ವಿದ್ಯುತ್ ಮಾರಾಟದ ಮೇಲಿನ ನಿರ್ಬಂಧ ಹಿಂಪಡೆಯಲಾಗಿದೆ ಎಂದು ಇಂಧನ ಇಲಾಖೆಯು ಮೇ 24ರಂದು ಹೊರಡಿಸಿರುವ ಆದೇಶದಲ್ಲಿ ವಿವರಿಸಿದೆ.

ಮೂರು ಜೋಡಿ ರೈಲುಗಳ ನಿಲುಗಡೆ ಸ್ಥಳಾಂತರ

ಯಶವಂತಪುರ ನಿಲ್ದಾಣದಲ್ಲಿ ರೈಲು ದಟ್ಟಣೆ ಕಡಿಮೆ ಮಾಡಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದಲ್ಲಿ ರೈಲುಗಳ ದಟ್ಟಣೆ ಕಡಿಮೆ ಮಾಡಲು ಮೂರು ಜೋಡಿ ರೈಲುಗಳ ನಿಲುಗಡೆಯನ್ನು ಬೇರೆ ನಿಲ್ದಾಣಗಳಿಗೆ ಸ್ಥಳಾಂತರಿಸಲು ರೈಲ್ವೆ ಮಂಡಳಿ ಅನುಮತಿ ನೀಡಿದೆ.

ಯಶವಂತಪುರ ರೈಲು ನಿಲ್ದಾಣಕ್ಕೆ ಬರುತ್ತಿದ್ದ ಈ ರೈಲುಗಳು ಜೂನ್ 24ರಿಂದ ಬದಲಿ ಮಾರ್ಗದಲ್ಲಿ ಸಂಚರಿಸಲಿವೆ. ದಾದರ್-ತಿರುನೆಲ್ವೇಲಿ ಮತ್ತು ತಿರುನೆಲ್ವೇಲಿ– ದಾದರ್ ಎಕ್ಸ್‌ಪ್ರೆಸ್ ರೈಲು ಯಶವಂತಪುರ, ಬಾಣಸವಾಡಿ, ಹೊಸೂರು, ಧರ್ಮಪುರಿ-ಓಮಲೂರು ಬದಲು ಚಿಕ್ಕಬಾಣಾವರ, ಯಶವಂತಪುರ ಬೈಪಾಸ್, ಲೊಟ್ಟೆಗೊಲ್ಲಹಳ್ಳಿ, ಬೈಯ್ಯಪ್ಪನಹಳ್ಳಿ ಮೂಲಕ ಚಲಿಸಲಿವೆ. ಈ ರೈಲು ಚಿಕ್ಕಬಾಣಾವರ, ಬೈಯಪ್ಪನಹಳ್ಳಿ ಎಸ್ಎಂವಿಟಿಯಲ್ಲಿ ನಿಲುಗಡೆ ಹೊಂದಿದೆ.

ದಾದರ್-ಪುದುಚೇರಿ ಮತ್ತು ಪುದುಚೇರಿ-ದಾದರ್ ಎಕ್ಸ್‌ಪ್ರೆಸ್ ರೈಲು ಯಶವಂತಪುರ, ಬಾಣಸವಾಡಿ, ಕೃಷ್ಣರಾಜಪುರ, ಬಂಗಾರಪೇಟೆ, ಜೋಲಾರಪೇಟೆ ಮೂಲಕ ಸಂಚರಿಸುತ್ತಿರುವುದನ್ನು ಕೈಬಿಟ್ಟು, ಚಿಕ್ಕಬಾಣಾವರ,ಯಶವಂತಪುರಬೈಪಾಸ್,ಲೊಟ್ಟೆಗೊಲ್ಲ ಹಳ್ಳಿ ಬಂಗಾರಪೇಟೆ ಮೂಲಕ ಸಂಚರಿಸಲು ಕ್ರಮ ಕೈಗೊಳ್ಳಲಾಗಿದೆ. ಇದು ಚಿಕ್ಕಬಾಣಾವರ, ಬೈಯಪ್ಪನಹಳ್ಳಿ ಎಸ್ಎಂವಿಟಿಯಲ್ಲಿ ನಿಲುಗಡೆ ಹೊಂದಿದೆ.

ಎಸ್ಎಸ್ಎಸ್ ಹುಬ್ಬಳ್ಳಿ-ಎಂಜಿಆರ್ ಚೆನ್ನೈ ಸೆಂಟ್ರಲ್ ಹಾಗೂ ಎಂಜಿಆರ್ ಚೆನ್ನೈ ಸೆಂಟ್ರಲ್-ಎಸ್ಎಸ್ಎಸ್ ಹುಬ್ಬಳ್ಳಿ ಎಕ್ಸ್‌ಪ್ರೆಸ್ ರೈಲು ಯಶವಂತಪುರ, ಬಾಣಸವಾಡಿ, ಕೃಷ್ಣರಾಜಪುರ, ಬಂಗಾರಪೇಟೆ, ಜೋಲಾರಪೇಟೆ ಬದಲು ಚಿಕ್ಕಬಾಣಾವರ, ಯಶವಂತಪುರ, ಲೊಟ್ಟೆಗೊಲ್ಲಹಳ್ಳಿ ಬೈಪಾಸ್, ಬಂಗಾರಪೇಟೆ ಮೂಲಕ ಸಂಚರಿಸಲಿದೆ. ಈ ರೈಲುಗಳು ಎಸ್ಎಂವಿಟಿ ಮತ್ತು ವೈಟ್‌ಫೀಲ್ಡ್ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿವೆ.

ಭ್ರೂಣಹತ್ಯೆ: ಇಬ್ಬರು ಆರೋಪಿಗಳ ವಿಚಾರಣೆ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): ಭ್ರೂಣಹತ್ಯೆ ಪ್ರಕರಣದ ಆರೋಪಿಗಳಾದ ಕವಿತಾ ಬಾಡನವರ ಹಾಗೂ ಮೃತ ಸೋನಾಲಿ ಕದಮ್ ಅವರ ಸಹೋದರ ವಿಜಯ ಗೌಳಿ ಅವರನ್ನು ವಶಕ್ಕೆ ಪಡೆದಿರುವ ಪಟ್ಟಣದ ಪೊಲೀಸರು ಭಾನುವಾರ ಪ್ರತ್ಯೇಕವಾಗಿ ವಿಚಾರಣೆ ನಡೆಸಿದರು.

ಬೆಳಿಗ್ಗೆಯೇ ಪೊಲೀಸ್ ಠಾಣೆಗೆ ವಿಜಯ ಗೌಳಿ ಅವರನ್ನು ಕರೆತಂದ ಸಿಪಿಐ ಸಂಜೀವ ಬಳೆಗಾರ ನೇತೃತ್ವದ ತಂಡ, ಮಹಾರಾಷ್ಟ್ರದ ಜೈಸಿಂಗಪುರಕ್ಕೆ ಅವರನ್ನು ಕರೆದೊಯ್ದರು. ಅಲ್ಲಿನ ವೈದ್ಯರೊಬ್ಬರು ಮಹಿಳೆಯನ್ನು ಸ್ಕ್ಯಾನಿಂಗ್ ಮಾಡಿ ಬಳಿಕ ಗರ್ಭಪಾತಕ್ಕೆ ಮಹಾಲಿಂಗಪುರದ ಕವಿತಾ ಅವರ ಮನೆಗೆ ಕಳುಹಿಸಿರುವ ಅನುಮಾನದ ಮೇಲೆ ಪೊಲೀಸರು ವಿಜಯ ಗೌಳಿ ಅವರನ್ನು ಜೈಸಿಂಗಪುರಕ್ಕೆ ಕರೆದೊಯ್ದು ವಿಚಾರಣೆ ನಡೆಸಿದರು.

ಇತ್ತ, ಪಿಎಸ್ಐ ಪ್ರವೀಣ ಬೀಳಗಿ ನೇತೃತ್ವದ ತಂಡವು ಕವಿತಾ ಬಾಡನವರ ಅವರನ್ನು ಅವರ ಮನೆಗೆ ಕರೆದೊಯ್ದು ಪಂಚನಾಮೆ ನಡೆಸಿತು. ಬಾಡನವರ ಮನೆಯಲ್ಲಿ ಗರ್ಭಪಾತ ನಡೆದಿರುವ ಕಾರಣ, ಬನಹಟ್ಟಿ ಪಿಎಸ್ಐ ಶಾಂತಾ ಹಳ್ಳಿ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಸಿ.ಎಂ. ವಜ್ಜರಮಟ್ಟಿ, ಕಾನ್‌ಸ್ಟೆಬಲ್‌ಗಳಾದ ರೂಪಾ ರಾಚನ್ನವರ, ರೇಣುಕಾ ಪಾಟೀಲ, ದೀಪಾ ಹುಲ್ಯಾಳ ಹಾಗೂ ಸಾಕ್ಷಿದಾರರ ಸಮ್ಮುಖದಲ್ಲಿ ಸ್ಥಳದ ಪಂಚನಾಮೆ ನಡೆಸಲಾಯಿತು.

ಬಳಿಕ ಪೊಲೀಸ್ ಠಾಣೆಯಲ್ಲಿ ಈ ಇಬ್ಬರೂ ಆರೋಪಿಗಳ ಹೆಚ್ಚಿನ ವಿಚಾರಣೆಯನ್ನು ಡಿವೈಎಸ್‌ಪಿ ಇ. ಶಾಂತವೀರ ನೇತೃತ್ವದಲ್ಲಿ ನಡೆಸಲಾಯಿತು.

ಬಿಜೆಪಿ ಮುಖಂಡನ ವಿರುದ್ಧ ವೈದ್ಯೆ ದೂರು

ಬಳ್ಳಾರಿ: ಬಿಜೆಪಿ ಬೆಂಗಳೂರು ಘಟಕದ ಸಾಮಾಜಿಕ ಮಾಧ್ಯಮ ಸಂಚಾಲಕ ವಿನೋದ್ ಕೃಷ್ಣಮೂರ್ತಿ ಎಂಬಾತ ತನಗೆ ದೈಹಿಕ, ಮಾನಸಿಕ ಕಿರುಕುಳ ನೀಡಿ, ಜೀವ ಬೆದರಿಕೆ ಹಾಕಿರುವುದಾಗಿ ಬಳ್ಳಾರಿ ನಗರದ ವೈದ್ಯೆಯೊಬ್ಬರು ಕೌಲ್‌ಬಜಾರ್ ಠಾಣೆಗೆ ದೂರು ನೀಡಿದ್ದಾರೆ.

ದೂರಿನಲ್ಲೇನಿದೆ?: 2020ರಲ್ಲಿ ವೈದ್ಯೆ ಬೆಂಗಳೂರಿನಲ್ಲಿ ವಾಸವಿದ್ದಾಗ ಆರೋಪಿ ವಿನೋದ್ ಪರಿಚಯವಾಗಿದ್ದ. ನಂತರ ಕಿರುಕುಳ ನೀಡಲಾರಂಭಿಸಿದ್ದ. ವೈದ್ಯೆ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸಿದ್ದ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

‘ತನ್ನ ಬಳಿ ಅಶ್ಲೀಲ ಫೋಟೊಗಳಿದ್ದು, ಅವುಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಬಿಡುವುದಾಗಿ ಹಿಂಸೆ ನೀಡುತ್ತಿದ್ದ. ಮೇ 23ರಂದು ವೈದ್ಯೆಗೆ ಕರೆ ಮಾಡಿದ್ದ ಆರೋಪಿ, ‘ಗೂಂಡಾಗಳನ್ನು ಬಿಟ್ಟು ನಿನ್ನ ಕ್ಲಿನಿಕ್ ಮೇಲೆ ದಾಳಿ ಮಾಡಿಸುತ್ತೇನೆ. ಅತ್ಯಾಚಾರ ಮಾಡಿಸುತ್ತೇನೆ. ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲ’ ಎಂದು ಜೀವಬೆದರಿಕೆ ಹಾಕಿದ್ದಾನೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

‘ನಿನ್ನ ಮಗನ ಹೆಸರಿನಲ್ಲಿರುವ ಮನೆಯನ್ನು ನನ್ನ ಹೆಸರಿಗೆ ಮಾಡಿಕೊಡಬೇಕು, ₹45 ಲಕ್ಷ ಹಣ ಕೊಡಬೇಕು’ ಎಂದು ಕೇಳಿದ್ದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆರೋಪಿಯನ್ನು ಇನ್ನಷ್ಟೇ ಬಂಧಿಸಬೇಕಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಿಮ್‌ಕಾರ್ಡ್ ನೆಟ್‌ವರ್ಕ್ ಬಂದ್ ಮಾಡಿಸಿ ಹಣ ದೋಚುವ ಜಾಲ ಸಕ್ರಿಯ

ಲಿಂಕ್ ಒತ್ತುತ್ತಿದ್ದಂತೆ ₹7 ಲಕ್ಷ ಮಾಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವೃದ್ಧರೊಬ್ಬರ ಸಿಮ್‌ಕಾರ್ಡ್ ನೆಟ್‌ವರ್ಕ್ ಬಂದ್ ಮಾಡಿಸಿ ಅವರ ಖಾತೆಯಲ್ಲಿದ್ದ ₹7 ಲಕ್ಷವನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

‘ವಸಂತನಗರದಲ್ಲಿ ವಾಸವಿರುವ 78 ವರ್ಷ ವಯಸ್ಸಿನ ವೃದ್ಧರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಗಣೇಶ್, ಕಿಷನ್ ಬಾಯಿ, ರಾಜು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರರ ಮೊಬೈಲ್ ಸಂಖ್ಯೆಗೆ, 700*****46 ಮೊಬೈಲ್ ಸಂಖ್ಯೆಯಿಂದ ಮೇ 28ರಂದು ಮಧ್ಯಾಹ್ನ ಸಂದೇಶ ಬಂದಿತ್ತು. ‘ನಿಮ್ಮ ಸಿಮ್‌ಕಾರ್ಡ್ ನವೀಕರಣ ಮಾಡಿಕೊಳ್ಳಿ. ಇಲ್ಲದಿದ್ದರೆ, ಸಿಮ್‌ಕಾರ್ಡ್ ನಿಷ್ಕ್ರಿಯ ಆಗುತ್ತದೆ. ಪುನಃ ಅದೇ ಮೊಬೈಲ್ ನಂಬರ್ ಸಿಗುವುದಿಲ್ಲ’ ಎಂಬುದಾಗಿ ಸಂದೇಶದಲ್ಲಿ ಬರೆಯಲಾಗಿತ್ತು. ‘ಸಿಮ್ ಕಾರ್ಡ್ ನವೀಕರಣ ಮಾಡಲು ಇಲ್ಲಿ ಕ್ಲಿಕ್ ಮಾಡಿ’ ಎಂಬುದಾಗಿ ನಮೂದಿಸಿ ಜಾಲತಾಣವೊಂದರ ಲಿಂಕ್ ಸಹ ನೀಡಲಾಗಿತ್ತು.’

ಮುಖ್ಯಾಂಶಗಳು

- ವಸಂತನಗರದ ವೃದ್ಧರೊಬ್ಬರ ಖಾತೆಯಲ್ಲಿದ್ದ ಹಣ ಅಕ್ರಮವಾಗಿ ವರ್ಗಾವಣೆ
- ಸಿಮ್‌ಕಾರ್ಡ್ ನವೀಕರಣಕ್ಕೆ ಇಲ್ಲಿ ಕ್ಲಿಕ್ ಮಾಡಿ ಎಂದು ಸಂದೇಶ ಕಳಿಸಿ ವಂಚನೆ
- ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್ಐಆರ್ ದಾಖಲು

‘ಸಂದೇಶ ನಿಜವೆಂದು ನಂಬಿದ್ದ ದೂರುದಾರ, ಲಿಂಕ್ ಕ್ಲಿಕ್ ಮಾಡಿದ್ದರು. ನಂತರ, ಸ್ವಯಂಚಾಲಿತವಾಗಿ ಮೊಬೈಲ್‌ಗೆ ಒಟಿಪಿ ಬಂದು ನಮೂದಾಗಿತ್ತು. ಇದಾದ ಕೆಲ ಕ್ಷಣಗಳಲ್ಲಿ ದೂರುದಾರರ ಮೊಬೈಲ್ ನೆಟ್‌ವರ್ಕ್ ಬಂದ್ ಆಗಿತ್ತು. ಎಷ್ಟೇ ಪ್ರಯತ್ನಿಸಿದರೂ ನೆಟ್‌ವರ್ಕ್ ವಾಪಸು ಬಂದಿರಲಿಲ್ಲ’ ಎಂದು ಮೂಲಗಳು ತಿಳಿಸಿವೆ.

‘ಮೊಬೈಲ್‌ನ ನೆಟ್‌ವರ್ಕ್ ಇಲ್ಲದಿರುವ ಸಮಯದಲ್ಲಿಯೇ ಆರೋಪಿಗಳು, ದೂರುದಾರರ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹7 ಲಕ್ಷ ಹಣವನ್ನು ತಮ್ಮ ವಿವಿಧ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಹಣ ವರ್ಗಾವಣೆ ಗಮನಕ್ಕೆ ಬರುತ್ತಿದ್ದಂತೆ ದೂರುದಾರ, ಬ್ಯಾಂಕ್ ಸಿಬ್ಬಂದಿಯನ್ನು ಸಂಪರ್ಕಿಸಿದ್ದರು. ಯಾರೋ ಅಪರಿಚಿತರು ದೂರುದಾರರ ಹೆಸರಿನಲ್ಲಿ ಹಣ ವರ್ಗಾಯಿಸಿಕೊಂಡು ವಂಚಿಸಿರುವುದು ಗೊತ್ತಾಗಿತ್ತು. ನಂತರವೇ ದೂರುದಾರ, ದಾಖಲೆ ಸಮೇತ ಠಾಣೆಗೆ ದೂರು ನೀಡಿದ್ದಾರೆ’ ಎಂದು ಹೇಳಿವೆ.

‘ಲಿಂಕ್ ಸಹಾಯದಿಂದ ಸಿಮ್‌ಕಾರ್ಡ್ ನೆಟ್‌ವರ್ಕ್ ಬಂದ್ ಮಾಡಿಸಿ ಹಣ ದೋಚುವ ಜಾಲದ ಕೃತ್ಯ ಇದಾಗಿದೆ. ಸಾರ್ವಜನಿಕರು ಯಾವುದೇ ಲಿಂಕ್ ತೆರೆಯುವ ಮುನ್ನ ಎಚ್ಚರಿಕೆ ವಹಿಸಬೇಕು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೌಶಲವಿದ್ದಾಗ ಗೊಂದಲವಿರದು

ದ್ವಿತೀಯ ಪಿಯು ಮುಗಿಸಿ, ಬಿಟೆಕ್ (ಕಂಪ್ಯೂಟರ್ ಸೈನ್ಸ್) ಅಥವಾ ಆರ್ಕಿಟೆಕ್ಚರ್ ಮಾಡಬೇಕೆಂದುಕೊಂಡಿದ್ದೇನೆ. ಆದರೆ, ಇವೆರಡರ ನಡುವೆ ಆಯ್ಕೆ ಮಾಡುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

ವೃತ್ತಿಜೀವನದಲ್ಲಿ ಪ್ರಗತಿ ಮತ್ತು ಯಶಸ್ಸನ್ನು ಸಾಧಿಸಲು, ಆಸಕ್ತಿ, ಅಭಿರುಚಿ ಮತ್ತು ವೃತ್ತಿ ಸಂಬಂಧಿತ ಕೌಶಲಗಳು ಅಗತ್ಯ. ಎಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ ಕೋರ್ಸ್‌ಗಳಿಗೆ ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಹಾಗೂ ಸಮಸ್ಯೆಗಳನ್ನು ಬಗೆಹರಿಸುವ ಕೌಶಲಗಳು ಅಗತ್ಯ. ಆದರೆ ಯಶಸ್ವಿ ಆರ್ಕಿಟೆಕ್ಟ್ ಆಗಲು, ಈ ಕೌಶಲಗಳ ಜತೆಗೆ ಈ ಕ್ಷೇತ್ರದಲ್ಲಿ ಅಭಿರುಚಿ, ಸೃಜನಶೀಲತೆ, ವಿನ್ಯಾಸದ ಆಸಕ್ತಿ ಬೇಕು. ಅಂತಿಮ ಆಯ್ಕೆಗೂ ಮುನ್ನ ಈ ಕೌಶಲಗಳಿವೆಯೇ ಎಂದು ವಿಶ್ಲೇಷಿಸಿ. ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/AwlDno1YduQ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

41) ರಾಬರ್ಟ್ ಕ್ಲೈವ್ ಬಗ್ಗೆ ಬರೆಯಿರಿ

ಉತ್ತರ:– ಭಾರತದಲ್ಲಿ ಬ್ರಿಟಿಷ್ ಅಧಿಕಾರವನ್ನು ಕಟ್ಟಿದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕಾರಕೂನನಾಗಿ ಸೇವೆಗೆ ಸೇರಿದ್ದನು. ಕಾರ್ನಾಟಿಕ್ ಯುದ್ಧದಲ್ಲಿ ಅದರಲ್ಲೂ ಆರ್ಕಾಟ್‌ನ ಮುತ್ತಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿ, ಬ್ರಿಟಿಷರ ವಿಜಯಕ್ಕೆ ಕಾರಣನಾದನು. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಅಸ್ತಿತ್ವ ರೂಪಿಸುವಲ್ಲಿ ಸಫಲನಾದ ಈತ ಬಂಗಾಳದ ವಿಜಯಕ್ಕೂ ಕಾರಣನಾದನು. 1757ರ ಪ್ಲಾಸಿ ಕದನದ ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೆ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು. ಅಪಾರ ಸಂಪತ್ತಿನಿಂದ ಇಂಗ್ಲೆಂಡಿಗೆ ಹಿಂದಿರುಗಿದ ಕ್ಲೈವನು ಸಂಸತ್ತಿನ ಸದಸ್ಯನಾಗಿ ಸಹ ನೇಮಕಗೊಂಡನು. ರಾಬರ್ಟ್ ಕ್ಲೈವನು ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ವ್ಯಾಪಾರದಲ್ಲಿ ನಷ್ಟವನ್ನು ಅನುಭವಿಸತೊಡಗಿತು. ಅವನ ಮೇಲೆ ಆಪಾದನೆಗಳು ಇದ್ದಾಗ್ಯೂ ಸಹ ಅನಿವಾರ್ಯತೆಯಲ್ಲಿ ಸರ್ಕಾರವು ಮತ್ತೆ ಕ್ಲೈವ್‌ನನ್ನು ಬ್ರಿಟಿಷರ ಘನತೆ ಮತ್ತು ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಭಾರತಕ್ಕೆ ಸೇನಾಪತಿಯಾಗಿ ಕಳುಹಿಸಿಕೊಟ್ಟಿತು.

ಬಕ್ಸಾರ್ ಕದನದಲ್ಲಿ ಮತ್ತೆ ವಿಜಯಿಯಾಗಿ ಬ್ರಿಟಿಷರಿಗೆ ಘನತೆಯನ್ನು ತಂದುಕೊಟ್ಟ ಕ್ಲೈವನು ಬಂಗಾಳ, ಬಿಹಾರ, ಒಡಿಶಾ ಪ್ರಾಂತ್ಯಗಳ ಮೇಲೆ ದಿವಾನಿ ಹಕ್ಕನ್ನು ಕಂಪನಿಗೆ ತಂದುಕೊಟ್ಟನು. ಇದರಿಂದ ಮತ್ತೆ ಸಂಪತ್ತನ್ನು ತನಗೂ ಮತ್ತು ಈಸ್ಟ್ ಇಂಡಿಯಾ ಕಂಪನಿಗೆ ದೊರಕಿಸಿಕೊಂಡು 1767ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದನು.

42) ಡೂಪ್ಲೆ ಬಗ್ಗೆ ಬರೆಯಿರಿ

ಉತ್ತರ:– ಡೂಪ್ಲೆ ಭಾರತದಲ್ಲಿನ ಫ್ರೆಂಚ್ ಅಧಿಪತ್ಯಗಳ ಮೇಲಿನ ಗವರ್ನರ್ ಜನರಲ್ ಆಗಿ 1742ರಲ್ಲಿ ನೇಮಕಗೊಂಡನು. ಭಾರತದ ಮೇಲೆ ರಾಜಕೀಯ ಅಧಿಪತ್ಯ ಸ್ಥಾಪನೆಯ ಕನಸನ್ನು ಕಾಣುತ್ತಿದ್ದ ಡೂಪ್ಲೆ ಇಲ್ಲಿನ ದೇಶೀಯ ರಾಜರುಗಳ ಜೊತೆ ಒಪ್ಪಂದಗಳನ್ನು ಮಾಡಿಕೊಂಡಿದ್ದನು. ಡೂಪ್ಲೆ ಕಟ್ಟಿದ ದೇಶಿ ಸೇನೆಯಿಂದಲೇ ಹೈದರಾಲಿಯು ಸಹ ತರಬೇತಿ ಪಡೆದಿದ್ದನು. ಬ್ರಿಟಿಷರಿಗೆ ಡೂಪ್ಲೆಯು ತಮ್ಮ ಅಧಿಪತ್ಯ ಸ್ಥಾಪನೆಗೆ ಸವಾಲಾಗಿ ಪರಿಣಮಿಸಿದ. ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ಬ್ರಿಟಿಷರ ನಡುವಿನ ಸಂಘರ್ಷವು 1754ರವರೆಗೆ ನಡೆಯಿತು. ತದನಂತರದಲ್ಲಿ ಫ್ರಾನ್ಸಿನ ಸರ್ಕಾರವೇ ಶಾಂತಿಯನ್ನು ಬಯಸಿ ಡೂಪ್ಲೆಯನ್ನು ಹಿಂದಕ್ಕೆ ಕರೆಸಿಕೊಂಡಿತು.

43) ದಸ್ತಕ್ ಎಂದರೇನು?

ಉತ್ತರ: ಯಾವುದೇ ತೆರಿಗೆ ಇಲ್ಲದೇ ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಿಗೆ ಪತ್ರ

44) 1717ರಲ್ಲಿ ಬಂಗಾಳದಲ್ಲಿ ಮುಕ್ತ ವ್ಯಾಪಾರ ನಡೆಸಲು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಪರವಾನಿಗೆ(ದಸ್ತಕ) ನೀಡಿದವರು ಯಾರು?

ಉತ್ತರ:– ಮೊಗಲ್ ಫಾರೂಕ್ ಷಿಯಾರ

45) ದಸ್ತಕ್ ಅನ್ನು ಯಾರು ದುರುಪಯೋಗ ಪಡಿಸಿಕೊಳ್ಳತೊಡಗಿದರು?

ಉತ್ತರ:– ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ನೌಕರರು ತಮ್ಮ ಖಾಸಗಿ ವ್ಯಾಪಾರ–ವ್ಯವಹಾರಕ್ಕಾಗಿ ದುರುಪಯೋಗ ಪಡಿಸಿಕೊಳ್ಳತೊಡಗಿದರು

46) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?

ಉತ್ತರ:– ಪ್ಲಾಸಿ ಮತ್ತು ಬಕ್ಸಾರ್ ಕದನಗಳು

47) ಪ್ಲಾಸಿ ಕದನಕ್ಕೆ ಕಾರಣಗಳೇನು?

ಉತ್ತರ:– ಪ್ಲಾಸಿ ಕದನಕ್ಕೆ ಕಾರಣಗಳು

1) **ದಸ್ತಕ್‌ಗಳ ದುರುಪಯೋಗ** : ಕಂಪನಿಯ ವ್ಯಾಪಾರಕ್ಕಾಗಿ ನೀಡಿದ 'ದಸ್ತಕ್'ಗಳನ್ನು ಬ್ರಿಟಿಷ್ ನೌಕರರು ದುರುಪಯೋಗ ಪಡಿಸಿಕೊಳ್ಳುವ ಮೂಲಕ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುತ್ತಿದ್ದದ್ದು ಸಿರಾಜನನ್ನು ಕೆರಳಿಸಿತು.

2. **ಅನುಮತಿ ಇಲ್ಲದೇ ಕೋಟೆಯ ದುರಸ್ಥಿ** : ಬ್ರಿಟಿಷರು ಫ್ರೆಂಚರ ಭಯದಿಂದ ಕಲ್ಕತ್ತಾದ ಕೋಟೆಯನ್ನು ಬಲಪಡಿಸಿ, ಫಿರಂಗಿಗಳನ್ನು ಇಟ್ಟರು. ಅನುಮತಿ ಪಡೆಯದೇ ಕೋಟೆಯನ್ನು ದುರಸ್ಥಿ ಮಾಡಿಸಿದ್ದರಿಂದ ಫಿರಂಗಿಗಳನ್ನು ತೆಗೆದು ಹಾಕಲು ಸಿರಾಜ್ ಸೂಚಿಸಿದನಾದರೂ ಅವರು ಪಾಲಿಸಲಿಲ್ಲ. ಇದರಿಂದ ಸಿರಾಜನು ಆಕ್ರೋಶಗೊಂಡನು.

3. **ಕಪ್ಪುಕೋಣೆ ದುರಂತ** : ಆಗ ಸಿರಾಜನು ಫೋರ್ಟ್ ವಿಲಿಯಂ ಕೋಟೆಯನ್ನು ಸುಲಭವಾಗಿ ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು ಎಂಬುದಾಗಿತ್ತು. ಇದನ್ನು ಕಪ್ಪುಕೋಣೆಯ ದುರಂತ ಎಂದು ಕರೆಯಲಾಗಿದೆ. ಈ ಸುದ್ದಿ ಕೇಳಿ ರಾಬರ್ಟ್ ಕ್ಲೈವ್ ಉಗ್ರ ಕೋಪದಲ್ಲಿ ಬಲಿಷ್ಠ ಸೇನೆಯೊಂದಿಗೆ ಬಂಗಾಳಕ್ಕೆ ಬಂದನು

48) ಪ್ಲಾಸಿ ಕದನದ ಪರಿಣಾಮಗಳೇನು?

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

DIFFERENTIABILITY

6. Differentiate the following functions w.r.t.x:

(i) $(ax+b)^n$

(ii) $\dfrac{1}{\sqrt{a^2-x^2}}$

(iii) $\sqrt{ax^2+bx+c}$

(.........Contd)

(iii) $\dfrac{d}{dx}\sqrt{ax^2+bx+c}$

$$=\frac{d}{dx}(ax^2+bx+c)^{1/2}$$

$$\Rightarrow\left(\frac{1}{2}\right)(ax^2+bx+c)^{1/2}.\frac{d}{dx}(ax^2+bx+c)$$

[Chain Rule]

$$=\frac{1}{2\sqrt{ax^2+bx+c}}.\left\{\frac{d}{dx}ax^2+\frac{d}{dx}bx+\frac{d}{dx}c\right\}$$

$$=\frac{1}{2\sqrt{ax^2+bx+c}}.\{a(2x)+b(1)+0\}$$

$$=\frac{2ax+b}{2\sqrt{ax^2+bx+c}}.$$

7. Differentiate w.r.t.x:

i) $e^{\cos x}$ ii) $\sin^3 x$ iii) $\sin x^3$ iv) e^{x2}

Soln :– i) $\dfrac{d}{dx}e^{\cos x}=e^{\cos x}.\dfrac{d}{dx}\cos x$

$$=e^{\cos x}.(-\sin x)$$

$$=(-e^{\cos x}.\sin x).$$

ii) $\dfrac{d}{dx}\sin^3 x=\dfrac{d}{dx}(\sin x)^3=3(\sin x)^2.\dfrac{d}{dx}\sin x$

$$=3(\sin x)^2(\cos x)$$

iii) $\dfrac{d}{dx}\sin(x)^3=\cos x^3.\dfrac{d}{dx}x^3$

$$=(\cos x)^3.(3x^2)=3x^2\cos x^3.$$

iv) $\dfrac{d}{dx}e^{x^2}=e^{x^2}.\dfrac{d}{dx}x^2=e^{x^2}.2x$

8. Differentiate w.r.t. x:

i) $\sqrt{a+\sqrt{a+x}}$ ii) $\dfrac{\sqrt{1-x^2}}{1+x^2}$ iii) $\dfrac{\sqrt{a+x}-\sqrt{a-x}}{\sqrt{a+x}+\sqrt{a-x}}$

iv) $x+\sqrt{x^3-1}$ v) $e^{\sin\sqrt{x}}$ vi) $\log\left(x+\sqrt{x^2+a^2}\right)$

vii) $\dfrac{\sin x}{\sqrt{\cos x}}$

Soln :–i) $\dfrac{d}{dx}\sqrt{a+\sqrt{a+x}}=\dfrac{d}{dx}\left\{a+\sqrt{a+x}\right\}^{1/2}$

$$\Rightarrow\frac{1}{2}\left\{a+\sqrt{a+x}\right\}^{-1/2}.\frac{d}{dx}\left\{a+\sqrt{a+x}\right\}$$

$$\Rightarrow\frac{1}{2\sqrt{a+\sqrt{a+x}}}.\left\{\frac{d}{dx}a+\frac{d}{dx}(a+x)^{1/2}\right\}$$

$$\Rightarrow\frac{1}{2\sqrt{a+\sqrt{a+x}}}.\left\{0+\frac{1}{2}(a+x)^{-1/2}.\frac{d}{dx}(a+x)\right\}$$

$$\Rightarrow\frac{1}{2\sqrt{a+\sqrt{a+x}}}\left\{\frac{1}{2\sqrt{a+x}}.(0+1)\right\}$$

$$\Rightarrow\frac{1}{4\sqrt{a+\sqrt{a+x}}\left(\sqrt{a+x}\right)}$$

ii) $\dfrac{d}{dx}\sqrt{\dfrac{1-x^2}{1+x^2}}=\dfrac{d}{dx}\left(\dfrac{1-x^2}{1+x^2}\right)^{1/2}$

$$\Rightarrow\frac{1}{2}\left(\frac{1-x^2}{1+x^2}\right)^{-1/2}.\frac{d}{dx}\left(\frac{1-x^2}{1+x^2}\right)\text{(Chain Rule)}$$

$$\Rightarrow\frac{1}{2}\sqrt{\frac{1+x^2}{1-x^2}}.\left\{\frac{(1+x^2)\frac{d}{dx}(1-x^2)-(1-x^2)\frac{d}{dx}(1+x^2)}{(1+x^2)^2}\right\}$$

$$\Rightarrow\frac{1}{2}\sqrt{\frac{1+x^2}{1-x^2}}.\left\{\frac{(1+x^2)(-2x)-(1-x^2)(2x)}{(1+x^2)^2}\right\}$$

$$\Rightarrow\frac{(-2x)-\left(1+x^2+1-x^2\right)}{2\sqrt{1-x^2}(1+x^2)^{3/2}}$$

$$\Rightarrow\frac{-4x}{2\sqrt{1-x^2}(1+x^2)^{3/2}}\Rightarrow\frac{-2x}{\sqrt{1-x^2}(1+x^2)^{3/2}}.$$

iii) Let $y=\dfrac{\sqrt{a+x}-\sqrt{a-x}}{\sqrt{a+x}+\sqrt{a-x}}$

$$=\left(\frac{\sqrt{a+x}-\sqrt{a-x}}{\sqrt{a+x}+\sqrt{a-x}}\right)\left(\frac{\sqrt{a+x}-\sqrt{a-x}}{\sqrt{a+x}-\sqrt{a-x}}\right)$$

[Rationalising]

$$=\frac{\left(\sqrt{a+x}-\sqrt{a-x}\right)^2}{(a+x)-(a-x)}$$

$$=\frac{a+x+a-x-2\sqrt{a+x}\sqrt{a-x}}{2x}$$

$$=\frac{2\left(a-\sqrt{a+x}\sqrt{a-x}\right)}{2x}=\frac{a-\sqrt{a^2-x^2}}{x}$$

$$\Rightarrow\frac{d}{dx}y=\frac{d}{dx}\left\{\frac{a-\sqrt{a^2-x^2}}{x}\right\}$$


$$=\frac{x\frac{d}{dx}\left(a-\sqrt{a^2-x^2}\right)-\left(a-\sqrt{a^2-x^2}\right)\frac{d}{dx}x}{x^2}$$

$$=\frac{x\left\{-\frac{(-2x)}{2\sqrt{a^2-x^2}}\right\}-\left(a-\sqrt{a^2-x^2}\right)(1)}{x^2}$$

$$=\left\{\frac{\frac{x^2}{\sqrt{a^2-x^2}}-a+\sqrt{a^2-x^2}}{x^2}\right\}$$

$$=\frac{x^2-a\sqrt{a^2-x^2}+a^2-x^2}{x^2\sqrt{a^2-x^2}}=\frac{a\left(a-\sqrt{a^2-x^2}\right)}{x^2\sqrt{a^2-x^2}}$$

(Contd....)



ಸುಭಾಷಿತ

ಅವಕಾಶ ಎಂಬುದು ಸದಾ ಕಷ್ಟದ ನಡುವೆಯೇ ಅಡಗಿರುತ್ತದೆ.

-ಆಲ್ಬರ್ಟ್ ಐನ್‌ಸ್ಟೀನ್

'ನಿಧಿ' ಬಳಕೆಯಲ್ಲಿ ಶಾಸಕರ ನಿರಾಸಕ್ತಿ ಸಮರ್ಥನೀಯವಲ್ಲ

ಅಭಿವೃದ್ಧಿ ಕಾಮಗಾರಿಗಳು ಮತ್ತು ಸೇವೆಗಳ ವಿಚಾರದಲ್ಲಿ ಕ್ಷೇತ್ರದ ಜನರ ಆಶೋತ್ತರಗಳಿಗೆ ಸ್ಪಂದಿಸಲು ಶಾಸಕರಿಗೆ ಅನುಕೂಲವಾಗುವಂತೆ 2001-02ರಿಂದ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ (ಕೆಎಲ್‌ಲ್ಯಾಡ್ಸ್) ಯೋಜನೆಯನ್ನು ಅನುಷ್ಠಾನಕ್ಕೆ ತರಲಾಯಿತು. ಪ್ರತಿ ವರ್ಷವೂ ಈ ನಿಧಿಯಡಿ ಮಂಜೂರಾಗುವ ಅನುದಾನವನ್ನು ಬಳಸಿಕೊಂಡು ತಮ್ಮ ಆಯ್ಕೆಯ ಸಾರ್ವಜನಿಕ ಕಾಮಗಾರಿಗಳನ್ನು ಕೈಗೊಳ್ಳುವುದು ಮತ್ತು ಆ ಕ್ಷೇತ್ರದ ಜನರಿಗೆ ಸೇವೆಗಳನ್ನು ಒದಗಿಸುವುದಕ್ಕೆ ಅವಕಾಶವಿದೆ. ಆರಂಭದಲ್ಲಿ ಈ ಯೋಜನೆಯಡಿ ಪ್ರತಿ ಶಾಸಕರಿಗೆ ವರ್ಷಕ್ಕೆ ₹ 25 ಲಕ್ಷ ಅನುದಾನ ಒದಗಿಸಲಾಗುತ್ತಿತ್ತು. 2006-07ರಲ್ಲಿ ಅನುದಾನವನ್ನು ₹ 1 ಕೋಟಿಗೆ ಹೆಚ್ಚಿಸಲಾಯಿತು. 2013-14ರಿಂದ ಪ್ರತಿ ಶಾಸಕರಿಗೆ ವಾರ್ಷಿಕ ₹ 2 ಕೋಟಿ ಅನುದಾನ ನೀಡಲಾಗುತ್ತಿದೆ. ವಿಧಾನಸಭೆಯ 224 ಮತ್ತು ವಿಧಾನ ಪರಿಷತ್‌ನ 75 ಸದಸ್ಯರಿಗೆ ಕೆಎಲ್‌ಲ್ಯಾಡ್ಸ್ ಅಡಿಯಲ್ಲಿ ಅನುದಾನ ದೊರಕುತ್ತಿದೆ. ತಮ್ಮ ಕ್ಷೇತ್ರಕ್ಕೆ ದೊರಕುವ ಅನುದಾನದ ಪ್ರಮಾಣ ಸಾಲದು ಎಂದು ಅವಕಾಶ ಸಿಕ್ಕಾಗಲೆಲ್ಲ ಸರ್ಕಾರದ ವಿರುದ್ಧ ಹರಿಹಾಯುವ ಶಾಸಕರು, ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ದೊರಕುವ ಅನುದಾನವನ್ನು ಕಾಲಮಿತಿಯೊಳಗೆ ಬಳಕೆ ಮಾಡುತ್ತಿಲ್ಲ ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರ ಸಭೆಯಲ್ಲಿ ಬಹಿರಂಗವಾಗಿದೆ. 2023-24ನೇ ಆರ್ಥಿಕ ವರ್ಷದಲ್ಲಿ ರಾಜ್ಯದ ಶಾಸಕರಿಗೆ ಕೆಎಲ್‌ಲ್ಯಾಡ್ಸ್ ಅಡಿಯಲ್ಲಿ ಹಿಂದಿನ ವರ್ಷಗಳ ಬಾಕಿಯೂ ಸೇರಿದಂತೆ ಲಭ್ಯವಿದ್ದ ₹ 1,256 ಕೋಟಿ ಅನುದಾನದಲ್ಲಿ ಬರೀ ₹ 218 ಕೋಟಿ ವೆಚ್ಚ ಮಾಡಲಾಗಿದೆ ಎಂಬುದು ಶಾಸಕರ ನಿರಾಸಕ್ತಿಗೆ ಕನ್ನಡಿ ಹಿಡಿದಿದೆ. ₹ 1,038 ಕೋಟಿಯಷ್ಟು ಅನುದಾನ ಜಿಲ್ಲಾಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗಳಲ್ಲಿ ವರ್ಷದಿಂದ ಬಾಕಿ ಉಳಿದಿದೆ.




ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ನೀಡುವ ಅನುದಾನ ಬಳಕೆಗೆ ಶಾಸಕರು ನಿರಾಸಕ್ತಿ ತೋರುತ್ತಿರುವುದರ ಹಿಂದಿನ ಗುಟ್ಟು ಬಯಲಾಗಬೇಕಿದೆ

ಕುಡಿಯುವ ನೀರು ಪೂರೈಕೆ, ರಸ್ತೆಗಳ ನಿರ್ಮಾಣ, ಶಾಲಾ, ಕಾಲೇಜುಗಳ ಕಟ್ಟಡ, ಶೌಚಾಲಯ ನಿರ್ಮಾಣ, ವಿದ್ಯಾರ್ಥಿ ನಿಲಯಗಳು, ಆಸ್ಪತ್ರೆ, ಆರೋಗ್ಯ ಕೇಂದ್ರಗಳಲ್ಲಿ ಹೊಸ ಕೊಠಡಿಗಳ ನಿರ್ಮಾಣ, ಅಂಗನವಾಡಿ ಕಟ್ಟಡಗಳ ನಿರ್ಮಾಣ, ಕೃತಕ ಕಾಲು ಜೋಡಣೆ ಸೇರಿದಂತೆ ಅನೇಕ ಜನಸ್ನೇಹಿ ಕಾಮಗಾರಿಗಳು, ಕೆಲಸಗಳನ್ನು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಅವಕಾಶವಿದೆ. ಈ ನಿಧಿಯಡಿ ಒದಗಿಸುವ ಅನುದಾನದ ಮೊತ್ತವನ್ನು ಹೆಚ್ಚಿಸುವಂತೆ ಪ್ರತಿ ಬಾರಿಯೂ ವಿಧಾನಮಂಡಲದ ಅಧಿವೇಶನದಲ್ಲಿ ಬೇಡಿಕೆ ಇಡುವ ಶಾಸಕರು, ಲಭ್ಯವಿರುವ ಅನುದಾನದ ಬಳಕೆಗೆ ಆಸಕ್ತಿ ತೋರದಿರುವುದು ತಮ್ಮನ್ನು ಆಯ್ಕೆ ಮಾಡಿದ ಮತದಾರರಿಗೆ ದ್ರೋಹ ಬಗೆದಂತೆ. ಈ ನಿಧಿಯಡಿ ಕೈಗೆತ್ತಿಕೊಂಡ 31,236 ಕಾಮಗಾರಿಗಳು ಹಲವು ವರ್ಷಗಳಿಂದಲೂ ಪೂರ್ಣಗೊಂಡಿಲ್ಲ. ಶಾಸಕರು ತಮ್ಮ ಆಯ್ಕೆಯ ಕಾಮಗಾರಿಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ, ಅನುಮೋದನೆ ಪಡೆಯಬೇಕಾಗುತ್ತದೆ. ಕೆಳಹಂತದ ಅಧಿಕಾರಿಗಳು ಕ್ರಿಯಾ ಯೋಜನೆ ಮತ್ತು ಕಾಮಗಾರಿಗಳ ಪಟ್ಟಿ ಅನುಮೋದನೆ, ಮುಂಗಡ ಅನುದಾನ ಬಿಡುಗಡೆಯಲ್ಲಿ ವಿಳಂಬ ಮಾಡುತ್ತಿರುವುದು, ಕಾಮಗಾರಿಗಳ ಆರಂಭಕ್ಕೆ ನಿರಾಸಕ್ತಿ ಮತ್ತು ಪೂರ್ಣಗೊಂಡ ಕಾಮಗಾರಿಗಳ ಗುತ್ತಿಗೆದಾರರಿಗೆ ಬಿಲ್ ಪಾವತಿಸದೇ ಇರುವುದು ಕೆಎಲ್‌ಲ್ಯಾಡ್ಸ್ ಅನುದಾನ ಬಳಕೆಯಲ್ಲಿ ಪ್ರಗತಿ ಕ್ಷೀಣಿಸಲು ಕಾರಣ ಎಂಬ ದೂರುಗಳಿವೆ.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಕೆಗೆ ಅಧಿಕಾರಿಗಳು ಅಡ್ಡಗಾಲು ಹಾಕುತ್ತಿರುವ ಆರೋಪಗಳಲ್ಲಿ ಹುರುಳಿಲ್ಲ ಎಂದು ಹೇಳಲಾಗದು. ಆದರೆ, ವಿಧಾನಮಂಡಲದ ಸದಸ್ಯತ್ವದ ಕಾರಣಕ್ಕಾಗಿ ಶಾಸನಬದ್ಧವಾಗಿ ತಮಗೆ ವಾರ್ಷಿಕವಾಗಿ ಲಭಿಸುತ್ತಿರುವ ₹ 2 ಕೋಟಿ ಅನುದಾನವನ್ನು ಅತ್ಯಂತ ಜವಾಬ್ದಾರಿಯುತವಾಗಿ ಬಳಸುವ ಮೂಲಕ ತೆರಿಗೆ ಹಣದ ಸದ್ಬಳಕೆಯ ಮಾದರಿಯೊಂದನ್ನು ರೂಪಿಸಬೇಕಾದ ಹೊಣೆಗಾರಿಕೆ ಶಾಸಕರ ಮೇಲಿದೆ. ಆದರೆ, ಕಾಮಗಾರಿಗಳ ಪಟ್ಟಿಯನ್ನೂ ಸಲ್ಲಿಸದೆ ₹ 1,038 ಕೋಟಿಯಷ್ಟು ಅಧಿಕ ಮೊತ್ತದ ಅನುದಾನ ನಿರುಪಯುಕ್ತವಾಗಿ ಉಳಿಯುವಂತೆ ಮಾಡಿರುವುದು ಶಾಸಕರ ಬೇಜವಾಬ್ದಾರಿಯುತ ನಡವಳಿಕೆಗೆ ಸಾಕ್ಷಿ. ತಮ್ಮ ಕ್ಷೇತ್ರಕ್ಕೆ ಬೃಹತ್ ಮೊತ್ತದ ಅನುದಾನ ಲಭಿಸಿಲ್ಲ ಎಂದು ಆರೋಪ ಮಾಡುವ, ಈ ಸಂಬಂಧ ವಿಧಾನಮಂಡಲದಲ್ಲಿ ಗದ್ದಲ ಎಬ್ಬಿಸುವ ಶಾಸಕರು ಕೆಎಲ್‌ಲ್ಯಾಡ್ಸ್ ಅನುದಾನ ಬಳಕೆಗೆ ನಿರಾಸಕ್ತಿ ತೋರುತ್ತಿರುವುದರ ಹಿಂದಿನ ಗುಟ್ಟು ಬಯಲಾಗಬೇಕಿದೆ. ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು ಸಮರ್ಪಕವಾಗಿ ಬಳಕೆ ಮಾಡದ ಶಾಸಕರಿಗೆ ದೊಡ್ಡ ಮೊತ್ತದ ಅನುದಾನಕ್ಕೆ ಬೇಡಿಕೆ ಇಡುವ ನೈತಿಕತೆ ಇರಲು ಹೇಗೆ ಸಾಧ್ಯ? ಕಾಲುಸಂಕಗಳಿಲ್ಲದೇ ಹಳ್ಳಿಗರು ಪ್ರವಾಹದಲ್ಲಿ ಕೊಚ್ಚಿ ಹೋಗುವುದು, ಕುಡಿಯುವ ನೀರಿಗೆ ಹಾಹಾಕಾರ, ಶಾಲೆ, ಕಾಲೇಜು, ಆಸ್ಪತ್ರೆ, ಅಂಗನವಾಡಿಗಳಲ್ಲಿನ ಕೊಠಡಿಗಳ ಕೊರತೆಯಂತಹ ಸಮಸ್ಯೆಗಳನ್ನು ನಿವಾರಿಸುವುದಕ್ಕೆ ಅನುದಾನ ಒದಗಿಸಲು ಸರ್ಕಾರ ಹೆಣಗಾಡುತ್ತಿದೆ. ಅಂತಹ ಜನೋಪಯೋಗಿ ಕೆಲಸಗಳಿಗೆ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನೇ ಪೂರ್ಣ ಪ್ರಮಾಣದಲ್ಲಿ ಬಳಸುವ ವಿವೇಚನೆಯನ್ನು ಶಾಸಕರು ತೋರಬೇಕಿದೆ. ಕೆಎಲ್‌ಲ್ಯಾಡ್ಸ್ ಅನುದಾನ ಬಳಕೆಗೆ ಇದೇ ರೀತಿ ನಿರಾಸಕ್ತಿ ಮುಂದುವರಿದರೆ ಈ ಯೋಜನೆಯನ್ನೇ ರದ್ದುಗೊಳಿಸಿ, ಪೂರ್ಣ ಮೊತ್ತದ ಅನುದಾನವನ್ನು ಜನೋಪಯೋಗಿ ಕಾರ್ಯಗಳಿಗೆ ಬಳಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಕೈಗೊಳ್ಳುವ ಅಗತ್ಯವಿದೆ.

ದಿನದ ಟ್ವೀಟ್

ಒಳಚರಂಡಿ ತೆರವುಗೊಳಿಸಿ



ಬೆಂಗಳೂರಿನ ಬಿಲ್ಡರ್‌ಗಳು ಒಳಚರಂಡಿಯನ್ನು ಮುಚ್ಚಿರುವುದರಿಂದ, ನೀರು ರಸ್ತೆಗಳ ಮೇಲೆ ಬಂದು ಪ್ರವಾಹದಂತಹ ಪರಿಸ್ಥಿತಿಯನ್ನು ಉಂಟು ಮಾಡುತ್ತಿದೆ! ಬಿಬಿಎಂಪಿ ಆಯುಕ್ತರೇ, ಈ ಬಗ್ಗೆ ಗಮನಹರಿಸಿ, ದಂಡ ವಿಧಿಸಿ ಮತ್ತು ಒಳಚರಂಡಿಯನ್ನು ತೆರವು ಮಾಡಿಸಿ!

ಅಮಿತ್

ಕಿಡಿನುಡಿ



ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಯಾವುದೇ ಸಂಬಂಧವಿಲ್ಲದ ಒಂಬತ್ತು ಕಂಪನಿಗಳಿಗೆ ಹಣ ವರ್ಗಾಯಿಸಲಾಗಿದೆ. ಸಂಬಂಧಿಸಿದ ಸಚಿವರ ರಾಜೀನಾಮೆಯನ್ನು ಈವರೆಗೂ ಪಡೆದಿಲ್ಲ. ಮೊದಲು ಸಚಿವರ ರಾಜೀನಾಮೆ ಪಡೆದು ಬಂಧಿಸಿ, ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಆಗ, ಇದರಲ್ಲಿ ಯಾರ್‍ಯಾರು ಶಾಮೀಲಾಗಿದ್ದಾರೆ ಎನ್ನುವ ಸತ್ಯಾಂಶ ಬಹಿರಂಗವಾಗಲಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಗುರುವಾರ, 3-6-1999

• ಉಗ್ರರ ನೆಲೆ ಧ್ವಂಸ: ದಾಳಿಗೆ 8 ಬಲಿ

ನವದೆಹಲಿ, ಜೂನ್ 2 (ಪಿಟಿಐ)– ಭಾರತೀಯ ಸೇನೆಯು ಕಾರ್ಗಿಲ್ ವಲಯದ ಬಟಾಲಿಕ್ ಉಪ ವಿಭಾಗದಲ್ಲಿ ಪಾಕಿಸ್ತಾನ ಬೆಂಬಲಿತ ಎಂಟು ಮಂದಿ ಅತಿಕ್ರಮಣಕಾರರನ್ನು ಹತ್ಯೆ ಮಾಡುವುದರೊಂದಿಗೆ ಮಹತ್ವದ ಬೆಳವಣಿಗೆ ಸಾಧಿಸಿದೆ. ಜತೆಗೆ ಇತರೆ ಐವರು ಉಗ್ರಗಾಮಿಗಳನ್ನು ತೀವ್ರವಾಗಿ ಗಾಯಗೊಳಿಸಿದೆ.

ಈ ನಡುವೆ ಭಾರತೀಯ ವಾಯುಪಡೆಯ ಯುದ್ಧ ವಿಮಾನ ಹಾಗೂ ಹೆಲಿಕಾಪ್ಟರ್‌ಗಳು ನಡೆಸಿದ ಎರಡು ಹಂತಗಳ ತೀವ್ರ ಬಾಂಬ್ ದಾಳಿಯಲ್ಲಿ, ಕಾರ್ಗಿಲ್ ವಲಯದಲ್ಲಿದ್ದ ಪಾಕಿಸ್ತಾನದ ಉಗ್ರಗಾಮಿಗಳ ಅಡಗುದಾಣಗಳು ಧ್ವಂಸವಾಗಿವೆ.

• 'ಬೇಹುಗಾರಿಕೆ ವೈಫಲ್ಯ': ಜಾರ್ಜ್ ಕೈಬಿಡಲು ಪ್ರತಿಪಕ್ಷಗಳ ಆಗ್ರಹ

ನವದೆಹಲಿ, ಜೂನ್– 2 (ಪಿಟಿಐ, ಯುಎನ್‌ಐ)– ತಮ್ಮ ವಿವಾದಾತ್ಮಕ ಹೇಳಿಕೆಗಳಿಂದ ಕಾರ್ಗಿಲ್ ಪರಿಸ್ಥಿತಿಯ ಬಗ್ಗೆ ದಿಕ್ಕು ತಪ್ಪಿಸಿ ದೇಶದ ಹಿತವನ್ನು ಕಡೆಗಣಿಸಿರುವ ಸಚಿವ ಜಾರ್ಜ್ ಫರ್ನಾಂಡಿಸ್ ಅವರಿಂದ ರಕ್ಷಣಾ ಖಾತೆಯನ್ನು ವಾಪಸ್ ಪಡೆಯಬೇಕು ಎಂದು ಪ್ರಧಾನಿ ವಾಜಪೇಯಿ ಅವರನ್ನು ಸಿಪಿಐ ಆಗ್ರಹಪಡಿಸಿದೆ.

ಬೇಹುಗಾರಿಕೆ ವೈಫಲ್ಯದ ಹೊಣೆಯನ್ನು ಫರ್ನಾಂಡಿಸ್ ಅವರೇ ಹೊರಬೇಕು ಎಂದು ಸಿಪಿಐನ ಗುರುದಾಸ್ ದಾಸ್‌ಗುಪ್ತಾ ಹಾಗೂ ಜೆ. ಚಿತ್ತರಂಜನ್ ಅವರು ಒತ್ತಾಯಿಸಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 3-6-1974

• ಭಾರತದ ಬಲವರ್ಧನೆಗೆ ವಿದೇಶಗಳ ಅಸಹನೆ: ಪ್ರಧಾನಿಯ ವಿಷಾದ

ಶಿಮ್ಲಾ, ಜೂನ್ 2– ಭಾರತವು ದುರ್ಬಲವಾಗಿದ್ದಾಗ ನೆರವು ನೀಡಲು ಮುಂದೆ ಬರುತ್ತಿದ್ದ ಕೆಲವು ದೇಶಗಳು ಈಗ ಅದು ಪ್ರಬಲ ರಾಷ್ಟ್ರವಾಗಲು ಕ್ರಮ ಕೈಗೊಳ್ಳುತ್ತಿರುವುದನ್ನು ಸಹಿಸುತ್ತಿಲ್ಲ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ವಿಷಾದಿಸಿದರು.

ಕಳೆದ ತಿಂಗಳು ಅಣುಸ್ಫೋಟ ನಡೆಸಿದ್ದಕ್ಕಾಗಿ 'ಭಾರತಕ್ಕೆ ನೆರವು ನಿಲ್ಲಿಸುವುದಾಗಿ' ಈ ದೇಶಗಳು ಬೊಬ್ಬೆ ಹಾಕುತ್ತಿರುವುದನ್ನು ಅವರು ಪ್ರಸ್ತಾಪಿಸಿ, 'ಅಣುಬಾಂಬ್ ತಯಾರಿಕೆ ಇಲ್ಲ' ಎಂಬ ಸರ್ಕಾರದ ನೀತಿಯನ್ನು ಪುನರ್ ಸ್ಪಷ್ಟಪಡಿಸಿದರು.

'ಅಂದಮಾತ್ರಕ್ಕೆ ಕೈಗಾರಿಕೆಯನ್ನು ಆಧುನೀಕರಿಸಿ, ಪ್ರಗತಿಯ ವೇಗವನ್ನು ಹೆಚ್ಚಿಸುವುದಕ್ಕೆ ಅಗತ್ಯವಾದ ಆಧುನಿಕ ತಂತ್ರಜ್ಞಾನವನ್ನು ನಾವು ಪಡೆಯಬಾರದು ಎಂದರ್ಥವಲ್ಲ' ಎಂದೂ ಅವರು ಸ್ಪಷ್ಟಪಡಿಸಿದರು.

ಜನರನ್ನು ಆರೋಗ್ಯಕರ ಆಹಾರಾಭ್ಯಾಸದತ್ತ ತಿರುಗಿಸಬೇಕಾದ ಕಠಿಣ ಸವಾಲು ಸರ್ಕಾರದ ಮುಂದಿದೆ

ಉತ್ತಮ ಆರೋಗ್ಯಕ್ಕೆ ಹೊಸ ಆಹಾರ ಸೂತ್ರ



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ನಮ್ಮ ದೇಶದ ಜನ ರೋಗರುಜಿನಗಳಿಂದ ದೂರವಾಗಿ, ಆರೋಗ್ಯವಂತರಾಗಿ ಬದುಕಲು ಎಂತಹ ಆಹಾರವನ್ನು ಸೇವಿಸಬೇಕು? ಹೈದರಾಬಾದ್‌ನ, 106 ವರ್ಷಗಳ ಇತಿಹಾಸವಿರುವ ಪ್ರತಿಷ್ಠಿತ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್' (ಎನ್‌ಐಎನ್) ಈ ಪ್ರಶ್ನೆಗೆ ಉತ್ತರ ರೂಪವಾಗಿ, 1998ರಲ್ಲಿ 'ಡಯಟರಿ ಗೈಡ್‌ಲೈನ್ಸ್ ಫಾರ್ ಇಂಡಿಯನ್ಸ್' ಎಂಬ 140 ಪುಟಗಳ ಕೈಪಿಡಿಯೊಂದನ್ನು ಪ್ರಕಟಿಸಿತು. 2011ರಲ್ಲಿ ಈ ಕೈಪಿಡಿಯ ಪರಿಷ್ಕೃತ ಎರಡನೆಯ ಆವೃತ್ತಿ ಪ್ರಕಟಗೊಂಡಿತು. ಇದೀಗ ಮೇ ತಿಂಗಳ 7ರಂದು, 'ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್' (ಐಸಿಎಂಆರ್) ಮತ್ತು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್' ಜೊತೆಯಾಗಿ ಸೇರಿ ಭಾರತದ ಪ್ರಜೆಗಳಿಗೆ ಪೋಷಕಾಂಶಭರಿತ, ಸಮತೋಲಿತ ಆಹಾರದ ಮಾರ್ಗದರ್ಶಕ ಸೂತ್ರಗಳನ್ನು ಪ್ರಕಟಿಸಿವೆ.

2011- 24ರ ನಡುವಿನ 13 ವರ್ಷಗಳ ಅವಧಿಯಲ್ಲಿ ನಮ್ಮ ಜನರ ಜೀವನಶೈಲಿ ಮತ್ತು ಆಹಾರಾಭ್ಯಾಸದಲ್ಲಿ ಆಗಿರುವ ಬದಲಾವಣೆಗಳು, ಆಹಾರ- ಪೋಷಕಾಂಶ-ವೈದ್ಯವಿಜ್ಞಾನ ಕ್ಷೇತ್ರಗಳಲ್ಲಿ ಆಗಿರುವ ಸಂಶೋಧನೆಗಳನ್ನು ಗಮನದಲ್ಲಿ ಇಟ್ಟುಕೊಂಡು, 148 ಪುಟಗಳ ನೂತನ ಕೈಪಿಡಿಯನ್ನು ಹೊರತರಲಾಗಿದೆ.

ಈ ಕೈಪಿಡಿಯಲ್ಲಿ, ನಾವು ಬಳಸಬೇಕಾದ ಆಹಾರಕ್ಕೆ ಸಂಬಂಧಿಸಿದಂತೆ 17 ಮಾರ್ಗದರ್ಶಿ ಸೂತ್ರಗಳಿವೆ. ಹೊರ ನೋಟಕ್ಕೆ ಈ ಸೂತ್ರಗಳು ಹೊಸವೆನಿಸುವುದಿಲ್ಲ. ಸಕ್ಕರೆ ಮತ್ತು ಉಪ್ಪಿನ ಪ್ರಮಾಣವನ್ನು ಕಡಿಮೆ ಮಾಡಬೇಕು, ಅಡುಗೆ ಎಣ್ಣೆಯ ಬದಲು ಎಣ್ಣೆಕಾಳುಗಳನ್ನು ಬಳಸುವುದು ಒಳ್ಳೆಯದು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ವಿಶೇಷ ಪೌಷ್ಟಿಕ ಆಹಾರ ನೀಡಬೇಕು, ನಿಯಮಿತವಾಗಿ ವ್ಯಾಯಾಮ ಮಾಡಬೇಕು, ಧೂಮಪಾನ, ಮದ್ಯಪಾನ, ತಂಬಾಕು ಸೇವನೆಯಿಂದ ದೂರವಿರಬೇಕು ಎನ್ನುವಂತಹವು ಎಲ್ಲರಿಗೂ ತಿಳಿದಿರುವ ವಿಷಯಗಳೇ. ಇವುಗಳ ಜೊತೆಗೆ, ಹಿಂದಿನ ಎರಡು ದಶಕಗಳಲ್ಲಿ ನಮ್ಮ ಆಹಾರ ಪದ್ಧತಿಯಲ್ಲಿ ಆಗಿರುವ ಬದಲಾವಣೆಯ ಪರಿಣಾಮಗಳ ಬಗ್ಗೆ ಕೈಪಿಡಿ ಜನರನ್ನು ಎಚ್ಚರಿಸುತ್ತದೆ. ನಮ್ಮ ದೇಶದಲ್ಲಿ ಕಂಡುಬರುತ್ತಿರುವ ರೋಗರುಜಿನಗಳ ಪೈಕಿ ಶೇ 56.4ರಷ್ಟಕ್ಕೆ ಅನಾರೋಗ್ಯಕರವಾದ ಆಹಾರ ಪದ್ಧತಿಯೇ ನೇರ ಕಾರಣವೆಂದು ಕೈಪಿಡಿ ತಿಳಿಸುತ್ತದೆ. ಪೌಷ್ಟಿಕಾಂಶಭರಿತ, ಸಮತೋಲಿತ ಆಹಾರ ಸೇವನೆ ಮತ್ತು ನಿಯಮಿತ ವ್ಯಾಯಾಮಗಳಿಂದ ರಕ್ತದ ಏರೊತ್ತಡ, ಕರೋನರಿ ಹೃದಯ ಕಾಯಿಲೆ ಮತ್ತು ಟೈಪ್-2 ಮಧುಮೇಹದ ಪ್ರಕರಣಗಳನ್ನು ಶೇ 80ರಷ್ಟು ಕಡಿಮೆ ಮಾಡಬಹುದೆಂದು ಸೂಚಿಸುತ್ತದೆ.

ನಾವು ಸೇವಿಸುವ ವಿವಿಧ ಬಗೆಯ ಆಹಾರ ಪದಾರ್ಥಗಳನ್ನು ಪಿರಮಿಡ್ ರೂಪದಲ್ಲಿ ನಿರೂಪಿಸಿದರೆ, ಈ ಮುಂಚಿನ ಮಾರ್ಗದರ್ಶಕ ಸೂತ್ರಗಳಲ್ಲಿ, ಅಕ್ಕಿ, ಗೋಧಿ, ಜೋಳ, ಬೇಳೆಯಾಗದ ಕಾಳಿನಂತಹ ಏಕದಳ ಧಾನ್ಯಗಳು ವಿಶಾಲವಾದ ತಳಭಾಗದಲ್ಲಿದ್ದು, ಅದರ ಮೇಲಿನ ಸ್ವಲ್ಪ ಕಿರಿದಾದ ಹಂತದಲ್ಲಿ ಹಣ್ಣು, ತರಕಾರಿಗಳಿದ್ದವು. 2024ರ ಮಾರ್ಗದರ್ಶಕ ಸೂತ್ರಗಳಲ್ಲಿ ಈ ಎರಡು ಸ್ಥಾನಗಳು ಅದಲು ಬದಲಾಗಿವೆ. ಇದೀಗ ಮೊದಲ ಸ್ಥಾನವನ್ನು ಧಾರಾಳ ಪ್ರಮಾಣದಲ್ಲಿ ಹಣ್ಣು, ತರಕಾರಿಗಳಿಗೆ ನೀಡಿ ಅನಂತರದ ಸ್ಥಾನವನ್ನು ಏಕದಳ ಮತ್ತು ದ್ವಿದಳ ಧಾನ್ಯಗಳಿಗೆ ನೀಡಲಾಗಿದೆ. ನಮ್ಮ ಆಹಾರದಲ್ಲಿರುವ ಅಕ್ಕಿ, ಜೋಳ, ಗೋಧಿಯಂತಹವುಗಳ ಪ್ರಮಾಣವನ್ನು ಸದ್ಯದ ಶೇ 50- 70ರಿಂದ ಶೇ 45ಕ್ಕೆ ಇಳಿಸಬೇಕೆಂಬ ಸೂಚನೆಯಿದೆ. ಪಿರಮಿಡ್‌ನ ಮೂರನೆಯ ಮಟ್ಟದಲ್ಲಿ ಪ್ರಾಣಿ ಮೂಲದ ಆಹಾರ ಪದಾರ್ಥಗಳು ಮತ್ತು ಎಣ್ಣೆಗಳಿದ್ದು, ಅಂತಿಮ ಹಂತದಲ್ಲಿ, ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಳಸಬೇಕಾದ ಸಕ್ಕರೆ, ಉಪ್ಪು, ಮೇದಸ್ಸು ಅಥವಾ ಕೊಬ್ಬಿನ ಅಂಶಗಳನ್ನು ಒಳಗೊಂಡ ಆಹಾರ ಪದಾರ್ಥಗಳಿವೆ. ಅತಿಯಾಗಿ ಸಂಸ್ಕರಿಸಿದ ಆಹಾರ ಪದಾರ್ಥಗಳು (ಅಲ್ಟ್ರಾ ಪ್ರೋಸೆಸ್ಡ್ ಫುಡ್) ಮತ್ತು ಆಹಾರ ಕೆಡದಂತೆ ಕಾಪಾಡಲು ಹೆಚ್ಚಿನ ಪ್ರಮಾಣದಲ್ಲಿ ಸಂರಕ್ಷಕ ವಸ್ತುಗಳನ್ನು ಬಳಸುವ 'ಪ್ಯಾಕೇಜ್ಡ್' ಆಹಾರ ಪದಾರ್ಥಗಳ ಬಗ್ಗೆ ವಿಶೇಷ ಎಚ್ಚರಿಕೆಯನ್ನು ನೀಡಲಾಗಿದೆ.

ಮಾರ್ಗದರ್ಶಕ ಸೂತ್ರಗಳಲ್ಲಿನ ಅತಿಮುಖ್ಯವಾದ ಅಂಶವೆಂದರೆ, ಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರೋಟೀನ್ ಪೂರಕ ಪದಾರ್ಥಗಳನ್ನು (ಪ್ರೋಟೀನ್ ಸಪ್ಲಿಮೆಂಟ್ಸ್) ವೈದ್ಯರ ಸೂಚನೆ, ಮೇಲ್ವಿಚಾರಣೆ ಇಲ್ಲದೆ ಬಳಸಲೇಬಾರದೆಂಬ ಸ್ಪಷ್ಟವಾದ ಎಚ್ಚರಿಕೆ ನೀಡಿರುವುದು. 2023ರಲ್ಲಿ ನಮ್ಮ ದೇಶದಲ್ಲಿ ಪ್ರೋಟೀನ್ ಪೂರಕ ಪದಾರ್ಥಗಳ ಮಾರುಕಟ್ಟೆಯ ಮೌಲ್ಯ ₹ 33,000 ಕೋಟಿ ಇತ್ತು. 2032ರ ವೇಳೆಗೆ ಇದು ₹ 1.28 ಲಕ್ಷ ಕೋಟಿಗೇರುವ ನಿರೀಕ್ಷೆಯಿದೆ. ಕಟ್ಟುನಿಟ್ಟಾದ ಗುಣಮಟ್ಟ ನಿಯಂತ್ರಣ, ಸುರಕ್ಷಾ ಕ್ರಮಗಳು ಇಲ್ಲದಿರುವ ಮಾರುಕಟ್ಟೆಯಿಂದ ಪ್ರೋಟೀನ್ ಪೂರಕ ಪದಾರ್ಥಗಳನ್ನು ಪಡೆದು, ದೀರ್ಘಕಾಲದವರೆಗೆ ಬಳಸಿದರೆ ಮೂಳೆಗಳಲ್ಲಿ ಖನಿಜಾಂಶ ಕಡಿಮೆಯಾಗಿ, ಮೂತ್ರಪಿಂಡದ ಸಮಸ್ಯೆಗಳು ಎದುರಾಗುತ್ತವೆ ಎಂಬುದನ್ನು ಸಂಶೋಧನೆಗಳು ಸ್ಪಷ್ಟವಾಗಿ ತೋರಿಸಿವೆ ಎಂದು ಎನ್‌ಐಎನ್ ಸಂಸ್ಥೆಯ ನಿರ್ದೇಶಕರಾದ ಡಾ. ಹೇಮಲತಾ ಎಚ್ಚರಿಸಿದ್ದಾರೆ.

ಕೇರಳದ ರಾಜಗಿರಿ ಆಸ್ಪತ್ರೆಯ 'ಲಿವರ್ ಇನ್‌ಸ್ಟಿಟ್ಯೂಟ್' ಮತ್ತು ಅಮೆರಿಕದ 'ಹ್ಯೂಮನ್ ಬಿಹೇವಿಯರ್ ಆ್ಯಂಡ್ ಚೇಂಜ್' ಸಂಸ್ಥೆಗಳು, 'ಸಿಟಿಜನ್ ಪ್ರೋಟೀನ್ ಪ್ರಾಜೆಕ್ಟ್' ಹೆಸರಿನಲ್ಲಿ, ನಮ್ಮ ದೇಶದ ಮಾರುಕಟ್ಟೆಯಲ್ಲಿರುವ 36 ಬ್ರ್ಯಾಂಡ್‌ಗಳಿಗೆ ಸೇರಿದ ಪ್ರೋಟೀನ್ ಪೂರಕ ಪದಾರ್ಥಗಳ ವೈಜ್ಞಾನಿಕ ವಿಶ್ಲೇಷಣೆ ನಡೆಸಿವೆ. ಯಾವುದೇ ವಾಣಿಜ್ಯ ಸಂಸ್ಥೆಗಳ ಹಣಕಾಸಿನ ನೆರವನ್ನು ಪಡೆಯದೆ, ಸಂಪೂರ್ಣವಾಗಿ ಸ್ವಂತ ಸಂಪನ್ಮೂಲದಿಂದ ನಡೆಸಿರುವ ಈ ಅಧ್ಯಯನದ ಫಲಿತಾಂಶಗಳು, ಅಮೆರಿಕದ ಬಾಲ್ಟಿಮೋರ್‌ನಿಂದ ಪ್ರಕಟವಾಗುವ 'ಮೆಡಿಸಿನ್' ಸಂಶೋಧನಾ ಜರ್ನಲ್‌ನಲ್ಲಿ ಏಪ್ರಿಲ್ ಮೊದಲ ವಾರ ಪ್ರಕಟಗೊಂಡಿವೆ. ವೈಜ್ಞಾನಿಕ ಪರಿಶೀಲನೆಗೆ ಒಳಗಾದ 36 ಬ್ರ್ಯಾಂಡ್‌ಗಳ ಪೈಕಿ ಶೇ 70ರಷ್ಟರಲ್ಲಿ, ಲೇಬಲ್ ಮೇಲಿರುವ ಮಾಹಿತಿ ಮತ್ತು ಪ್ರೋಟೀನ್ ಪೂರಕ ಪದಾರ್ಥಗಳಲ್ಲಿರುವ ವಸ್ತುಗಳ ನಡುವೆ ವ್ಯತ್ಯಾಸವಿದೆ. ಶೇ 14ರಲ್ಲಿ ಶಿಲೀಂಧ್ರಕಾರಕ ವಿಷ ವಸ್ತುಗಳಿವೆ. ಶೇ 8ರಷ್ಟು ಬ್ರ್ಯಾಂಡ್‌ಗಳಲ್ಲಿ ಕೀಟನಾಶಕ ಮತ್ತು ಭಾರಲೋಹದ ಅಂಶಗಳಿವೆ.



ಈ ಪ್ರೋಟೀನ್ ಪೂರಕ ಪದಾರ್ಥಗಳ ಉತ್ಪಾದಕರು ಅವುಗಳಲ್ಲಿರುವ ವಸ್ತುಗಳು, ಅವುಗಳ ಪ್ರಮಾಣ, ಗುಣಮಟ್ಟದಂತಹವುಗಳಿಗೆ ಸಂಬಂಧಿಸಿದಂತೆ ನಡೆಸಿರುವ ಪರೀಕ್ಷೆಗಳ ವಿವರಗಳನ್ನು 'ಫುಡ್ ಸೇಫ್ಟಿ ಆ್ಯಂಡ್ ಸ್ಟ್ಯಾಂಡರ್ಡ್ಸ್ ಅಥಾರಿಟಿ ಆಫ್ ಇಂಡಿಯಾ' (ಎಫ್‌ಎಸ್‌ಎಸ್‌ಎಐ) ಸಂಸ್ಥೆಗೆ ನೀಡಿ, ತಮ್ಮ ಉತ್ಪನ್ನಗಳ ಬಗ್ಗೆ ಆಶ್ವಾಸನೆ ನೀಡುತ್ತಾರೆ. ಆ ವಿವರಗಳನ್ನು ಎಫ್‌ಎಸ್‌ಎಸ್‌ಎಐ ಪರಿಶೀಲಿಸುತ್ತದೆ. ಆದರೆ ಗುಣಮಟ್ಟದ ನಿಯಂತ್ರಣಕ್ಕೆ ನಡೆಸಿದ ಪರೀಕ್ಷೆಗಳು, ಫಲಿತಾಂಶಗಳು ಸಂಪೂರ್ಣವಾಗಿ ಅಪಾರದರ್ಶಕವಾಗಿದ್ದು ಸಾರ್ವಜನಿಕರಿಗೆ ದೊರೆಯುವುದಿಲ್ಲ. ಔಷಧಗಳ ವಿನ್ಯಾಸ, ಉತ್ಪಾದನೆ, ಪ್ರಾಯೋಗಿಕ ಪರೀಕ್ಷೆಯಂತಹವುಗಳಲ್ಲಿ ಕಂಡುಬರುವ ಕಟ್ಟುನಿಟ್ಟಾದ ಸುರಕ್ಷಾ ಕ್ರಮಗಳು ಪ್ರೋಟೀನ್ ಸಪ್ಲಿಮೆಂಟ್ಸ್ ಕ್ಷೇತ್ರದಲ್ಲಿ ಕಂಡುಬರುವುದಿಲ್ಲ ಎಂಬುದು ವೈದ್ಯವಿಜ್ಞಾನಿಗಳ ಅಭಿಪ್ರಾಯ.

ವೈದ್ಯರು ಸೂಚಿಸುವ ಕೆಲವು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿದರೆ, ಪ್ರೋಟೀನ್ ಪೂರಕ ವಸ್ತುಗಳ ಅಗತ್ಯವೇ ಇಲ್ಲವೆಂಬ ಖಚಿತ ನಿಲುವನ್ನು ಐಸಿಎಂಆರ್ ಮತ್ತು ಎನ್‌ಐಎನ್ ಸಂಸ್ಥೆಗಳ ಪರಿಣತರ ತಂಡ ವ್ಯಕ್ತಪಡಿಸುತ್ತದೆ. ಪ್ರೋಟೀನ್, ಸೂಕ್ಷ್ಮ ಪೋಷಕಾಂಶಗಳು ಮತ್ತು ವಿಟಮಿನ್‌ನಂತಹ ಉಳಿದೆಲ್ಲ ಅಗತ್ಯಗಳನ್ನು ಹಣ್ಣು, ತರಕಾರಿ, ಏಕದಳ, ದ್ವಿದಳ ಧಾನ್ಯಗಳು, ಸಿರಿಧಾನ್ಯಗಳು, ಗೆಡ್ಡೆಗೆಣಸು, ಮೊಟ್ಟೆ, ಮೀನು, ಎಣ್ಣೆಬೀಜಗಳು ಮತ್ತು ಹಾಲಿನ ಉತ್ಪನ್ನಗಳಿಂದ ಪಡೆಯಬಹುದು ಎಂದು ತಿಳಿಸಿದೆ.

ಐಸಿಎಂಆರ್ ಮತ್ತು ಎನ್‌ಐಎನ್ ಪ್ರಕಟಿಸಿರುವ 'ಡಯಟರಿ ಗೈಡ್‌ಲೈನ್ಸ್'ಗಳ ಬಗ್ಗೆ ಇದೀಗ ವ್ಯಾಪಕವಾದ ಚರ್ಚೆಗಳು ಪ್ರಾರಂಭವಾಗಿವೆ. ಹಣ್ಣು, ತರಕಾರಿಗೆ ಮೊದಲ ಸ್ಥಾನ ನೀಡಿ ಅವುಗಳನ್ನು ಧಾರಾಳವಾಗಿ ಬಳಸಬೇಕೆಂಬ ಸಲಹೆಯಿದ್ದರೂ, ದೇಶದ ಕೋಟ್ಯಂತರ ಬಡ ಕುಟುಂಬಗಳಿಗೆ ಅದು ಅಸಾಧ್ಯ. ಅಂತಹ ಪರಿಸ್ಥಿತಿಯಲ್ಲಿ ಈ ಮಾರ್ಗದರ್ಶಕ ಸೂತ್ರಗಳಿಗೆ ಬರೀ ಅಕಡೆಮಿಕ್ ಮೌಲ್ಯವಿರುತ್ತದೆ ಎಂಬ ಟೀಕೆಯಿದೆ. ಸಾರ್ವಜನಿಕರ ಆರೋಗ್ಯದ ಬಗ್ಗೆ ನಿಜವಾದ ಕಾಳಜಿಯಿದ್ದರೆ, ಹೊಸ ಸೂತ್ರಗಳಲ್ಲಿ ಸೂಚಿಸಿರುವ ಎಲ್ಲ ಪೋಷಕಾಂಶ ಪದಾರ್ಥಗಳನ್ನೂ ಸರ್ಕಾರವು ಪಡಿತರ ವ್ಯವಸ್ಥೆಯ ಮೂಲಕ ಬಡ ಕುಟುಂಬಗಳಿಗೆ ವಿತರಿಸಬೇಕೆಂಬ ಸಲಹೆ ಬಂದಿದೆ.

ಅನಾರೋಗ್ಯಕರ ಎಂದು ತಿಳಿದಿದ್ದರೂ ನಾಲಿಗೆಯ ಚಪಲಕ್ಕಾಗಿ ಜಂಕ್‌ಫುಡ್‌ಗೆ ಮುಗಿಬೀಳುವ ಜನರ ಮನವೊಲಿಸಿ, ಅವರನ್ನು ಆರೋಗ್ಯಕರ ಆಹಾರಾಭ್ಯಾಸದತ್ತ ತಿರುಗಿಸುವುದು ಸರ್ಕಾರದ ಮುಂದಿರುವ ಅತ್ಯಂತ ಕಠಿಣವಾದ ಸವಾಲು. ಅದು ಸಾಧ್ಯವಾಗುವವರೆಗೂ ಮುಂಬರುವ ವರ್ಷಗಳಲ್ಲಿ ರೋಗರುಜಿನಗಳ ಹೊರೆ ಏರುತ್ತಲೇ ಹೋಗುತ್ತದೆ ಎಂಬ ಎಚ್ಚರಿಕೆಯನ್ನು ಐಸಿಎಂಆರ್- ಎನ್‌ಐಎನ್ ತಜ್ಞರು ನೀಡಿದ್ದಾರೆ.

ಚುರುಮುರಿ



ಒಬ್ಬಟ್ಟು ಯಾರಿಗೆ?

• ಸುಮಂಗಲಾ

ಪೇಪರು ಓದುತ್ತಿದ್ದ ಬೆಕ್ಕಣ್ಣ 'ಇಂಡಿಯಾ ಬಣದವ್ರ ಮನ್ಯಾಗೆ ಒಬ್ಬಟ್ಟು ಮಾಡ್ತಾರಂತೆ. ಊಟಕ್ಕೆ ಹೋಗೂಣು, ಅಡುಗೆ ಮಾಡಬ್ಯಾಡ' ಎಂದಿತು.

'ಇನ್ನಾ ರಿಸಲ್ಟೇ ಬಂದಿಲ್ಲ, ಈಗ್ಲೇ ಸಿಹಿಯೂಟ ಹಾಕ್ತಾರಂತ?' ಅಚ್ಚರಿಯಿಂದ ನಾನು ಬೆಕ್ಕಣ್ಣ ಹಿಡಿದಿದ್ದ ಪೇಪರಿನಲ್ಲಿ ಇಣುಕಿದೆ.

'ಮಂಗ್ಯಾನಂಥವ್ನೇ... ಅವರು ನಾವು ಒಗ್ಗಟ್ಟಾಗಿರ್ತೀವಿ ಅಂದರೆ ನೀ ಒಬ್ಬಟ್ಟು ಅಂತೀಯಲ್ಲ' ಎಂದು ಬೈಯ್ದೆ.

'ಇವ್ರು ಖರೇಖರೇ ಒಗ್ಗಟ್ಟಾಗಿರ್ತಾರೆ ಅಂದ್ರೆ ಒಬ್ಬಟ್ಟು ತಿಂದಷ್ಟೇ ಖುಷಿ ಬಿಡು' ಎಂದು ಮೂತಿ ತಿರುವಿದ ಬೆಕ್ಕಣ್ಣ, 'ಅದ್ಸರಿ, ಯಾರಿಗೆ ಎಷ್ಟು ಬರಬೌದು' ಎಂದು ಮುಗುಮ್ಮಾಗಿ ಕೇಳಿತು.

'ಒಬ್ಬೊಬ್ಬರು ಚುನಾವಣಾ ಪಂಡಿತರು ಒಂದೊಂಥರಾ ಭವಿಷ್ಯ ಹೇಳ್ಯಾರೆ. ಮತದಾರ ಪ್ರಭುವಿನ ಚಿತ್ತವನು ಬಲ್ಲವರಾರು?' ಎಂದೆ.

'ಕಮಲಕ್ಕನ ಮನಿಯವ್ರಿಗೆ 303 ಗ್ಯಾರಂಟಿ ಅಂತ ದೊಡ್ಡ ಪಂಡಿತ್ರು ಪ್ರಶಾಂತ್ ಕಿಶೋರ್ ಹೇಳ್ಯಾರೆ. ನಮ್ ಮೋದಿ ಮಾಮ 75 ದಿನಗಳಲ್ಲಿ ನೂರಾರು ರ್‍ಯಾಲಿ, ಪ್ರಚಾರ ಅಭಿಯಾನ ಮತ್ತು ಸಂದರ್ಶನ ನೀಡಿ ದಾಖಲೆ ಬರೆದಿದ್ದು ಫಲ ನೀಡತೈತೆ' ಬೆಕ್ಕಣ್ಣ ಮೀಸೆ ತಿರುವಿತು.

'ಈ ಎಲ್ಲಾ ಮತಗಟ್ಟೆ ಸಮೀಕ್ಷೆಗಳ ಭವಿಷ್ಯ ಅತ್ಲಾಗೆ ಸರಿಸಿ. ನಮಗೆ ಇನ್ನೂರ ತೊಂಬತ್ತು ಸಿಗತಾವು. ನಮ್ಮದು ಮತಗಟ್ಟೆ ವಾಸ್ತವ ಸಮೀಕ್ಷೆ' ಅಂತ ಖರ್ಗೆ ಅಜ್ಜಾರು ಹೇಳ್ಯಾರೆ'.

'ಎಲ್ಲಾ ಎಕ್ಸಿಟ್ ಪೋಲ್‌ಗಳೂ ಕಮಲಕ್ಕನ ಮನಿಯವ್ರಿಗೆ ಹೆಚ್ಚೂಕಡಿಮೆ ಮುನ್ನೂರೈವತ್ತು ಅಂದಾವೆ. ಪಾಪ... ಇಂಡಿಯಾ ಬಣದವರಿಗೆ ಒಬ್ಬಟ್ಟು ಮಾಡಿ, ತಿನ್ನೋ ಪ್ರಸಂಗನೇ ಬರಂಗಿಲ್ಲೇನೋ' ಎಂದಿತು ಬೆಕ್ಕಣ್ಣ.

'ಒಬ್ಬಟ್ಟು ಹೋಗಲಿ... ರಿಸಲ್ಟು ಬರತಿದ್ದ ಹಂಗೆ ಒಗ್ಗಟ್ಟೂ ಇಲ್ಲ ಅನ್ನೂ ಪರಿಸ್ಥಿತಿ ಬರಬಾರದು ನೋಡು'.

'ಒಗ್ಗಟ್ಟು ಅನ್ನದೇ ಒಂದು ಒಗಟು. ಒಗ್ಗಟ್ಟಿನಿಂದಿದ್ದರೆ ಮುಂದೆ ಒಬ್ಬಟ್ಟು ಮಾಡಿ ತಿನ್ನಬಹುದು' ಎಂಬ ಹೊಸ ಗಾದೆಯೊಂದನ್ನು ಹೊಸೆದ ಬೆಕ್ಕಣ್ಣ 'ಏನಾದರೇನು... ಶ್ರೀಸಾಮಾನ್ಯರು ಹಬ್ಬಗಳಿಗೆ ಒಬ್ಬಟ್ಟು ಮಾಡುವುದಕ್ಕೂ ಹಿಂದೆ ಮುಂದೆ ನೋಡೋ ಪರಿಸ್ಥಿತಿ ತಪ್ಪಂಗಿಲ್ಲ' ಎಂದು ಹುಳ್ಳಗೆ ನಕ್ಕಿತು.

ಸಂಗತ

ಟ್ರಿಣ್ ಟ್ರಿಣ್ ಟ್ರಿಣ್... ಬರಿಯ ಶಬ್ದವಲ್ಲ!

ಮಾಲಿನ್ಯರಹಿತ ಸಂಚಾರಕ್ಕೆ ಅನುವು ಮಾಡಿಕೊಡುವ ಬೈಸಿಕಲ್‌ಗಳ ಬಗ್ಗೆ ಜನಜಾಗೃತಿ ಮೂಡಿಸುವ ಹಾಗೂ ಅವುಗಳ ಬಳಕೆಗೆ ಪೂರಕವಾಗುವಂತಹ ಕ್ರಮಗಳ ಅಗತ್ಯ ಇದೆ

• ಬಿ.ಎಸ್.ಭಗವಾನ್

ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಡಬ್ಲಿನ್ ನಗರದಿಂದ ಸ್ಯಾನ್‌ಫ್ರಾನ್ಸಿಸ್ಕೊಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದೆ. ನಿಲುಗಡೆಗಳಲ್ಲಿ ಜನ ತಮ್ಮ ಬೈಸಿಕಲ್ ಸಮೇತ ರೈಲು ಹತ್ತಿಕೊಳ್ಳುತ್ತಿದ್ದುದನ್ನು ಕಂಡು ಅವಾಕ್ಕಾದೆ. ಪಕ್ಕದವರು ಪ್ರತಿಕ್ರಿಯಿಸಿದ್ದರು: 'ಇಲ್ಲಿ ಬೈಸಿಕಲ್ಲುಗಳನ್ನು ರೈಲಿನ ಒಳಗೆ ತರಲು ನಿರ್ಬಂಧವಿಲ್ಲ. ಅಗೋ, ಬೈಸಿಕಲ್ಲುಗಳಿಗೆ ಬೀಗ ಹಾಕಿಡಲು ಆ ಮೂಲೆ ಮೀಸಲು. ಬಸ್ಸುಗಳಲ್ಲೂ ಹೀಗೇ ಶೆಲ್ಫುಗಳಿರುತ್ತವೆ'. 'ಇದರಿಂದ ರೈಲಿನಲ್ಲಿ ಆಸನಗಳ ಸಂಖ್ಯೆ ಕಡಿಮೆಯಾದರೇನು, ನಮ್ಮ ಸೇವೆ ದೊಡ್ಡದು' ಎನ್ನುವಂತೆ ಅಲ್ಲಿ ಬೈಸಿಕಲ್ಲುಗಳು ವಿರಮಿಸಿದ್ದವು!

ಬೈಸಿಕಲ್‌ನದು ಒಂದು ಮೋಹಕ ಲೋಕ. ಬ್ರಿಟನ್ನಿನ ಬಹುಮುಖಿ ಕಾದಂಬರಿಕಾರ, ಚಿಂತಕ ಎಚ್.ಜಿ.ವೇಲ್ಸ್ 'ವಯಸ್ಕರನ್ನು ಬೈಸಿಕಲ್ ಮೇಲೆ ನೋಡಿದಾಗಲೆಲ್ಲ, ಮನುಷ್ಯಕುಲಕ್ಕೆ ಭವಿಷ್ಯವಿದೆ ಎಂದು ನನಗೆ ಅನ್ನಿಸುತ್ತದೆ' ಎಂದಿದ್ದರು. ಬೈಸಿಕಲ್ ನಮ್ಮನ್ನು ಪ್ರಕೃತಿಯೊಂದಿಗೆ ಬೆಸೆಯುತ್ತದೆ. ಹೆಚ್ಚು ಸದ್ದಿಲ್ಲದ, ಇಂಧನ ಬಯಸದ ದೀರ್ಘಬಾಳಿಕೆಯ ಅದು ನಮ್ಮಲ್ಲಿ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಯ ಪ್ರಜ್ಞೆ ಮೂಡಿಸುವ ವಿಶಿಷ್ಟ ವಾಹನ. ನಿರ್ವಹಣೆ ವೆಚ್ಚ ನಗಣ್ಯ.

ಛತ್ತೀಸಗಢದ ಬಸ್ತರ್ ಜಿಲ್ಲೆಯಲ್ಲಿ ಯುವ ಉದ್ಯಮಿಯೊಬ್ಬರು ಬರೀ 8.5 ಕೆ.ಜಿ. ತೂಕದ 'ಬ್ಯಾಂಬೊರಿಕ್' ಎಂಬ ಬೈಸಿಕಲ್ ವಿನ್ಯಾಸಗೊಳಿಸಿದ್ದಾರೆ. ಬಿದಿರು, ಮೆದು ಕಬ್ಬಿಣ, ಸೆಣಬು ಮತ್ತು ಕಂಚಿನ ತಂತಿಯಿಂದ ತಯಾರಿಸಿರುವ ಅದು 100 ಕೆ.ಜಿ.ಯಷ್ಟು ತೂಕ ಹೊರಬಲ್ಲದು.

ಜಗತ್ತಿನಲ್ಲಿ ಸದ್ಯ ಒಟ್ಟು 200 ಕೋಟಿ ಬೈಸಿಕಲ್‌ಗಳಿವೆ ಎಂದು ಅಂದಾಜಿಸಲಾಗಿದ್ದು, 2050ರ ವೇಳೆಗೆ ಈ ಸಂಖ್ಯೆ 500 ಕೋಟಿ ತಲುಪುವ ನಿರೀಕ್ಷೆ ಇದೆ. 10 ದೇಶಗಳಲ್ಲಿ ಬೈಸಿಕಲ್‌ಗಳನ್ನು ಅತ್ಯಧಿಕವಾಗಿ ಬಳಸಲಾಗುತ್ತಿದೆ. ಬೈಸಿಕಲ್‌ನದು ಎಂತಹ ಅದ್ಭುತವೆಂದರೆ, ಅದನ್ನು ಬಳಸತೊಡಗಿದಂತೆಯೇ ಮಕ್ಕಳಿಗೆ ವಯಸ್ಕರಂತೆಯೂ ವಯಸ್ಕರಿಗೆ ಮಕ್ಕಳಂತೆಯೂ ಅನುಭವವಾಗುತ್ತದೆ. ಬೈಸಿಕಲ್‌ನಿಂದ ಸ್ವತಃ ಸವಾರರಿಗೆ, ರಸ್ತೆಯಲ್ಲಿ ಸಂಚರಿಸುವವರಿಗೆ, ಪ್ರಾಣಿಗಳಿಗೆ ಹೆಚ್ಚಿನ ಅಪಾಯವಿಲ್ಲ. ಪೆಡಲ್ ತುಳಿತಕ್ಕೆ ಪ್ರಯೋಗಿಸುವ ಶಕ್ತಿಯ ಶೇಕಡ 98.6ರಷ್ಟು ಚಲನಶಕ್ತಿಯಾಗಿ ರೂಪಾಂತರಗೊಳ್ಳುವುದು ಬೈಸಿಕಲ್ಲಿನ ವಿಶೇಷ. ಮನುಷ್ಯನ ಸಾಮರ್ಥ್ಯವನ್ನು ಈ ಮಟ್ಟದಲ್ಲಿ ಹೆಚ್ಚಿಸಿದ ಇನ್ನೊಂದು ವಾಹನವಿಲ್ಲ.

ಬೈಸಿಕಲ್ ಬಹು ಶ್ರೇಷ್ಠ ಆವಿಷ್ಕಾರ. ಯುರೋಪ್ ಒಂದರಲ್ಲೇ 6.55 ಲಕ್ಷ ಕಾರ್ಮಿಕರನ್ನು ಒಳಗೊಂಡಿರುವಷ್ಟು ಪ್ರಮಾಣದಲ್ಲಿ ಬೈಸಿಕಲ್ ಉದ್ಯಮ ಬೆಳೆದಿದೆ. ಒಂದು ಸಾಧಾರಣ ಬೈಸಿಕಲ್‌ನ ಹಿಂದೆ ಸಂಚಾರದ ಉದ್ದೇಶವಷ್ಟೇ ಅಲ್ಲ, ಉದ್ಯೋಗ, ಶಿಕ್ಷಣ, ಆರೋಗ್ಯ ವೃದ್ಧಿಯೂ ಅಡಕಗೊಂಡಿದೆ. ಸ್ವಾರಸ್ಯವೆಂದರೆ, ಬೈಸಿಕಲ್ ವಿನ್ಯಾಸಗೊಂಡಿದ್ದು 1818ರಲ್ಲಷ್ಟೆ.

ಆಬಾಲವೃದ್ಧರಿಗೆಲ್ಲ ಅಚ್ಚುಮೆಚ್ಚೆನಿಸುವ ಬೈಸಿಕಲ್ ಲವಲವಿಕೆಯ ಪ್ರತೀಕ. ಕಾರು, ಬಸ್ಸು, ವ್ಯಾನ್ ಬದಲು ಬೈಸಿಕಲ್ ಆಯ್ಕೆಯಿಂದ ನಾವು ನಮ್ಮ ಇಂಗಾಲದ ಹೆಜ್ಜೆ ಗುರುತುಗಳನ್ನು ಕಡಿಮೆ ಮಾಡಿರುತ್ತೇವೆ, ಪರಿಸರ ಮಾಲಿನ್ಯ ವಿರುದ್ಧದ ಸಮರಕ್ಕೆ ಕೈಜೋಡಿಸಿ ಶೂನ್ಯ ಇಂಗಾಲ ಹೊರಸೂಸುವಿಕೆಯತ್ತ ಧಾವಿಸಿರುತ್ತೇವೆ. 'ವಿಶ್ವ ಬೈಸಿಕಲ್ ದಿನ' (ಜೂನ್ 3) ಆಚರಣೆಯ ಮೂಲಕ, ಬೈಸಿಕಲ್ ಎಂಬ ಸುಸ್ಥಿರ ಸಂಚಾರ ಆಯ್ಕೆಯ ಪ್ರಾಮುಖ್ಯವನ್ನು ನಾವು ಎತ್ತಿ ಹಿಡಿಯಬೇಕಿದೆ.

ಈ ಬಾರಿಯ ಬೈಸಿಕಲ್ ದಿನಾಚರಣೆಯ ಸಂಭ್ರಮಕ್ಕೆ 'ಬೈಸಿಕಲ್‌ನಿಂದ ಆರೋಗ್ಯ, ಔಚಿತ್ಯ ಮತ್ತು ಸುಸ್ಥಿರತೆ' ಎಂಬ ಧ್ಯೇಯವಾಕ್ಯ ಸ್ಫೂರ್ತಿಯಾಗಿದೆ. ಉತ್ಸಾಹಿ ಸವಾರರಿಗೆ, ರೋಚಕತೆ ಅರಸುವವರಿಗೆ ಸಂಚಾರಕ್ಕೆ ಸರಳ ವಾಹನವನ್ನು ಅಪ್ಪಿದ ಹಿಗ್ಗು. ಬೈಸಿಕಲ್ ಸವಾರಿಯೆಂದರೆ, ಒಂದೆಡೆಯಿಂದ ಇನ್ನೊಂದೆಡೆಗೆ ತಲುಪುವುದಷ್ಟೇ ಅಲ್ಲ, ಒಂದು ಅಜ್ಞಾತ ಪ್ರಯಾಣದ ಆಸ್ವಾದ ಅದು. ಬೈಸಿಕಲ್ ಸವಾರಿಯೆಂದರೆ ಸಂಗೀತರಹಿತ ಬ್ಯಾಲೆ ನೃತ್ಯವೂ ಹೌದು! ಕಾರಿನ ಹಿಂಬದಿ ಆಸನದಲ್ಲಿ ಕೂತವರಿಗೆ, ಅತಿ ವೇಗದ ಚಾಲನೆಯಿಂದ ಕಿಟಕಿಯಾಚೆಗಿನ ನಿಸರ್ಗ ಕಣ್ತುಂಬದಿದ್ದರೆ, ಆಗ ಅವರು ಇಳಿದು ಬೈಸಿಕಲ್ಲನ್ನು ಏರುವುದೇ ಉಪಾಯ.



ಇಂಧನ ಬಳಕೆಯ ಒಂದು ಸಾಧಾರಣ ವಾಹನ ಸಹ ಅತಿ ಹೆಚ್ಚಿನ ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ಹೊರಸೂಸುತ್ತದೆ. ಆದರೆ ಬೈಸಿಕಲ್ ಮನುಷ್ಯಬಲ ಚಾಲಿತವಾದ್ದರಿಂದ, ಅದರ ಬಳಕೆಯಿಂದ ಗ್ಯಾಸೊಲಿನ್ ಇಂಧನ ದಹನ ತಪ್ಪುತ್ತದೆ. ಸಂಚಾರಕ್ಕೆ ಪ್ರತಿ ಬಾರಿ ಕಾರನ್ನು ಹತ್ತಿದಾಗಲೆಲ್ಲ ಜಾಗತಿಕ ತಪನಕ್ಕೆ ಒಂದಷ್ಟು ಕಾವನ್ನು ಜಮೆ ಮಾಡಿರುತ್ತೇವೆ. ಇಂತಹ ಸಂದರ್ಭದಲ್ಲಿ, ಪ್ರಕೃತಿ ಸಂರಕ್ಷಣೆಗೆ ಬೈಸಿಕಲ್ ಒಂದು ಕ್ರಿಯಾವರ್ಧಕ. ವಿಲಾಸಿ ಕಾರುಗಳು, ಮಾಲ್‌ಗಳು ಅಥವಾ ಭವ್ಯ ಸಿನಿಮಾ ಮಂದಿರಗಳೇ ಇದ್ದರೂ ನಗರ ಅಪೂರ್ಣವೇ ಹೌದು. ಬೈಸಿಕಲ್‌ಗಳಿಗೆ ಪ್ರತ್ಯೇಕ ಸಂಚಾರ ಪಥ, ನಿಲುಗಡೆ ವ್ಯವಸ್ಥೆ ಇದ್ದರೆ ಮಾತ್ರ ನಗರಕ್ಕೆ ಪರಿಪೂರ್ಣತೆ.

ಬೈಸಿಕಲ್‌ಗಳು ನಗರದ ಕೀಲಿಕೈಗಳಾಗಬೇಕು. ಎಂದಮೇಲೆ ನಗರಗಳ ಯೋಜನೆಯಲ್ಲೇ ಈ ಕುರಿತು ದೃಢ ನಿರ್ಧಾರ ಅಗತ್ಯ. ಮಳೆ, ಪ್ರವಾಹ, ಭೂ ಸವೆತ, ವಿದ್ಯುತ್ ಸಂಪರ್ಕ ಕಡಿತದಂತಹ ಸಂದರ್ಭಗಳಲ್ಲಿ ಬೈಸಿಕಲ್ಲನ್ನೇರಿ ನಿರಾತಂಕವಾಗಿ ಸಾಗಬಹುದಲ್ಲ. ಬೈಸಿಕಲ್ಲುಗಳಿಗೆಂದೇ ಪ್ರತ್ಯೇಕ ಕಿರುದಾರಿಗಳಿರಲಿ. ನೆದರ್‌ಲ್ಯಾಂಡ್ಸ್‌ನ ರಾಜಧಾನಿ ಆಮ್‌ಸ್ಟರ್‌ಡ್ಯಾಂ ಅಂತೂ 'ಬೈಸಿಕಲ್‌ಗಳ ರಾಜಧಾನಿ'ಯೇ ಆಗಿದೆ. ಅಲ್ಲಿ ಜನರಿಗಿಂತ ಬೈಸಿಕಲ್‌ಗಳೇ ಹೆಚ್ಚಾಗಿವೆ.

ಟ್ರಿಣ್, ಟ್ರಿಣ್, ಟ್ರಿಣ್... ಬರಿಯ ಶಬ್ದವಲ್ಲ, ಅದು ಪ್ರಗತಿ ಮತ್ತು ಭವ್ಯ ಭವಿಷ್ಯದ ಶುಭ ಸಂಕೇತ.

ವಾಚಕರ ವಾಣಿ

ರಚನಾತ್ಮಕ ಬೆಂಬಲದಿಂದ ಸರ್ವರಿಗೂ ಒಳಿತು

ಈ ಬಾರಿಯ ಲೋಕಸಭಾ ಚುನಾವಣೆಯ ಪ್ರಚಾರದ ಅಬ್ಬರದಲ್ಲಿ ವಿವಿಧ ಪಕ್ಷಗಳ ನಾಯಕರ ನಡುವೆ ಬಹಳಷ್ಟು ಟೀಕೆ ಟಿಪ್ಪಣಿಗಳ ವಾಕ್ಸಮರ ನಡೆದಿದೆ. ಆದರೂ ಜಗತ್ತಿನ ಬೃಹತ್ ಜನಸಂಖ್ಯೆ ಮತ್ತು ಅತ್ಯಧಿಕ ಪ್ರಮಾಣದಲ್ಲಿ ಮತದಾರರನ್ನು ಹೊಂದಿರುವ ಭಾರತದಲ್ಲಿ ಬಹುತೇಕ ಶಾಂತ ರೀತಿಯಲ್ಲಿ ಮತದಾನ ನಡೆದಿರುವುದು ನಾವೆಲ್ಲರೂ ಹೆಮ್ಮೆಪಡುವಂತಹ ವಿಚಾರ. ಇನ್ನು ನಾಳೆ (ಜೂನ್ 4) ಪ್ರಕಟವಾಗಲಿರುವ ಫಲಿತಾಂಶವು ಯಾರದೇ ಪರವಾಗಿರಲಿ, ಬಹುಸಂಖ್ಯೆಯ ಮತದಾರರ ತೀರ್ಮಾನವನ್ನು ಎಲ್ಲರೂ ಗೌರವಿಸಬೇಕು. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅದರ ಜನಪರ ಕಾರ್ಯಕ್ರಮಗಳಿಗೆ ಬೆಂಬಲ ನೀಡಬೇಕು.

ಟೀಕೆ ಟಿಪ್ಪಣಿಗಳು ರಚನಾತ್ಮಕವಾಗಿರಲಿ. ಜಾತಿ, ಧರ್ಮವನ್ನು ಆಧಾರವಾಗಿಟ್ಟು ಸಂಕುಚಿತ ನೆಲೆಯಲ್ಲಿ ಯೋಚಿಸದೆ, ದೇಶದ ಹಿತದೃಷ್ಟಿಯಿಂದ ಸರ್ಕಾರವು ಕೈಗೊಳ್ಳುವ ಒಳ್ಳೆಯ ತೀರ್ಮಾನಗಳನ್ನು ಸ್ವಾಗತಿಸೋಣ ಮತ್ತು ಬೆಂಬಲಿಸೋಣ. ದೇಶವು ಅಭಿವೃದ್ಧಿಯ ಪಥದಲ್ಲಿ ಸಾಗಲು ಅಗತ್ಯವಾದ ಬೆಂಬಲವು ಎಲ್ಲರಿಗೂ ಒಳಿತನ್ನು ಉಂಟು ಮಾಡುತ್ತದೆ.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಮಕ್ಕಳ ಇಷ್ಟಾನಿಷ್ಟ ಪರಿಗಣಿಸಿ

ಮಾಧ್ಯಮಗಳಲ್ಲಿ ಇತ್ತೀಚೆಗೆ ಪ್ರಕಟವಾದ, ಇಬ್ಬರು ಯುವಕರಿಗೆ ಸಂಬಂಧಿಸಿದ ಪ್ರತ್ಯೇಕ ಪ್ರಕರಣಗಳು ಗಮನಾರ್ಹ ಎನಿಸಿದವು. ಒಂದು, 'ನೀಟ್' ಬರೆದ ಮರುದಿನ 'ಮುಂದೆ ಓದಲು ಇಷ್ಟವಿಲ್ಲ' ಎಂದು ಪೋಷಕರಿಗೆ ಸಂದೇಶ ರವಾನಿಸಿ, ಕೋಟಾದಿಂದ ನಾಪತ್ತೆ ಆಗಿದ್ದ 19 ವರ್ಷದ ಹುಡುಗ ಬಳಿಕ ಗೋವಾದಲ್ಲಿ ಪತ್ತೆಯಾಗಿರುವುದು. ಎರಡು, ಬೆಂಗಳೂರಿನಲ್ಲಿ 21 ವರ್ಷದ ಯುವಕನೊಬ್ಬ ಕ್ಯಾಂಪಸ್ ಸಂದರ್ಶನದಲ್ಲಿ ಕೆಲಸ ಸಿಗದ ಕಾರಣದಿಂದ ದುಃಖಿತನಾಗಿ, ಸ್ನೇಹಿತನೊಂದಿಗೆ ಅಳಲು ತೋಡಿಕೊಂಡ ಕೆಲವೇ ಸಮಯದಲ್ಲಿ ಮಾಲೊಂದರ ಮೇಲಿನಿಂದ ಬಿದ್ದಿದ್ದು, ಇದು ಆತ್ಮಹತ್ಯೆ ಎಂಬ ಶಂಕೆ ವ್ಯಕ್ತವಾಗಿರುವುದು. ಈ ಎರಡೂ ಪ್ರಕರಣಗಳಲ್ಲಿ ಎದ್ದು ಕಾಣುವ ಅಂಶವೆಂದರೆ, ಓದುವ ವಿಷಯದಲ್ಲಿ ಮಕ್ಕಳ ಮೇಲೆ ಪೋಷಕರು ಹಾಕುವ ಒತ್ತಡ ಮತ್ತು ಆ ಒತ್ತಡವನ್ನು ಸಹಿಸಿಕೊಂಡು ಹೇಗೋ ಓದಿದರೂ ಸೂಕ್ತ ಕೆಲಸ ಸಿಗದ ಹತಾಶೆ.

ಮಕ್ಕಳನ್ನು ಚಿಕ್ಕಂದಿನಿಂದಲೂ ಹತ್ತಿರದಿಂದ ನೋಡಿ ಬಲ್ಲವರಾಗಿರುವ ಪೋಷಕರು, ಅವರ ಇಷ್ಟಾನಿಷ್ಟಗಳಿಗೆ ಬೆಲೆ ಕೊಡಬೇಕಾದ ಅಗತ್ಯವನ್ನು ಮನಗಾಣಬೇಕು. ತಾವು ಇಷ್ಟಪಡುವ ಕ್ಷೇತ್ರದಲ್ಲೇ ಮುಂದುವರಿಯಲು ಅವರಿಗೆ ಅವಕಾಶ ಮಾಡಿಕೊಡಬೇಕು ಮತ್ತು ಬದುಕಿನಲ್ಲಿ ಎದುರಾಗುವ ಸಂಕಷ್ಟಗಳನ್ನು ದಿಟ್ಟತನದಿಂದ ಎದುರಿಸುವ ಆತ್ಮವಿಶ್ವಾಸ ಮೂಡಿಸಬೇಕು. ಆಗ ಮಕ್ಕಳು ಸ್ವತಃ ಆಯ್ದುಕೊಂಡ ಕ್ಷೇತ್ರದಲ್ಲಿ ಖುಷಿಯಿಂದ ತೊಡಗಿಕೊಳ್ಳಲು ಅನುವಾಗುತ್ತದೆ ಮತ್ತು ಇಂತಹ ದುರಂತಗಳನ್ನು ಸಹ ತಡೆಗಟ್ಟಲು ಸಾಧ್ಯವಾಗುತ್ತದೆ.

ರವಿಕಿರಣ್ ಶೇಖರ್, ಬೆಂಗಳೂರು

ಹೀಗಿರಲಿ...

ಲೋಕಸಭಾ ಚುನಾವಣೆಯಲಿ
ಗೆದ್ದವರು, ಸೋತವರು
ಇಬ್ಬರ ಮುಖದಿ ನಗುವಿರಲಿ,
ಪರಸ್ಪರ ಸೋಲು- ಗೆಲುವು
ಮೀರಿ ಕೈ ಕುಲುಕಿ
ಆಲಿಂಗಿಸಲಿ,
ಕಾರ್ಯಕರ್ತರೂ
ಮುಗಿದ ಅಧ್ಯಾಯದ
ಪುಸ್ತಕ ಮಡಚಿಟ್ಟು
ದುಡಿವ ದಾರಿ ನೋಡಲಿ,
ಮತ್ತೊಂದು ಚುನಾವಣೆ
ಬರುತ್ತದೆ...
ಮಾನವೀಯ ಮುಖ ಮಾತ್ರ
ಎಲ್ಲರಿಗೂ ಎದುರಾಗಲಿ!

ಸಂತೆಬೆನ್ನೂರು ಫೈಜ್ನಟ್ರಾಜ್
ತಳಕು, ಚಳ್ಳಕೆರೆ

ಮತಗಟ್ಟೆ ಸಮೀಕ್ಷೆಯ ಔಚಿತ್ಯವೇನು?

ಈ ಬಾರಿಯ ಲೋಕಸಭಾ ಚುನಾವಣೆಯ ಮತಗಟ್ಟೆ ಸಮೀಕ್ಷೆಗಳು ಫಲಿತಾಂಶ ಪ್ರಕಟಣೆಗೆ ಎರಡು ದಿನಗಳ ಮುನ್ನ ಹೊರಬಿದ್ದಿವೆ. ಸರಿಸುಮಾರು ಹತ್ತಕ್ಕೂ ಹೆಚ್ಚು ಸಂಸ್ಥೆಗಳು ಈ ಸಮೀಕ್ಷೆಗಳಲ್ಲಿ ಪಾಲ್ಗೊಂಡಿದ್ದುದಾಗಿ ವರದಿಯಾಗಿದೆ. ಫಲಿತಾಂಶ ಪ್ರಕಟಣೆಗೆ ಕೆಲವೇ ದಿನಗಳಿರುವಾಗ ಇಂತಹ ಸಮೀಕ್ಷೆಗಳನ್ನು ನಡೆಸಿ ಅವುಗಳ ಫಲಿತಾಂಶವನ್ನು ಪ್ರಕಟಿಸುವ ಔಚಿತ್ಯವಾದರೂ ಏನು? ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಹೇಳಿಸಿಕೊಂಡ ಪಕ್ಷಕ್ಕೆ ಸೇರಿದವರು ಬೀಗಬಹುದು ಮತ್ತು ಕಡಿಮೆ ಸ್ಥಾನ ಪಡೆಯುವಂತೆ ಕಂಡುಬಂದ ಪಕ್ಷದವರು ಜೋಲು ಮುಖ ಹಾಕಬಹುದು ಅಷ್ಟೆ.

ವಾಸ್ತವದಲ್ಲಿ, ಚುನಾವಣಾ ಆಯೋಗವು ಮತ ಎಣಿಕೆಯ ನಂತರ ಪ್ರಕಟಿಸುವ ಫಲಿತಾಂಶಕ್ಕಷ್ಟೇ ನಿಜವಾದ ಬೆಲೆ. ಮಿಕ್ಕಂತೆ ಬೇರೆ ಯಾವ ಸಂಸ್ಥೆಯ ಸಮೀಕ್ಷೆಗೂ ಬೆಲೆಯಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ಈ ರೀತಿ ವ್ಯಥಾ ಶ್ರಮ ಏಕೆ? ಅದೇ ಸಮಯ, ಹಣ ಮತ್ತು ಮಾನವ ಸಂಪನ್ಮೂಲವನ್ನು ಈ ಸಂಸ್ಥೆಗಳು ಸಮಾಜಪರ ಕೆಲಸಗಳಿಗೆ ವಿನಿಯೋಗಿಸಬಹುದಲ್ಲವೇ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಇಂದಿರಾ ಕ್ಯಾಂಟೀನ್ ನಿರ್ವಹಣೆ: ನಿರ್ಲಕ್ಷ್ಯ ಸಲ್ಲ


'ಹಸಿವುಮುಕ್ತ ಕರ್ನಾಟಕ' ಯೋಜನೆಯ ಭಾಗವಾಗಿ ರಾಜ್ಯ ಸರ್ಕಾರ ಪ್ರಾರಂಭಿಸಿರುವ ಇಂದಿರಾ ಕ್ಯಾಂಟೀನ್‌ಗಳು ಮುಚ್ಚುವ ದಾರಿಯಲ್ಲಿವೆಯೇ ಎಂಬ ಪ್ರಶ್ನೆ ಮೂಡುತ್ತದೆ. ಈ ಕ್ಯಾಂಟೀನ್‌ಗಳು ಆರಂಭದಲ್ಲಿ ಗುಣಮಟ್ಟದ ಆಹಾರವನ್ನು ಒದಗಿಸುತ್ತಿದ್ದವು. ಬರಬರುತ್ತಾ ಗುಣಮಟ್ಟ ಹಾಳಾಗಿದ್ದು ಮಾತ್ರವಲ್ಲದೆ ಆಹಾರದ ಪ್ರಮಾಣವೂ ಕಡಿಮೆಯಾಗಿದೆ.

ರಾಗಿ ಮುದ್ದೆಯನ್ನು ನೀಡುವುದಾಗಿ ಹೇಳಲಾಗಿತ್ತಾದರೂ ಅದು ಈವರೆಗೂ ಜಾರಿಗೆ ಬಂದಿಲ್ಲ. ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆ ಹೆಚ್ಚಿಸುವುದಾಗಿ ಸರ್ಕಾರ ಹೇಳಿದೆ. ಆದರೆ ಇರುವ ಕ್ಯಾಂಟೀನ್‌ಗಳನ್ನೇ ಸರಿಯಾಗಿ ನಿರ್ವಹಿಸುತ್ತಿಲ್ಲ. ಮಧ್ಯಾಹ್ನ 2 ಗಂಟೆಗೆ ಹೋದರೆ ಊಟ ಇರುವುದಿಲ್ಲ. ಪ್ರಶ್ನಿಸಿದರೆ, ಇಂತಿಷ್ಟು ಊಟಗಳನ್ನು ಮಾತ್ರ ಸರಬರಾಜು ಮಾಡಲಾಗಿತ್ತು ಎಂಬ ಉತ್ತರ ಸಿಬ್ಬಂದಿಯಿಂದ ಬರುತ್ತದೆ. ದೂರು ನೀಡಲು ಅಲ್ಲಿ ನೀಡಿರುವ ಸಂಖ್ಯೆಗೆ ಕರೆ ಮಾಡಿದರೆ ಯಾರೂ ಸ್ವೀಕರಿಸುವುದಿಲ್ಲ. ಇಂದಿರಾ ಕ್ಯಾಂಟೀನ್‌ನಂತಹ ಮಹತ್ವದ ಯೋಜನೆಯನ್ನು ರಾಜ್ಯ ಸರ್ಕಾರ ಉತ್ತಮವಾಗಿ ನಡೆಸುವಂತೆ ಆಗಲಿ.

ಈ.ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿದೇಶಗಳಲ್ಲಿದ್ದರೆ ಚಿನ್ನ ವ್ಯಾಪಾರವೂ ಚೆನ್ನ



ವಿದೇಶದಲ್ಲಿ ಇದ್ದ ಭಾರತದ ಒಂದು ಲಕ್ಷ ಕೆ.ಜಿ. ಚಿನ್ನವನ್ನು ಕಳೆದ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಭಾರತಕ್ಕೆ ವಾಪಸ್ ತಂದಿದೆ ಎಂದು ಮೂಲಗಳು ಹೇಳಿರುವುದು ಈಗ ದೊಡ್ಡ ಸುದ್ದಿಯಾಗಿದೆ. ಈ ಸುದ್ದಿಯ ಜತೆಗೆ ಸರ್ಕಾರವು ಚಿನ್ನವನ್ನು ಏಕೆ ಖರೀದಿಸಬೇಕು, ಚಿನ್ನವನ್ನು ವಿದೇಶಗಳಲ್ಲಿ ಏಕೆ ಇರಿಸಬೇಕು ಎಂಬಂತಹ ಹಲವು ಪ್ರಶ್ನೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ...

ಪ್ರಜಾವಾಣಿ ವಾರ್ತೆ

ವಿಶ್ವದ ಎಲ್ಲ ದೇಶಗಳ ಸರ್ಕಾರಗಳ ಬಳಿಯೂ ಚಿನ್ನದ ಮೀಸಲು ಇದೆ. ಭಾರತವೂ ಇದಕ್ಕೆ ಹೊರತಲ್ಲ. ಹೀಗೆ ಸರ್ಕಾರಗಳು ಚಿನ್ನವನ್ನು ಮೀಸಲಿರಿಸಿಕೊಳ್ಳುವ ಪದ್ಧತಿ ಚಾಲ್ತಿಗೆ ಬಂದದ್ದು ಸುಮಾರು 1800ರ ವೇಳೆಗೆ ಎಂದು ಫೋರ್ಬ್ಸ್ ವಿವರಿಸಿದೆ. ದೇಶಗಳು ಅಥವಾ ಸರ್ಕಾರಗಳ ಕೇಂದ್ರೀಯ ಬ್ಯಾಂಕ್‌ಗಳು ಹೊರಡಿಸುವ ಕರೆನ್ಸಿ ನೋಟು ಮತ್ತು ನಾಣ್ಯಗಳ ಬದಲಿಗೆ, ಅಷ್ಟೇ ಮೌಲ್ಯದಷ್ಟು ಚಿನ್ನವನ್ನು ಸಂಗ್ರಹಿಸಿ ಇಡುತ್ತಿದ್ದವು. ಒಂದೊಮ್ಮೆ ಆ ನಾಣ್ಯ/ನೋಟುಗಳನ್ನು ಸರ್ಕಾರಕ್ಕೆ ವಾಪಸ್ ನೀಡಿದರೆ, ಅದರ ಬದಲಿಗೆ ಚಿನ್ನ ನೀಡಬೇಕಿತ್ತು. ವಿಶ್ವದ ಬಹುತೇಕ ಆರ್ಥಿಕತೆಗಳು ಈ ಪದ್ಧತಿಯನ್ನು ಅನುಸರಿಸುತ್ತಿದ್ದವು. ಇದನ್ನು, 'ಗೋಲ್ಡ್ ಸ್ಟ್ಯಾಂಡರ್ಡ್' ಎಂದು ಕರೆಯಲಾಗುತ್ತಿತ್ತು. 1970ರ ದಶಕದ ನಂತರ ಈ ಪದ್ಧತಿಯನ್ನು ಅಧಿಕೃತವಾಗಿ ಕೈಬಿಡಲಾಯಿತು. ಆದರೆ ಈಗಲೂ ಕೆಲವು ದೇಶಗಳು ತಮ್ಮಲ್ಲಿ ಚಲಾವಣೆಯಲ್ಲಿ ಇರುವ ಕರೆನ್ಸಿಯ ಮೌಲ್ಯದಷ್ಟೇ ಚಿನ್ನದ ಮೀಸಲನ್ನು ಹೊಂದಿವೆ.

ರೂಪಾಯಿಯ ಮೌಲ್ಯದಷ್ಟೇ ಚಿನ್ನವನ್ನು ಸಂಗ್ರಹಿಸಿ ಇಡುವ ಪದ್ಧತಿ ಭಾರತದಲ್ಲೂ ಜಾರಿಯಲ್ಲಿತ್ತು. ಆದರೆ ಜಾಗತಿಕ ಮಟ್ಟದ ಟ್ರೆಂಡ್‌ನಂತೆ 70ರ ದಶಕದಲ್ಲಿ ಆ ಪದ್ಧತಿಯನ್ನು ಕೈಬಿಡಲಾಯಿತು. ಆದರೆ ಈಗಲೂ ಭಾರತದಲ್ಲಿ ಚಲಾವಣೆಯಲ್ಲಿ ಇರುವ ನಾಣ್ಯ ಮತ್ತು ನೋಟುಗಳ ಭದ್ರತೆಗಾಗಿ ಆರ್‌ಬಿಐ 308 ಟನ್‌ಗಳಷ್ಟು ಚಿನ್ನದ ಮೀಸಲನ್ನು ಹೊಂದಿದೆ. ಇದರ ಜತೆಯಲ್ಲಿ ಬೇರೆ ಕಾರಣಗಳಿಗೂ ದೇಶಗಳು ಚಿನ್ನದ ಮೀಸಲನ್ನು ಹೊಂದುತ್ತವೆ. ಭಾರತದ ಬಳಿಯೇ ಈಗ 822.1 ಟನ್‌ನಷ್ಟು ಚಿನ್ನದ ಮೀಸಲು ಇದೆ.

ಜನರ ಚಿನ್ನ ಈ ಲೆಕ್ಕದಲ್ಲಿ ಇಲ್ಲ

ದೇಶದ ಚಿನ್ನದ ಮೀಸಲು ಎಂದರೆ ಅದು ಸಂಪೂರ್ಣವಾಗಿ ಸರ್ಕಾರಕ್ಕೆ ಸೇರಿದ ಚಿನ್ನ ಮಾತ್ರ. ಹೂಡಿಕೆ ರೂಪದಲ್ಲಿ, ನಾಣ್ಯದ ರೂಪದಲ್ಲಿ, ಒಡವೆಗಳ ರೂಪದಲ್ಲಿ ಜನರ ಬಳಿ ಇರುವ ಚಿನ್ನವನ್ನು ಇದು ಒಳಗೊಂಡಿಲ್ಲ.

ಏರಿಕೆಯ ಹಾದಿಯಲ್ಲಿ ಚಿನ್ನದ ಮೀಸಲು

ಇಪ್ಪತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಚಿನ್ನದ ಮೀಸಲು ಸುಮಾರು ಒಂದು ಪಟ್ಟು ಏರಿಕೆಯಾಗಿದೆ. ಯಾವುದೇ ದೇಶದ ಚಿನ್ನದ ಮೀಸಲು ಹೆಚ್ಚಾದಷ್ಟೂ ದೇಶದೊಳಗಿನ ಹಣಕಾಸು ವ್ಯವಸ್ಥೆ ಮತ್ತು ಜಾಗತಿಕ ವ್ಯಾಪಾರ-ವಹಿವಾಟು ಸಂಬಂಧ ಉತ್ತಮವಾಗಿ ಇರುತ್ತದೆ. ಈ ಕಾರಣದಿಂದಲೇ ವಿಶ್ವದ ದೊಡ್ಡ-ದೊಡ್ಡ ಆರ್ಥಿಕತೆಗಳು ಅಪಾರ ಪ್ರಮಾಣದ ಚಿನ್ನದ ಮೀಸಲು ಹೊಂದಿವೆ.


ಚಿನ್ನದ ಮೀಸಲು ಹೆಚ್ಚು ಇರುವ ದೇಶದ ಕರೆನ್ಸಿಗೆ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಮನ್ನಣೆ ಇರುತ್ತದೆ. ವಿಶ್ವದ ಎಲ್ಲಾ ಸರ್ಕಾರಗಳ ಬಳಿ ಇರುವ ಚಿನ್ನದ ಮೀಸಲಿನಲ್ಲಿ ಅಮೆರಿಕದ ಪಾಲು ಶೇ 71ಕ್ಕಿಂತಲೂ ಹೆಚ್ಚು. ಡಾಲರ್ ಮೌಲ್ಯಕ್ಕೆ ಅಮೆರಿಕದಲ್ಲಿನ ಚಿನ್ನದ ಮೀಸಲಿನ ಭದ್ರತೆ ಇದ್ದು, ಅದರ ಮೌಲ್ಯ ಬಹುತೇಕ ಸ್ಥಿರವಾಗಿರುತ್ತದೆ. ಈ ಕಾರಣದಿಂದಲೇ ವಿಶ್ವದ ಬಹುತೇಕ ಆಮದು-ರಫ್ತು ವಹಿವಾಟುಗಳು ಅಮೆರಿಕದ ಡಾಲರ್ ಮೂಲಕವೇ ನಡೆಯುತ್ತದೆ.

ಭಾರತವು ಅತಿಹೆಚ್ಚು ಚಿನ್ನದ ಮೀಸಲು ಹೊಂದಿರುವ ದೇಶಗಳ ಪಟ್ಟಿಯಲ್ಲಿ ಈಗ ಒಂಬತ್ತನೇ ಸ್ಥಾನದಲ್ಲಿದೆ.

ಎಲ್ಲಾ ದೇಶಗಳು ತಮ್ಮ ಇಡೀ ಚಿನ್ನದ ಮೀಸಲನ್ನು ತಮ್ಮಲ್ಲಿಯೇ ಇರಿಸಿಕೊಳ್ಳುವುದಿಲ್ಲ. ಏಕೆಂದರೆ ಸರ್ಕಾರದ ಚಿನ್ನದ ಮೀಸಲನ್ನು ಅಂತರರಾಷ್ಟ್ರೀಯ ವ್ಯಾಪಾರಕ್ಕೆ, ಜಾಗತಿಕ ಸಂಸ್ಥೆಗಳಿಂದ ಸಾಲ ಪಡೆಯಲು ಗ್ಯಾರಂಟಿಯಾಗಿ (ಅಡಮಾನವಲ್ಲ) ಬಳಸಿಕೊಳ್ಳಲಾಗತ್ತದೆ. ಹೀಗಾಗಿ ವಿಶ್ವದ ಅತ್ಯಂತ ಸುರಕ್ಷಿತ ಬ್ಯಾಂಕ್‌ಗಳಲ್ಲಿ ಚಿನ್ನದ ಮೀಸಲನ್ನು ಇರಿಸಲಾಗುತ್ತದೆ. ಹೀಗೆ ಚಿನ್ನದ ಮೀಸಲನ್ನು ಇರಿಸಿಕೊಳ್ಳುವ ಬ್ಯಾಂಕ್‌ಗಳಲ್ಲಿ 'ಬ್ಯಾಂಕ್ ಆಫ್ ಇಂಗ್ಲೆಂಡ್' ಮುಂಚೂಣಿಯಲ್ಲಿದೆ. ಜತೆಗೆ 'ಬ್ಯಾಂಕ್ ಆಫ್ ಇಂಟರ್‌ನ್ಯಾಷನಲ್ ಸೆಟಲ್ಮೆಂಟ್'ನಲ್ಲೂ ಹಲವು ದೇಶಗಳು ಚಿನ್ನದ ಮೀಸಲನ್ನು ಇರಿಸುತ್ತವೆ.

ಇಂತಹ ಬ್ಯಾಂಕ್‌ಗಳಲ್ಲಿ ಚಿನ್ನದ ಮೀಸಲನ್ನು ಇರಿಸಿದ್ದರೆ, ದೇಶದ ಕೊಳ್ಳುವ ಸಾಮರ್ಥ್ಯ ಹೆಚ್ಚು ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ಅಂತರರಾಷ್ಟ್ರೀಯ ಮಟ್ಟದ ವ್ಯಾಪಾರದ ಸಂದರ್ಭದಲ್ಲಿ, ಹಣ ಪಾವತಿ ಒಮ್ಮೆಗೇ ಆಗಿರುವುದಿಲ್ಲ. ಆದರೆ ಸರಕು ಮತ್ತು ಸೇವೆಗಳನ್ನು ನೀಡಲಾಗಿರುತ್ತದೆ. ಹಣವನ್ನು ನಂತರ ಪಾವತಿ ಮಾಡಲಾಗುತ್ತದೆ. ಒಂದೊಮ್ಮೆ ಸರಕು ಮತ್ತು ಸೇವೆಯನ್ನು ಒದಗಿಸಲಾಗಿದ್ದು, ಹಣ ಪಾವತಿ ಇನ್ನಷ್ಟೇ ಆಗಬೇಕಿರುತ್ತದೆ. ಆದರೆ ಅಂತಹ ಸಂದರ್ಭದಲ್ಲಿ ಹಣ ಪಾವತಿ ಮಾಡಬೇಕಿರುವ ದೇಶದೊಳಗೆ ಆಂತರಿಕ ಕಲಹ, ಆರ್ಥಿಕ ಮುಗ್ಗಟ್ಟು ಮತ್ತಿತರ ಸಮಸ್ಯೆಗಳು ತಲೆದೋರಿದರೆ ಹಣ ಪಾವತಿ ಕಷ್ಟವಾಗುತ್ತದೆ. ವಿದೇಶಗಳಲ್ಲಿ ಚಿನ್ನದ ಮೀಸಲು ಇದ್ದರೆ, ಅದನ್ನು ಬಳಸಿಕೊಂಡು ಹಣ ಪಾವತಿ ಮಾಡಬಹುದು. ಹೀಗಾಗಿಯೇ ಬಹುತೇಕ ದೇಶಗಳು ತಮ್ಮ ಒಟ್ಟು ಚಿನ್ನದ ಮೀಸಲಿನಲ್ಲಿ ಒಂದು ಭಾಗವನ್ನು ವಿದೇಶಗಳಲ್ಲಿ ಇರಿಸಿಕೊಳ್ಳುತ್ತವೆ. ಭಾರತವೂ ಹೀಗೆ ಸುಮಾರು 500 ಟನ್‌ಗಳಷ್ಟು ಚಿನ್ನವನ್ನು ವಿದೇಶಗಳಲ್ಲೇ ಇರಿಸಿತ್ತು. ಈಗ ಅದರಲ್ಲಿ 100 ಟನ್‌ಗಳಷ್ಟು ಚಿನ್ನದ ಮೀಸಲನ್ನು ಭಾರತಕ್ಕೆ ಸ್ಥಳಾಂತರಿಸಲಾಗಿದೆ.

2009ರಲ್ಲಿ 200 ಟನ್ ಖರೀದಿ



ಸರ್ಕಾರವು ಚಿನ್ನ ಖರೀದಿಸಲೇಬೇಕು ಎಂದೇನೂ ಇಲ್ಲ. ಆದರೆ ಜಾಗತಿಕ ಮಟ್ಟದಲ್ಲಿ ಬಳಕೆಯಾಗುವ ಕರೆನ್ಸಿಗಳ (ಉದಾಹರಣೆಗೆ ಅಮೆರಿಕದ ಡಾಲರ್) ವಿನಿಮಯ ಮೌಲ್ಯದಲ್ಲಿ ಭಾರಿ ಏರಿಳಿತ ಕಂಡುಬರುತ್ತಿದ್ದರೆ ಮತ್ತು ದೇಶೀಯ ರೂಪಾಯಿಯ ಮೌಲ್ಯ ಸ್ಥಿರವಾಗಿ ಇಲ್ಲದೇ ಇದ್ದರೆ ಆರ್ಥಿಕ ವಹಿವಾಟುಗಳು ಚಿನ್ನದ ರೂಪದಲ್ಲಿ ನಡೆಯುತ್ತವೆ. ಈ ಕಾರಣದಿಂದಲೇ ಚಿನ್ನವನ್ನು ಖರೀದಿಸಿ ಇರಿಸಿಕೊಳ್ಳಲಾಗುತ್ತದೆ. ಭಾರತವೂ ಇದಕ್ಕೆ ಹೊರತಲ್ಲ. 2008ರಲ್ಲಿ ಜಾಗತಿಕ ಮಟ್ಟದಲ್ಲಿ ಆರ್ಥಿಕ ಹಿಂಜರಿತ ಉಂಟಾಗಿತ್ತು. ಈಚಿನ ದಶಕಗಳಲ್ಲೇ ಅದೇ ಅತ್ಯಂತ ದೊಡ್ಡ ಆರ್ಥಿಕ ಹಿಂಜರಿತ. ಆ ಸಂದರ್ಭದಲ್ಲಿ ಡಾಲರ್, ಪೌಂಡ್, ಯೆನ್‌ನಂತಹ ಹೆಚ್ಚಿನ ಮೌಲ್ಯದ ಕರೆನ್ಸಿಗಳ ವಿನಿಮಯ ದರವೂ ಅಸ್ಥಿರವಾಗಿತ್ತು. ಭಾರತದ ರೂಪಾಯಿಯ ಮೂಲಕ ವ್ಯಾಪಾರ ವಹಿವಾಟು ನಡೆಸುವುದು ಲಾಭದಾಯಕವಾಗಿರಲಿಲ್ಲ. ಹೀಗಾಗಿಯೇ ಅಂದಿನ ಯುಪಿಎ ಸರ್ಕಾರವು ದೊಡ್ಡಮಟ್ಟದಲ್ಲಿ ಚಿನ್ನ ಖರೀದಿಸಿತ್ತು.

200 ಟನ್
2009ರ ಒಂದೇ ವರ್ಷದಲ್ಲಿ ಕೇಂದ್ರ ಸರ್ಕಾರವು ಖರೀದಿಸಿದ ಚಿನ್ನ

264.34 ಟನ್
2018–2024ರವರೆಗೆ ಒಟ್ಟು ಆರು ವರ್ಷದಲ್ಲಿ ಕೇಂದ್ರ ಸರ್ಕಾರವು ಖರೀದಿಸಿದ ಚಿನ್ನ

ಆಧಾರ: ಭಾರತೀಯ ರಿಸರ್ವ್ ಬ್ಯಾಂಕ್ ವರದಿಗಳು, ಪಿಐಬಿ, ಪಿಟಿಐ, ಗ್ಲೋಬಲ್ ಗೋಲ್ಡ್ ಕೌನ್ಸಿಲ್ ವರದಿಗಳು, ಫೋರ್ಬ್ಸ್ ಇಂಡಿಯಾ ವರದಿಗಳು

ಪಿವಿ ಫ್ಯಾಕ್ಟ್ ಚೆಕ್


✗ '1991ರಲ್ಲಿ ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದರು, ಮನಮೋಹನ್ ಸಿಂಗ್ ಅವರು ಹಣಕಾಸು ಸಚಿವರಾಗಿದ್ದರು. ಆಗ 47 ಟನ್‌ಗಳಷ್ಟು ಚಿನ್ನವನ್ನು ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ ಅಡಮಾನ ಇಟ್ಟು 40,000 ಕೋಟಿ ಡಾಲರ್‌ನಷ್ಟು ಸಾಲ ಮಾಡಲಾಗಿತ್ತು. ಆದರೆ ಮೋದಿ ಸರ್ಕಾರವು ಈಗ ಬ್ಯಾಂಕ್ ಆಫ್ ಇಂಗ್ಲೆಂಡ್‌ನಿಂದ ನೂರು ಟನ್‌ಗಳಷ್ಟು ಚಿನ್ನವನ್ನು ಭಾರತಕ್ಕೆ ತಂದಿದೆ' ಎಂಬ ಸಂದೇಶ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ ಇದರಲ್ಲಿ ಇರುವ ಮಾಹಿತಿಗಳು ತಪ್ಪು.

✓ 1991ರಲ್ಲಿ ರಾಜೀವ್ ಗಾಂಧಿ ಅವರು ಪ್ರಧಾನಿ ಆಗಿರಲಿಲ್ಲ. 1991ರ ಮೇ 21ರಂದು ಅವರ ಹತ್ಯೆ ನಡೆದಿತ್ತು. '1991ರ ಜುಲೈನಲ್ಲಿ ಕೇಂದ್ರ ಸರ್ಕಾರವು ಬ್ಯಾಂಕ್ ಆಫ್ ಜಪಾನ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್‌ನಲ್ಲಿ 46.91 ಟನ್‌ಗಳಷ್ಟು ಚಿನ್ನವನ್ನು ಅಡಮಾನ ಇರಿಸಿತ್ತು. ಆ ಮೂಲಕ 40.5 ಕೋಟಿ ಡಾಲರ್ ಸಾಲ ಪಡೆಯಲಾಗಿತ್ತು. ಆದರೆ 1991ರ ಸೆಪ್ಟೆಂಬರ್ ಮತ್ತು ನವೆಂಬರ್‌ನಲ್ಲಿ ಎರಡು ಕಂತಿನಲ್ಲಿ ಸಾಲವನ್ನು ಮರುಪಾವತಿ ಮಾಡಿ, ಅಷ್ಟೂ ಚಿನ್ನವನ್ನು ಅಡಮಾನದಿಂದ ಬಿಡಿಸಿಕೊಳ್ಳಲಾಗಿತ್ತು' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಸಚಿವಾಲಯದ ಅಧಿಕಾರಿಗಳು ರಾಜ್ಯಸಭೆಗೆ ಮಾಹಿತಿ ನೀಡಿದ್ದರು. ಈ ಪ್ರಕಾರ, ಮೇಲಿನ ಪೋಸ್ಟ್‌ಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ಮಾಹಿತಿ ತಪ್ಪು.

ನಮ್ಮ ತಪ್ಪನ್ನು ನಾವೇ ಗುರುತಿಸೋಣ

ನುಡಿ ಬೆಳಗು




ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಮ್ಮೆ ಒಬ್ಬ ವ್ಯಕ್ತಿ ಒಂದು ಹೊಸ ಸಮಸ್ಯೆಯೊಂದಿಗೆ ವೈದ್ಯರ ಬಳಿ ಹೋದ. ಅದೇನೆಂದರೆ ಅವನ ತೋರು ಬೆರಳಿನಿಂದ ಅವನ ದೇಹದ ಯಾವುದೇ ಭಾಗವನ್ನು ಮುಟ್ಟಿದರೆ ವಿಪರೀತವಾದ ನೋವಾಗುತ್ತಿತ್ತು. ಇಂತಹ ವಿಚಿತ್ರ ಸಮಸ್ಯೆಯೊಂದಿಗೆ ಬಂದ ರೋಗಿಗೆ ವೈದ್ಯರು ಎಲ್ಲ ಬಗೆಯ ತಪಾಸಣೆ ಮಾಡಿದರು. ರಕ್ತ ಪರೀಕ್ಷೆ, ವಿವಿಧ ಬಗೆಯ ಎಕ್ಸ್ ರೇ, ಹಲವು ರೀತಿಯ ಸ್ಕ್ಯಾನಿಂಗ್ ಎಲ್ಲವೂ ಮುಗಿದವು. ಎಲ್ಲಿಯೂ ಸಮಸ್ಯೆ ಇಲ್ಲ. ವೈದ್ಯರು ಸಹ ಇದ್ಯಾವ ಹೊಸಬಗೆಯ ಕಾಯಿಲೆ ಎಂದು ಆಶ್ಚರ್ಯಗೊಂಡರು. ಕೊನೆಗೆ ದೇಹದ ಪ್ರತಿ ಭಾಗವನ್ನೂ ಪರೀಕ್ಷಿಸುತ್ತಾ ಹೋದರು. ಆಗ ಅವನ ತೋರು ಬೆರಳಿನಲ್ಲಿದ್ದ ಹುಣ್ಣೊಂದು ಅವರಿಗೆ ಗೋಚರಿಸಿತು. ಆಗ ಈ ವ್ಯಕ್ತಿಯ ಸಮಸ್ಯೆ ಏನು ಎನ್ನುವುದು ವೈದ್ಯರಿಗೆ ಸ್ಪಷ್ಟವಾಯಿತು. ಹುಣ್ಣಿರುವ ತೋರು ಬೆರಳಿನಿಂದ ಆತ ದೇಹದ ಯಾವುದೇ ಭಾಗವನ್ನು ಮುಟ್ಟಿದರೂ ನೋವಾಗುತ್ತಿದೆ. ಅಂದರೆ ಸಮಸ್ಯೆ ಇರುವುದು ಅವನ ತೋರು ಬೆರಳಿನಲ್ಲಿ ಮಾತ್ರ,ಇಡೀ ದೇಹದಲ್ಲಲ್ಲ.

ನಮ್ಮ ಬದುಕಿನಲ್ಲೂ ಅಷ್ಟೇ, ನಮ್ಮಲ್ಲಿರುವ ಕೊರತೆಯ ಬಗೆಗೆ ನಾವು ಗಮನ ಹರಿಸುವುದೇ ಇಲ್ಲ. ನಮ್ಮ ಸಮಸ್ಯೆಗೆ ಬೇರೆ ಯಾರೋ ಕಾರಣ ಎಂಬ ರೀತಿಯಲ್ಲಿಯೇ ಇರುತ್ತದೆ, ನಮ್ಮ ಚಿಂತನೆ. 'ಸದಾ ಬೇರೆಯವರ ತಪ್ಪನ್ನೇ ಗುರುತಿಸುವುದನ್ನು ರೂಢಿ ಮಾಡಿಕೊಂಡವರಿಗೆ ತಮ್ಮ ತಪ್ಪಿನ ಅರಿವೇ ಆಗದು' ಎನ್ನುತ್ತಾರೆ, ಮಹಾತ್ಮ ಗಾಂಧಿ.

ಯಾವಾಗಲೂ ಇನ್ನೊಬ್ಬರ ಸಣ್ಣ ತಪ್ಪು ಸಹ ನಮಗೆ ದೊಡ್ಡದಾಗಿ ಕಾಣಿಸುತ್ತದೆ. ಆದರೆ ನಮ್ಮಲ್ಲಿರುವ ದೊಡ್ಡ ದೋಷ, ನಮ್ಮ ಗಮನಕ್ಕೆ ಬರುವುದೇ ಇಲ್ಲ. ಅದರ ಕುರಿತು ಯಾರಾದರೂ ನಮ್ಮ ಗಮನ ಸೆಳೆದಿದ್ದೇ ಆದರೆ ಅವರ ಮೇಲೇ ವಿಪರೀತ ಕೋಪ ಬಂದುಬಿಡುತ್ತದೆ. 'ಬೈದು ಹೇಳುವವರು ಬದುಕಲಿಕ್ಕೆ ಹೇಳುತ್ತಾರೆ' ಎನ್ನುವ ಗಾದೆ ಮಾತಿದೆ. ಈ ರೀತಿಯ ದೂಷಣೆಯ ಮಾತುಗಳಿಗೂ ಧನಾತ್ಮಕವಾಗಿ ಕಿವಿಗೊಟ್ಟಾಗ ನಮ್ಮ ತಪ್ಪುಗಳ ಅರಿವು ನಮಗೇ ಆಗುತ್ತದೆ. ಬೇರೆಯವರಲ್ಲಿರುವ ಸರಿ ತಪ್ಪುಗಳನ್ನು ಗುರುತಿಸುವಂತೆಯೇ ನಮ್ಮಲ್ಲಿರುವ ಸರಿ ತಪ್ಪುಗಳತ್ತ ನಾವು ಬೆಳಕು ಬಿಟ್ಟುಕೊಂಡಾಗ ಮಾತ್ರ ಸುಧಾರಣೆ ಸಾಧ್ಯ. ಹೊಗಳಿಕೆಯ ಮಾತುಗಳು ಕಿವಿಗೇನೋ ಹಿತಕಾರಿ ಆದರೆ ನಮ್ಮ ಅಂತರಂಗದ ಬೆಳವಣಿಗೆಗೆ ಅಷ್ಟೇನೂ ಸಹಕಾರಿಯಲ್ಲ. ನನ್ನ ಅತ್ಯುತ್ತಮವಿನ್ನೂ ಬರಲಿಕ್ಕಿದೆ ಎಂಬ ಭಾವ ನಮ್ಮಲ್ಲಿ ಸದಾ ಇದ್ದಾಗ ನಾವು ಮಾಡುವ ಯಾವುದೇ ಕೆಲಸದಲ್ಲಿ ಆಗಿರಬಹುದಾದ ದೋಷ ನಮ್ಮ ಗಮನಕ್ಕೆ ಬಂದೇ ಬರುತ್ತದೆ. ಬದುಕೆಂಬುದು ದಿನನಿತ್ಯವೂ ನಾವು ಮಾಡುವ ತಪ್ಪುಗಳಿಂದ ಕಲಿಯಬಹುದಾದ ಹೊಸ ಪಾಠ.

'ಎಡವದೆಯೇ ಮೈಗಾಯವಡೆಯದೆಯೆ ಮಗುವಾರು ನಡೆಯ ಕಲಿತವರು? ತಡವರಿಸಿ ಮುಗ್ಗರಿಸಿ ಬಿದ್ದು ಮತ್ತೆದ್ದು ಮೈದಡವಿಕೊಳ್ಳುವವರೆಲ್ಲ -ಮಂಕುತಿಮ್ಮ'


ಹೇಗೆ ಮಗು ಚಿಕ್ಕದಿದ್ದಾಗ ಎದ್ದು ಬಿದ್ದು ಮೈಕೈ ಗಾಯ ಮಾಡಿಕೊಂಡು ನಡೆಯನ್ನು ಕಲಿಯುತ್ತದೆಯೋ ಹಾಗೆಯೇ ನಮ್ಮ ಬದುಕಿನಲ್ಲಿ ನಾವು ಸಹಾ ತಪ್ಪು ಮಾಡಿಯೇ ಪಾಠ ಕಲಿಯಬೇಕು. ಆದರೆ ಅತಿ ಮುಖ್ಯವಾಗಿ ಆ ತಪ್ಪು ಎಲ್ಲಿ ಆಗಿದೆ ಎಂದು ನಿಖರವಾಗಿ ಗುರುತಿಸುವ ಮನಃಸ್ಥಿತಿ ಸದಾ ನಮ್ಮಲ್ಲಿರಬೇಕು. ❖

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ




'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿ ಸಮಾರಂಭ ಶೀಘ್ರದಲ್ಲೇ ನಡೆಯಲಿದ್ದು, 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರು ಮತ್ತು ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ **'ಅತ್ಯುತ್ತಮ ನಿರ್ದೇಶನ'** ವಿಭಾಗಕ್ಕೆ ನಾಮ ನಿರ್ದೇಶಿತರಾದವರನ್ನು ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. https://www.prajavani.net/cinesamman/season2


ಬಿ.ಎಸ್.ಲಿಂಗದೇವರು

ಬಿ.ಎಸ್.ಲಿಂಗದೇವರು 'ವಿರಾಟಪುರ ವಿರಾಗಿ' ಚಿತ್ರದ ನಿರ್ದೇಶನಕ್ಕಾಗಿ ನಾಮ ನಿರ್ದೇಶನಗೊಂಡಿದ್ದಾರೆ. ಇವರು ಹಲವಾರು ಧಾರಾವಾಹಿಗಳು ಮತ್ತು ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ನಟ, ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದಾರೆ. ಚಿತ್ರರಂಗದಲ್ಲಿ ಮೂರು ದಶಕಗಳಿಗಿಂತ ಹೆಚ್ಚು ಅನುಭವ ಹೊಂದಿರುವ ಇವರು 'ಮೌನಿ', 'ಕಾಡ ಬೆಳದಿಂಗಳು', 'ನಾನು ಅವನಲ್ಲ...ಅವಳು' ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಸಾಮಾಜಿಕ ಕಳಕಳಿಯ ಕಥಾ ಹಂದರ ಹೊಂದಿರುವ ಚಿತ್ರಗಳಿಗೆ ಜನಪ್ರಿಯರಾಗಿರುವ ಇವರ ಚಿತ್ರಗಳು ರಾಷ್ಟ್ರ, ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಸಾಕಷ್ಟು ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದೆ. ವಿಭಿನ್ನ ಕಥಾಹಂದರ ಹೊಂದಿರುವ 'ನಾನು ಅವನಲ್ಲ...ಅವಳು' ಚಿತ್ರ ಬಿಡುಗಡೆ ಬಳಿಕ ಜನಮನ್ನಣೆಯನ್ನು ಗಳಿಸಿತು. ವಿರಾಟಪುರ ವಿರಾಗಿ ಚಿತ್ರ ಕೂಡ ಈಗಾಗಲೇ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ಪ್ರಶಸ್ತಿ ಪಡೆದಿದೆ.

'ಸಪ್ತ ಸಾಗರದಾಚೆ ಎಲ್ಲೋ–Side A' ಸಿನಿಮಾ ನಿರ್ದೇಶನಕ್ಕಾಗಿ **ಹೇಮಂತ್ ಎಂ.ರಾವ್** ನಾಮನಿರ್ದೇಶನಗೊಂಡಿದ್ದಾರೆ. ಎಂಜಿನಿಯರಿಂಗ್ ಕಲಿತು 'ಗುಲಾಬಿ ಟಾಕೀಸ್'ನಲ್ಲಿ ಗಿರೀಶ ಕಾಸರವಳ್ಳಿ ಅವರ ಸಹಾಯಕನಾಗಿ ಸಿನಿಪಯಣ ಆರಂಭಿಸಿದರು. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಚಿತ್ರದ ಮೂಲಕ ನಿರ್ದೇಶನದತ್ತ ಮೊದಲ ಹೆಜ್ಜೆ ಇಟ್ಟ ಹೇಮಂತ್, 'ಕವಲುದಾರಿ' ಮೂಲಕ ತಮ್ಮ ನಿರ್ದೇಶನದ ಸಾಮರ್ಥ್ಯ ಸಾಬೀತುಪಡಿಸಿದರು. ಇವರು ದೃಶ್ಯಗಳ ಹೆಣಿಗೆಯಲ್ಲಿ ಸಾವಧಾನ ತೋರುವ ನಿರ್ದೇಶಕ. ಸೂಕ್ಷ್ಮವಾದ ಬರವಣಿಗೆ, ನಿರೂಪಣೆ ಇವರ ಅಸ್ತ್ರ. ಇದಕ್ಕೆ ಸಾಕ್ಷ್ಯ 'ಸಪ್ತ ಸಾಗರದಾಚೆ ಎಲ್ಲೋ'. ನಿರ್ದೇಶನದ ಜೊತೆಗೆ ನಿರ್ಮಾಪಕರಾಗಿಯೂ ಗುರುತಿಸಿಕೊಂಡಿರುವ ಹೇಮಂತ್, ಸದ್ಯ ಶಿವರಾಜ್‌ಕುಮಾರ್ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಸಿದ್ಧತೆ ನಡೆಸುತ್ತಿದ್ದಾರೆ.


ಹೇಮಂತ್ ಎಂ. ರಾವ್


ಪೃಥ್ವಿ ಕೊಣನೂರು

ಪೃಥ್ವಿ ಕೊಣನೂರು 'ಪಿಂಕಿ ಎಲ್ಲಿ?' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ತಮ್ಮದೇ ಛಾಪು ಮೂಡಿಸಿರುವ ಪೃಥ್ವಿ, 2007ರಲ್ಲಿ ಇಂಗ್ಲಿಷ್ ಕಿರುಚಿತ್ರವೊಂದನ್ನು ನಿರ್ದೇಶಿಸಿದ್ದರು. 2012ರಲ್ಲಿ ತಯಾರಾದ ಇವರ ಚೊಚ್ಚಲ ನಿರ್ದೇಶನದ ಸಿನಿಮಾ 'ಅಲೆಗಳು' ಟೊರಂಟೊ ಚಿತ್ರೋತ್ಸವದಲ್ಲಿ ಮೊದಲ ಪ್ರದರ್ಶನ ಕಂಡಿತ್ತು. ಎರಡನೆ ಚಿತ್ರ 'ರೈಲ್ವೆ ಚಿಲ್ಡ್ರನ್' ರಾಷ್ಟ್ರ ಪ್ರಶಸ್ತಿ, ರಾಜ್ಯ ಸರ್ಕಾರದ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಜೊತೆಗೆ ಮುಂಬೈ ಚಿತ್ರೋತ್ಸವದಲ್ಲಿ ಪ್ರತಿಷ್ಠಿತ ಗೋಲ್ಡನ್ ಗೇಟ್‌ವೇ ಪ್ರಶಸ್ತಿಗೂ ನಾಮನಿರ್ದೇಶನಗೊಂಡಿತ್ತು. ಬೂಸಾನ್ ಚಿತ್ರೋತ್ಸವದಲ್ಲಿ ಮೊದಲ ಪ್ರದರ್ಶನ ಕಂಡ 'ಪಿಂಕಿ ಎಲ್ಲಿ?' ಚಿತ್ರ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ನಾಮನಿರ್ದೇಶನಗೊಂಡು, ಪ್ರಶಸ್ತಿಗಳನ್ನು ಗಳಿಸಿದೆ. ಇವರ 'ಹದಿನೇಳೆಂಟು' ಚಿತ್ರಕ್ಕೆ ಮೆಲ್ಬೋರ್ನ್ ಚಿತ್ರೋತ್ಸವದಲ್ಲಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಲಭಿಸಿದೆ. 'ರಶೀದ್' ಇವರ ಮುಂದಿನ ಚಿತ್ರ.

ಶಶಾಂಕ್ ಸೋಗಾಲ್ 'ಡೇರ್ ಡೆವಿಲ್ ಮುಸ್ತಾಫಾ' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಮೈಸೂರಿನವರಾದ ಇವರು ಸಾಹಿತ್ಯ, ಸಿನಿಮಾ, ರಂಗಭೂಮಿಯಲ್ಲಿ ಆಸಕ್ತಿ ಹೊಂದಿದ್ದಾರೆ. ಕಳೆದೊಂದು ದಶಕದಿಂದ ಸಿನಿಮಾ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದು, ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಕಥೆಯಾಧಾರಿತ 'ಡೇರ್ ಡೆವಿಲ್ ಮುಸ್ತಾಫಾ' ಇವರ ಚೊಚ್ಚಲ ನಿರ್ದೇಶನದ ಸಿನಿಮಾ. 2015ರಲ್ಲಿ 'ಫಟ್ಟಂಗ' ಎಂಬ ಕಿರುಚಿತ್ರವನ್ನು ನಿರ್ದೇಶಿಸಿ ಜನಮನ್ನಣೆ ಗಳಿಸಿದ್ದರು. ಮನರಂಜನಾ ಚಾನಲ್‌ಗಳಲ್ಲಿಯೂ ಕೆಲಸ ಮಾಡಿ ಅನುಭವ ಹೊಂದಿರುವ ಶಶಾಂಕ್ ಸದ್ಯ ತಮ್ಮ ಮುಂದಿನ ಚಿತ್ರದ ತಯಾರಿಯಲ್ಲಿದ್ದಾರೆ.


ಶಶಾಂಕ್ ಸೋಗಾಲ್


ಸಿಂಧು ಶ್ರೀನಿವಾಸಮೂರ್ತಿ

ನಟಿ, ನಿರ್ದೇಶಕಿ **ಸಿಂಧು ಶ್ರೀನಿವಾಸಮೂರ್ತಿ** 'ಆಚಾರ್ ಆಂಡ್ ಕೋ' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ತಮ್ಮ 16ನೇ ವಯಸ್ಸಿನಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಇವರು ನಟಿಯಾಗಿ ಚಿತ್ರರಂಗಕ್ಕೆ ಬಂದವರು. 'ಫ್ರೆಂಚ್ ಬಿರಿಯಾನಿ', ತೆಲುಗಿನ 'ಸಿನಿಮಾ ಬಂಡಿ' ಮೊದಲಾದ ಸಿನಿಮಾಗಳಲ್ಲಿ ನಟಿಸಿದ್ದಾರೆ. ಬರವಣಿಗೆ, ನಿರ್ದೇಶನದಲ್ಲಿ ಹೆಚ್ಚು ಆಸಕ್ತಿ ಹೊಂದಿರುವ ಇವರು ಸಿನಿಮಾ, ವೆಬ್‌ಸೀರೀಸ್, ಜಾಹೀರಾತುಗಳಲ್ಲಿ ನಟಿಸಿ ನಂತರ ಚಿತ್ರಕಥೆ ಬರವಣಿಗೆ ಕಲಿಯಲು ಮುಂಬೈಗೆ ಪಯಣಿಸುತ್ತಾರೆ. 2017ರಲ್ಲಿ 'ಆಚಾರ್ ಆಂಡ್ ಕೋ' ಚಿತ್ರದ ಬರವಣಿಗೆ ಪ್ರಾರಂಭಿಸುತ್ತಾರೆ. ವಿಭಿನ್ನ ಕಥೆ ಮತ್ತು ನಿರೂಪಣೆ ಹೊಂದಿರುವ, ಪಿಆರ್‌ಕೆ ಸಂಸ್ಥೆ ನಿರ್ಮಿಸಿರುವ ಈ ಚಿತ್ರ 2023ರಲ್ಲಿ ತೆರೆಕಂಡು ಜನಮನ್ನಣೆ ಗಳಿಸುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜೂನ್ 3, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ದ್ವಾದಶಿ ಗಂ. 24-19 ನಕ್ಷತ್ರ: ಅಶ್ವಿನಿ ಗಂ. 24-05 ಯೋಗ: ಸೌಭಾಗ್ಯ ಗಂ. 09-11 ಕರಣ: ಕೌಲವ ಗಂ. 13-30, ವೃಷಭ ಮಾಸದ ನೇ 20 ದಿನ, ಮಳೆನಕ್ಷತ್ರ: ರೋಹಿಣಿ 3.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-06 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ : 25 ಜುಲ್ಕಾಯದ್
ಅದೃಷ್ಟ ಸಂಖ್ಯೆ : 2, 7

ಮೇಷ: ಮನೆಯಲ್ಲಿನ ವಿಷಯಗಳನ್ನು ಹೊರಗೆ ಸೋರಿಕೆ ಮಾಡುತ್ತಿರುವ ವ್ಯಕ್ತಿಗಳು ಖಂಡಿತವಾಗಿ ನಿಮ್ಮೊಂದಿಗೆ ಇರುತ್ತಾರೆ. ಹಣಕಾಸಿನ ವಿಚಾರದಲ್ಲಿ ಪರಿಶ್ರಮಕ್ಕೆ ತಕ್ಕ ಫಲ ದೊರೆಯುವುದು.

ವೃಷಭ: ಜತೆಗಾರರ ಅಭಿರುಚಿಗಳು ನಿಮ್ಮ ಅಭಿರುಚಿಗಿಂತ ಬಹಳ ಭಿನ್ನವಾಗಿರುವುದರಿಂದ ಇಂದಿನ ದಿನ ಖುಷಿ ಎನ್ನಿಸುವುದಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗದ ಭರವಸೆ ದೇವತಾನುಗ್ರಹದಿಂದ ಸಿಗಲಿದೆ.

ಮಿಥುನ: ಪ್ರಯತ್ನ ಬೇಕಾದಷ್ಟೇ ಇದ್ದರೂ ಯಶಸ್ಸು ಒಲಿದು ಬರುವುದು ಕಷ್ಟಕರ ಸಂಗತಿ. ಯೋಗ ಪ್ರಾಣಾಯಾಮಗಳನ್ನು ಅಭ್ಯಾಸ ಮಾಡುವುದರಿಂದ ಆರೋಗ್ಯದಲ್ಲಿ ಚೇತರಿಕೆ ಕಾಣಬಹುದು.

ಕರ್ಕಾಟಕ: ಸಹೋದ್ಯೋಗಿಗಳೊಡನೆ ಪ್ರೀತಿಯಿಂದ ವರ್ತಿಸುವುದರಿಂದ ಕೆಲಸ ಸರಾಗವಾಗಿ ಸಾಗಲಿದೆ. ಹತ್ತಿಯ ಕೆಲಸವನ್ನು ಮಾಡುವಂಥವರಿಗೆ ಉಷ್ಣದ ಸಮಸ್ಯೆ ಕಾಡಬಹುದು. ಆಕಸ್ಮಿಕ ಪ್ರಯಾಣದ ಸಾಧ್ಯತೆಯಿದೆ.

ಸಿಂಹ: ವಿವಿಧ ಕಾರಣಗಳಿಂದಾಗಿ ಮನೆಗೆ ಬಂದ ಅತಿಥಿಗಳನ್ನು ಸರಿಯಾಗಿ ಸತ್ಕರಿಸಲಾಗದೆ ದಿನದ ಕಡೆಯಲ್ಲಿ ಬೇಸರ ಪಡುವಿರಿ. ಸಂಗೀತ-ನಾಟ್ಯ ಸಾಧಕರಿಗೆ ಉತ್ತಮವಾದ ವೇದಿಕೆ ದೊರೆತು ವಿದ್ವತ್ ಪ್ರದರ್ಶನವಾಗುವುದು.

ಕನ್ಯಾ: ಕೆಲ ನಿರ್ಧಾರಗಳು ನಿಮಗೆ ಸರಿಯಾಗಿ ಕಂಡು ಬಂದರೂ ಸಭೆಯಲ್ಲಿ ಇತರರ ದೃಷ್ಟಿಕೋನವನ್ನು ನೋಡಿ ಬದಲಿಸಿಕೊಳ್ಳಬೇಕಾಗಬಹುದು. ಬೇರೆ ಬೇರೆ ಕಾರಣಗಳಿಗಾಗಿ ಒಂದೇ ಸ್ಥಳಕ್ಕೆ ಪುನಃ ಭೇಟಿ ನೀಡುವಂತಾಗುತ್ತದೆ.

ತುಲಾ: ತಾಯಿಯ ಮೂಲಕ ನಿಮಗೆ ಬರಬೇಕಾದ ಪಿತ್ರಾರ್ಜಿತ ಆಸ್ತಿಗೆ ಬಹಳ ಪ್ರಯತ್ನ ಬೇಕಾಗುತ್ತದೆ. ಸ್ಥಿರ ಆಸ್ತಿಯನ್ನು ಉಳಿಸಿಕೊಳ್ಳುವ ಕಾರಣದಿಂದ ಕೋರ್ಟು ಕಚೇರಿ ನಡುವೆ ಅಲೆಯುವಂತೆ ಆಗುತ್ತದೆ.

ವೃಶ್ಚಿಕ: ಮೇಲಧಿಕಾರಿಗಳಿಂದ ನೀವು ಅಪೇಕ್ಷಿಸುವ ಸಹಕಾರಗಳು ದೊರೆತಂತೆ ಕಂಡರೂ ಸಂತೃಪ್ತಕರ ರೀತಿಯಲ್ಲಿರುವುದಿಲ್ಲ. ಹೊಸ ನೀರು ಬಂದಾಗ ಹಳೆ ನೀರು ಹೋಗುವುದು ಸಹಜವಾದರೂ ಹಳೆಯ ಜನರನ್ನು ಮರೆಯದಿರಿ.

ಧನು: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ಇಂದು ವಿದೇಶದಲ್ಲಿರುವ ಮಕ್ಕಳಿಂದ ಅಚ್ಚರಿಯ ಸುದ್ದಿಯೊಂದನ್ನು ಕೇಳುವಿರಿ.

ಮಕರ: ಗುರಿಯನ್ನು ತಲುಪುವುದು ಕಷ್ಟವೇನಲ್ಲವಾದರೂ ಪ್ರಯತ್ನ ಮುಖ್ಯ. ಜೀವನದ ಕೆಲವು ಪ್ರಮುಖ ಸಮಾರಂಭಕ್ಕೆ ನೀವು ಕ್ಷಣಗಣನೆ ಮಾಡುವಂತಾಗುವಿರಿ.

ಕುಂಭ: ದ್ರವಾಹಾರದ ಸೇವನೆ ಕಡಿಮೆಯಾಗಿ ಚರ್ಮದಲ್ಲಿ ಶುಷ್ಕತೆ ಉಂಟಾಗುವ ಸಾಧ್ಯತೆ ಇದೆ. ಎಚ್ಚರವಹಿಸಿ. ಕೆಲಸ ಮತ್ತು ದುಡಿಮೆ ಸಮೃದ್ಧಿಯಾಗಿ ಇಲ್ಲವಾದರೂ ಕೌಟುಂಬಿಕ ನೆಮ್ಮದಿಗೆ ಕೊರತೆ ಕಾಣುವುದಿಲ್ಲ.

ಮೀನ: ಸಂಘ-ಸಂಸ್ಥೆಗಳಲ್ಲಿ ಅಧಿಕಾರ ಹೊಂದಿದವರು ಲೆಕ್ಕ ಪತ್ರಗಳ ಪರಿಶೋಧನೆ ಮಾಡುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚು ಉಂಟಾಗುತ್ತದೆ. ಕಿರಿಯರ ಮಾತನ್ನು ಕಡೆಗಣಿಸದೆ ಪರಾಮರ್ಶಿಸಿ.

ಪದಬಂಧ 5700

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉಸಿರನ್ನು ಹೊರಗೆ ಬಿಡುವಿಕೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗನ್ನಿ (3)
11.ಗರ ಬಡಿದಂತಿರುವ ಪತಿವ್ರತೆ (3)
13.ಕರೆಯುವಿಕೆಯನ್ನು ಹೀಗೆನ್ನಿ (3)
15.ಕಪ್ಪೆ ಚಿಪ್ಪು ಇಲ್ಲಿದೆ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಲಾಂದ್ರವನ್ನು ಹೀಗೂ ಹೇಳುವರು (3)
18.ಕದಿಯಲು ಬೇಕಾದ ಧಾನ್ಯದ ತೆನೆ (3)

ಮೇಲಿಂದ ಕೆಳಕ್ಕೆ
2.ಸಭೆಯಲ್ಲಿ ಕುಳಿತಿರುವವನು (3)
3.ಈತ ಹಾಡುಗಾರ (3)
6.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
9.ವಾಚಕನನ್ನು ಆಡುಮಾತಲ್ಲಿ ಕರೆಯಿರಿ (3)
10.ಸ್ನೇಹಿತೆ ಇಲ್ಲಿದ್ದಾಳೆ (3)
12.ಆನೆಯ ದಾಡೆ (3)
14.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
15.ನಾಯಿ ಇಲ್ಲಿಗೆ ಬಂದಿದೆಯಲ್ಲಾ? (3)

1		2	■	■	■	3		4
■	■	5		6			■	■
7			■		■	8		
■	■	■	9		10	■	■	■
■	■	■		■		■	■	■
■	■	■	11	12		■	■	■
13		14	■		■	15		
■	■	16					■	■
17			■	■	■	18		

5699ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಭರತಿ 6.ಬೇಜವಾಬ್ದಾರಿ 7.ಕಶದ 8.ಕರ 10.ಮಂಗ 11.ಸರದಿ 13.ಗನ 14.ರವಿ 18.ತಗಡು 19.ಜಲತರಂಗ 20.ಕರಡು

ಮೇಲಿಂದ ಕೆಳಕ್ಕೆ:
1.ಭಯಂಕರ 2.ತಿಲೋದಕ 3.ಸೋಂಬೇರಿ 4.ಕವಾಡಿಗ 5.ಕಾರಿರುಳು 9.ರಸನ 10.ಮಂದಿರ 12.ಮೃಗಜಲ 13.ಗರಂತಲಂ 15.ವಿತರಕ 16.ಬಡನಡು 17.ಮಗಳು

ಸುಡೊಕು 6085

	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6084 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಮತಗಟ್ಟೆ ಸಮೀಕ್ಷೆ ಆತಂಕ ಬೇಡ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ಶಿಕ್ಷಕರ ಮತ್ತು ಪದವೀಧರ ಕ್ಷೇತ್ರಗಳು ಹಾಗೂ ವಿಧಾನಸಭೆಯಿಂದ ನಡೆಯುವ ಚುನಾವಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಭಾನುವಾರ ನಡೆಯಿತು.

ವಿಧಾನಸಭೆಯಿಂದ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಸೋಮವಾರ ಕೊನೆಯ ದಿನ. ಈ ಪೈಕಿ, ಕಾಂಗ್ರೆಸ್ ಅಭ್ಯರ್ಥಿಗಳನ್ನು ಸಭೆಗೆ ಪರಿಚಯಿಸಿ ಅಭ್ಯರ್ಥಿಗಳ ನಾಮಪತ್ರಗಳಿಗೆ ಸೂಚಕರು, ಅನುಮೋದಕರ ಸಹಿ ಪಡೆಯಲಾಯಿತು. ಶಿಕ್ಷಕರು ಮತ್ತು ಪದವೀಧರ ಕ್ಷೇತ್ರಗಳಿಂದ ನಡೆಯಲಿರುವ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಎಲ್ಲ ಶಾಸಕರಿಗೆ ಸೂಚಿಸಲಾಯಿತು.

ಲೋಕಸಭೆ ಚುನಾವಣೆಯ ಮತಗಟ್ಟೆ ಸಮೀಕ್ಷೆಗಳ ಬಗ್ಗೆಯೂ ಚರ್ಚೆ ನಡೆಯಿತು. ಪಕ್ಷದ ಮಾಹಿತಿಯಂತೆ 'ಇಂಡಿಯಾ' ಮೈತ್ರಿಕೂಟ ಹೆಚ್ಚು ಸ್ಥಾನ ಗೆಲ್ಲಲಿದೆ. ಪಕ್ಷ ನಡೆಸಿದ ಆಂತರಿಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಪಕ್ಷ 12 ರಿಂದ 18 ಸ್ಥಾನ ಗೆಲ್ಲಲಿದೆ. ಈ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ ಎಂದೂ ಚರ್ಚೆ ನಡೆಯಿತು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ, ಎಂ.ಬಿ. ಪಾಟೀಲ, ಕೆ.ಎಚ್.ಮುನಿಯಪ್ಪ, ವಿಧಾನಸಭೆಯ ಮುಖ್ಯ ಸಚೇತಕ ಅಶೋಕ ಎಂ.ಪಟ್ಟಣ ಮತ್ತು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹಮದ್ ಇದ್ದರು.

ಪದವೀಧರ, ಶಿಕ್ಷಕರ ಆರು ಕ್ಷೇತ್ರಗಳ ಚುನಾವಣೆ ● ಕಣದಲ್ಲಿ 78 ಅಭ್ಯರ್ಥಿಗಳು

ಪರಿಷತ್: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಪದವೀಧರರು ಮತ್ತು ಶಿಕ್ಷಕರ ತಲಾ ಮೂರು ಕ್ಷೇತ್ರಗಳಲ್ಲಿ ಸೋಮವಾರ ಮತದಾನ ನಡೆಯಲಿದೆ. ಆರು ಕ್ಷೇತ್ರಗಳಲ್ಲಿ ಒಟ್ಟು 78 ಅಭ್ಯರ್ಥಿಗಳು ಕಣದಲ್ಲಿದ್ದು, 4.33 ಲಕ್ಷ ಮಂದಿ ಮತದಾರರಿದ್ದಾರೆ.

ಲೋಕಸಭೆ ಚುನಾವಣೆಯ ಮಧ್ಯದಲ್ಲೇ ಬಂದಿರುವ ಈ ಆರು ಕ್ಷೇತ್ರಗಳ ಚುನಾವಣೆಯಲ್ಲಿ ಗೆಲುವಿಗಾಗಿ ಕಾಂಗ್ರೆಸ್ ಮತ್ತು ಬಿಜೆಪಿ– ಜೆಡಿಎಸ್ ಮೈತ್ರಿಕೂಟ ಜಿದ್ದಾಜಿದ್ದಿನ ಹೋರಾಟ ನಡೆಸುತ್ತಿವೆ. ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್– ಬಿಜೆಪಿ ಮಧ್ಯೆ ನೇರ ಪೈಪೋಟಿ ಇದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರಗಳಲ್ಲಿ ಕಾಂಗ್ರೆಸ್– ಜೆಡಿಎಸ್ ಹಣಾಹಣಿ ನಡೆಸುತ್ತಿವೆ.

ಈಶಾನ್ಯ, ನೈರುತ್ಯ ಮತ್ತು ಬೆಂಗಳೂರು ಪದವೀಧರರ ಕ್ಷೇತ್ರಗಳ ವ್ಯಾಪ್ತಿಯ 16 ಜಿಲ್ಲೆಗಳಲ್ಲಿ ಮತದಾನ ನಡೆಯಲಿದೆ. ಪದವೀಧರರ ಕ್ಷೇತ್ರಗಳಲ್ಲಿ ಒಟ್ಟು 3.63 ಲಕ್ಷ ಮತದಾರರಿದ್ದಾರೆ.

ಈಶಾನ್ಯ ಪದವೀಧರರ ಕ್ಷೇತ್ರದಲ್ಲಿ ಅತ್ಯಧಿಕ ಅಂದರೆ 1.56 ಲಕ್ಷ ಮತದಾರರಿದ್ದಾರೆ. 16 ಜಿಲ್ಲೆಗಳಲ್ಲಿ ಒಟ್ಟು 461 ಮತಗಟ್ಟೆಗಳನ್ನು ಮತದಾನಕ್ಕಾಗಿ ಸಜ್ಜುಗೊಳಿಸಲಾಗಿದೆ.

ಆಗ್ನೇಯ, ನೈರುತ್ಯ ಮತ್ತು ದಕ್ಷಿಣ ಶಿಕ್ಷಕರ ಕ್ಷೇತ್ರಗಳ ವ್ಯಾಪ್ತಿಯಲ್ಲಿ 15 ಜಿಲ್ಲೆಗಳಿವೆ. ಈ ಕ್ಷೇತ್ರಗಳಲ್ಲಿ ಒಟ್ಟು 70,260 ಮತದಾರರಿದ್ದಾರೆ. ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಅತ್ಯಧಿಕ 25,309 ಮತದಾರರಿದ್ದಾರೆ. ಈ ಕ್ಷೇತ್ರಗಳಲ್ಲಿ 170 ಮತಗಟ್ಟೆಗಳನ್ನು ತೆರೆಯಲಾಗಿದೆ.

ಬಲಗೈ ಬೆರಳಿಗೆ ಶಾಯಿ: ನೈರುತ್ಯ ಶಿಕ್ಷಕರ ಕ್ಷೇತ್ರ ಹೊರತುಪಡಿಸಿ ಉಳಿದ ಐದು ಕ್ಷೇತ್ರಗಳಲ್ಲಿ ಮತದಾರರ ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿ ಗುರುತು ಹಾಕಲಾಗುತ್ತದೆ. ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಲಗೈ ಮಧ್ಯದ ಬೆರಳಿಗೆ ಶಾಯಿಯ ಗುರುತು ಹಾಕಲಾಗುತ್ತದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಮತದಾರರ ಪಟ್ಟಿಯಲ್ಲಿ ಹೆಸರು ಇರುವವರು ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್, ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್ ಸೇರಿದಂತೆ ಕೇಂದ್ರ ಚುನಾವಣಾ ಆಯೋಗವು ನಿಗದಿಪಡಿಸಿರುವ ಭಾವಚಿತ್ರ ಸಹಿತ ಗುರುತಿನ ಹತ್ತು ದಾಖಲೆಗಳಲ್ಲಿ ಒಂದನ್ನು ಹಾಜರುಪಡಿಸಿ ಮತ ಚಲಾಯಿಸಬಹುದು.

ಪ್ರಾಶಸ್ತ್ಯದ ಮತ

ವಿಧಾನ ಪರಿಷತ್‌ನ ಪದವೀಧರರು ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಪ್ರಾಶಸ್ತ್ಯದ ಮತ ಚಲಾವಣೆಗೆ ಅವಕಾಶವಿದೆ. ಮತ ಪತ್ರದ ಮೂಲಕ ಚುನಾವಣೆ ನಡೆಯಲಿದ್ದು, ಅಭ್ಯರ್ಥಿಗಳ ಹೆಸರಿನ ಮುಂದೆ ತಮ್ಮ ಆಯ್ಕೆಯ ಪ್ರಾಶಸ್ತ್ಯವನ್ನು ಸಂಖ್ಯೆಗಳಲ್ಲಿ ನಮೂದಿಸಬೇಕಾಗುತ್ತದೆ ಎಂದು ರಾಜ್ಯ ಮುಖ್ಯ ಚುನವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಮತದಾರರ ವಿವರ

	ಪದವೀಧರರ ಕ್ಷೇತ್ರಗಳು	ಶಿಕ್ಷಕರ ಕ್ಷೇತ್ರಗಳು
ಪುರುಷರು	2,01,632	38,305
ಮಹಿಳೆಯರು	1,61,907	31,954
ಲಿಂಗತ್ವ ಅಲ್ಪಸಂಖ್ಯಾತರು	34	1

ಮತದಾನದ ಸಮಯ: ಸೋಮವಾರ ಬೆಳಿಗ್ಗೆ 8 ರಿಂದ ಸಂಜೆ 4

'ಕಿರಿಯ ಲೆಕ್ಕ ಅಧಿಕಾರಿ' ಮಧ್ಯಸ್ಥಿಕೆ?

ಒಂದನೇ ಪುಟದಿಂದ

'ಶಿವಕುಮಾರ್ ಮೂಲಕವೇ ಚೆಕ್, ಇತರೆ ದಾಖಲೆಗಳ ವಿನಿಮಯ ಆಗಿರುವ ಅನುಮಾನವಿದೆ. ಆದರೆ, ಇದು ಆರ್ಥಿಕ ವ್ಯವಹಾರಕ್ಕೆ ಸಂಬಂಧಪಟ್ಟ ಅಪರಾಧ. ಆರೋಪಿ ಯಾರು? ಹಣ ದುರ್ಬಳಕೆ ಮಾಡಿಕೊಂಡವರು ಯಾರು ಎಂಬುದನ್ನು ನಿಖರವಾಗಿ ಈಗಲೇ ಹೇಳಲು ಸಾಧ್ಯವಿಲ್ಲ. ಬ್ಯಾಂಕ್ ಅಧಿಕಾರಿಗಳಿಂದ ಸೂಕ್ತ ದಾಖಲೆಗಳನ್ನು ಕಲೆಹಾಕಿದ ನಂತರವೇ ಸ್ಪಷ್ಟ ಮಾಹಿತಿ ತಿಳಿಯಲಿದೆ' ಎಂದು ಮೂಲಗಳು ಹೇಳಿವೆ.

ಬ್ಯಾಂಕ್ ಸಿಬ್ಬಂದಿ ವಿಚಾರಣೆ: 'ಬ್ಯಾಂಕ್ ಸಿಬ್ಬಂದಿ ಮೂಲಕವೇ ಹಣ ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಆಗಿದೆ. ಬ್ಯಾಂಕ್ ಸಿಬ್ಬಂದಿಯ ವಿಚಾರಣೆ ಅಗತ್ಯವಿದೆ. ಕೆಲ ಸಿಬ್ಬಂದಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ಕಾನೂನಿನ ವ್ಯಾಪ್ತಿಯಲ್ಲಿ ಹಣ ವರ್ಗಾವಣೆ ಮಾಡಲಾಗಿದೆ ಎಂದು ಸಿಬ್ಬಂದಿ ಹೇಳುತ್ತಿದ್ದಾರೆ. ಅವರ ಹೇಳಿಕೆಯನ್ನು ದಾಖಲಿಸಿಕೊಂಡು, ವಾಪಸು ಕಳುಹಿಸಲಾಗುತ್ತಿದೆ. ಸೂಕ್ತ ದಾಖಲೆ ಲಭ್ಯವಾಗುತ್ತಿದ್ದಂತೆ, ಮತ್ತೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಹೇಳಿವೆ.

'ಶಿವಕುಮಾರ್ ಯಾರೆಂದು ಗೊತ್ತಿಲ್ಲ'

'ಕಿರಿಯ ಲೆಕ್ಕ ಅಧಿಕಾರಿ ಶಿವಕುಮಾರ್ ಯಾರು ಎಂಬುದು ಗೊತ್ತಿಲ್ಲ. ಈ ಹುದ್ದೆಯೇ ನಿಗಮದಲ್ಲಿಲ್ಲ. ಈತನ ಹೆಸರಿನಲ್ಲಿ ಯೂನಿಯನ್ ಬ್ಯಾಂಕ್‌ಗೆ ಯಾವುದೇ ಪತ್ರ ನೀಡಿಲ್ಲ. ನನ್ನ ಸಹಿ, ಮೊಹರು ದುರ್ಬಳಕೆ ಮಾಡಿಕೊಂಡು ನಕಲಿ ಪತ್ರ ಸೃಷ್ಟಿಸಲಾಗಿದೆ. ಈ ಬಗ್ಗೆ ಬ್ಯಾಂಕ್‌ಗೆ ದೂರು ನೀಡಿದ್ದೇನೆ' ಎಂಬುದಾಗಿ ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜಿ. ಪದ್ಮನಾಭ ಅವರು ಎಸ್‌ಐಟಿ ಅಧಿಕಾರಿಗಳ ಎದುರು ಹೇಳಿಕೊಂಡಿದ್ದಾರೆ.

'ಹಣ ವರ್ಗಾವಣೆಗೂ ಹಗರಣಕ್ಕೂ ನನಗೂ ಸಂಬಂಧವಿಲ್ಲ. ನನ್ನ ಸಹಿ ಹಾಗೂ ಮೊಹರು ನಕಲು ಮಾಡಿಕೊಂಡು, ಬ್ಯಾಂಕ್ ಮೂಲಕ ಹಣದ ವಹಿವಾಟು ನಡೆಸಿರುವುದನ್ನು ನಾನೇ ಮೊದಲು ಪತ್ತೆ ಮಾಡಿದ್ದೆ. ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳಿಗೂ ಪತ್ರ ಬರೆದಿದ್ದೆ. ಆದರೆ, ಅವರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬ್ಯಾಂಕ್ ಅಧಿಕಾರಿಗಳನ್ನು ವಿಚಾರಣೆ ನಡೆಸಬೇಕು. ಜೊತೆಗೆ, ಶಿವಕುಮಾರ್ ಹೆಸರಿನಲ್ಲಿ ಪತ್ರ ಸೃಷ್ಟಿಸಿದ್ದು ಯಾರು ಎಂಬುದನ್ನೂ ಪತ್ತೆ ಮಾಡಬೇಕು' ಎಂದು ಪದ್ಮನಾಭ ತಿಳಿಸಿರುವುದಾಗಿ ಗೊತ್ತಾಗಿದೆ.

'18 ಖಾತೆಯುಳ್ಳ ಬ್ಯಾಂಕ್‌ಗಳಿಗೆ ಪತ್ರ'

'ವಿವಿಧ ಬ್ಯಾಂಕ್‌ಗಳ 18 ಖಾತೆಗಳಿಗೆ ನಿಗಮದ ಹಣ ವರ್ಗಾವಣೆ ಆಗಿರುವುದು ಗೊತ್ತಾಗಿದೆ. ಖಾತೆಗಳ ವಿವರ ಹಾಗೂ ಹಣದ ವಹಿವಾಟು ಬಗ್ಗೆ ಮಾಹಿತಿ ನೀಡುವಂತೆ ಕೋರಿ ಆಯಾ ಬ್ಯಾಂಕ್ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ' ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

'ಆಡಿಟ್ ಮಾಡಿ ಶ್ವೇತಪತ್ರ ಮಂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಬ್ರಹ್ಮಾಂಡ ಭ್ರಷ್ಟಾಚಾರ ಗಮನಿಸಿದರೆ, ಇತರ ನಿಗಮಗಳು, ಇಲಾಖೆಗಳಿಂದಲೂ ಹಣ ವರ್ಗಾವಣೆ ಆಗಿರುವ ಸಾಧ್ಯತೆ ಇದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸಂಶಯ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಕರ್ನಾಟಕದ ಜನರ ಈ ಅನುಮಾನ ನಿವಾರಿಸಲು ರಾಜ್ಯದ ಎಲ್ಲ ನಿಗಮ ಮಂಡಳಿಗಳ ಹಣಕಾಸಿನ ಸ್ಥಿತಿಗತಿ ಬಗ್ಗೆ ಲೆಕ್ಕಪರಿಶೋಧನೆ ಆಡಿಟ್ ನಡೆಸಿ, ನಿಗಮ– ಮಂಡಳಿಗಳ ಆರ್ಥಿಕ ಪರಿಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಅವರು 'ಎಕ್ಸ್' ಮೂಲಕ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.

'ಕರ್ನಾಟಕವನ್ನು ಲೂಟಿ ಮಾಡಿ ಹೈಕಮಾಂಡ್‌ಗೆ ಟಕಾಟಕ್ ಅಂತ ಹಣ ವರ್ಗಾವಣೆ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ನಿಗಮ ಮಂಡಳಿಗಳೇ ಎಟಿಎಂಗಳಾಗಿವೆ. ದಲಿತರು, ಹಿಂದುಳಿದವರು, ಗ್ರಾಮೀಣ ಜನರ ಕಲ್ಯಾಣಕ್ಕೆ ಬಳಕೆಯಾಗಬೇಕಿದ್ದ ನಿಗಮ–ಮಂಡಳಿಗಳ ಹಣ ಭ್ರಷ್ಟರ ಪಾಲಾಗುತ್ತಿರುವ ವಾಸನೆ ಬರುತ್ತಿದೆ' ಎಂದು ಹೇಳಿದ್ದಾರೆ.


11 ಸ್ಥಾನಗಳಿಗೆ ಅಭ್ಯರ್ಥಿ ಪ್ರಕಟ


ಒಂದನೇ ಪುಟದಿಂದ


ವಿಧಾನಸಭೆ ಚುನಾವಣೆಯಲ್ಲಿ ತಂದೆ ಸಿದ್ದರಾಮಯ್ಯ ಅವರ ಸ್ಪರ್ಧೆಗಾಗಿ ವರುಣಾ ಕ್ಷೇತ್ರದಲ್ಲಿಸ್ಪರ್ಧೆಯಿಂದ ಹಿಂದೆ ಸರಿದಿದ್ದ ಡಾ.ಯತೀಂದ್ರ, ಕಲಬುರಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಗದೇವ್ ಗುತ್ತೇದಾರ್, ಕೆಪಿಸಿಸಿ ಕಾರ್ಯಾಧ್ಯಕ್ಷ ಎ. ವಸಂತಕುಮಾರ್, ಪರಿಷತ್ ಮಾಜಿ ಸದಸ್ಯ ಐವನ್ ಡಿಸೋಜ, ರಾಜ್ಯ ಅಲ್ಪಸಂಖ್ಯಾತರ ಆಯೋಗದ ಮಾಜಿ ಅಧ್ಯಕ್ಷೆ ಬಿಲ್ಕಿಸ್ ಬಾನು ಅವರಿಗೆ ಕಾಂಗ್ರೆಸ್ ಮಣೆ ಹಾಕಿದೆ.

ಜಗದೀಶ ಶೆಟ್ಟರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮುಂದೆ ನಡೆಯುವ ಉಪ ಚುನಾವಣೆಗೆ ಬಸನಗೌಡ ಬಾದರ್ಲಿ ಅವರನ್ನು ಕಾಂಗ್ರೆಸ್ ಆಯ್ಕೆಮಾಡಿದೆ. ರಾಯಚೂರಿನ ಬಾದರ್ಲಿ ಅವರು ರಾಜ್ಯ ಯುವ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ.

ಟಿಕೆಟ್ ಗಿಟ್ಟಿಸಿಕೊಂಡ ಎಂಟು ಮಂದಿಯಲ್ಲಿ ನಾಲ್ವರು (ಎನ್.ಎಸ್. ಬೋಸರಾಜು, ಜಗದೇವ್ ಗುತ್ತೇದಾರ್, ವಸಂತಕುಮಾರ್, ಬಸನಗೌಡ ಬಾದರ್ಲಿ) ಕಲ್ಯಾಣ ಕರ್ನಾಟಕದವರು. ಈ ಪೈಕಿ, ಗುತ್ತೇದಾರ್ ಹೊರತುಪಡಿಸಿ ಉಳಿದವರು ರಾಯಚೂರು ಜಿಲ್ಲೆಯವರು.


ರವಿಕುಮಾರ್


ಜವರಾಯಿಗೌಡ


ಬೋಸರಾಜು


ಗೋವಿಂದರಾಜ್


ಯತೀಂದ್ರ


ಐವನ್ ಡಿಸೋಜ

ಗುತ್ತೇದಾರ್ ಮತ್ತು ವಸಂತಕುಮಾರ್ ಆಯ್ಕೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೈ ಮೇಲಾಗಿದೆ ಎಂದು ಪಕ್ಷದ ವಲಯದಲ್ಲಿ ವಿಶ್ಲೇಷಿಸಲಾಗಿದೆ. ಗೋವಿಂದರಾಜ್ ಮತ್ತು ಐವನ್ ಡಿಸೋಜ ಅವರು ಸಿದ್ದರಾಮಯ್ಯ ಅವರ ಆಪ್ತ ವಲಯದವರು. ಕೆಲ ಸಚಿವರ ಒತ್ತಡ ಹಾಗೂ ತೆಲಂಗಾಣ, ಆಂಧ್ರಪ್ರದೇಶ ಚುನಾವಣೆಯಲ್ಲಿ ತೊಡಗಿಸಿಕೊಂಡಿದ್ದ ಕಾರಣಕ್ಕೆ ಬೋಸರಾಜು ಅವರಿಗೆ ಮತ್ತೆ ಅವಕಾಶ ದೊರೆತಿದೆ ಎಂದು ಗೊತ್ತಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ಸಿಂಧನೂರು ಕ್ಷೇತ್ರದಿಂದ ಟಿಕೆಟ್ ಸಿಗದ ಕಾರಣಕ್ಕೆ ಬಂಡೆದ್ದು ಬಸನಗೌಡ ಬಾದರ್ಲಿ ನಾಮಪತ್ರ ಸಲ್ಲಿಸಿದ್ದರು. ಆಗ, ಮುಂದೆ ಅವಕಾಶ ನೀಡುವ ಭರವಸೆ ನೀಡಿ ನಾಮಪತ್ರ ವಾಪಸ್ ಪಡೆಯುವಂತೆ ಮಾಡಿದ್ದರು. ಬಾದರ್ಲಿ ಲೋಕಸಭೆ ಚುನಾವಣೆಗೆ ಕೊಪ್ಪಳ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಟಿಕೆಟ್ ಕೈತಪ್ಪಿತ್ತು. ಸದ್ಯ ಮೇಲ್ಮನೆ ಪ್ರವೇಶಿಸಲು ಅವಕಾಶ ಸಿಕ್ಕಿದೆ.

ಅಚ್ಚರಿಯ ಆಯ್ಕೆ: ಮುಸ್ಲಿಂ ಕೋಟಾದಿಂದ ಇಸ್ಮಾಯಿಲ್ ತಮಟಗಾರ, ಅಲ್ತಾಫ್ ಹಳ್ಳೂರ, ಆಗಾ ಸುಲ್ತಾನ್ ನಡುವೆ ಪೈಪೋಟಿ ಎದುರಾಗಿತ್ತು. ತಮಟಗಾರ ಪರ ಸಚಿವ ಜಮೀರ್ ಅಹ್ಮದ್ ಖಾನ್ ಲಾಬಿ ನಡೆಸಿದ್ದರು. ಕೊನೆ ಕ್ಷಣದಲ್ಲಿ ಈ ಪೈಪೋಟಿ ಮತ್ತು ಮಹಿಳೆ ಎಂಬ ಕಾರಣಕ್ಕೆ ಬಿಲ್ಕಿಸ್ ಬಾನು ಅವರಿಗೆ ಅದೃಷ್ಟ ಒಲಿದಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಇಂದು ಕೆಲವೆಡೆ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಸೋಮವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹವಾಮಾನ ಇಲಾಖೆಯು ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು ಹಾಗೂ ಮಂಡ್ಯ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಈ ಜಿಲ್ಲೆಗಳ ಜತೆಗೆ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು, ಬಾಗಲಕೋಟೆ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಯ ಒಂದೆರಡು ಕಡೆ ಗಾಳಿ ಸಹಿತ ಭಾರಿ ಮಳೆ ಸಾಧ್ಯತೆಯಿದೆ.

ಕರಾವಳಿ ಸೇರಿ ರಾಜ್ಯದ ವಿವಿಧೆಡೆ ಮುಂದಿನ ಒಂದು ವಾರ ಗುಡುಗು ಸಹಿತ ಭಾರಿ ಮಳೆ ಆಗಬಹುದು. ಕೆಲವೆಡೆ 40 ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮುಂದಿನ ಎರಡು ದಿನ ರಾಜ್ಯದಾದ್ಯಂತ ಗರಿಷ್ಠ ಹಾಗೂ ಕನಿಷ್ಠ ತಾಪಮಾನವು 2 ರಿಂದ 3 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಹೊನಕೆರೆಯಲ್ಲಿ 8 ಸೆಂ.ಮೀ. ಮಳೆ: ಭಾನುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ದಕ್ಷಿಣ ಒಳನಾಡಿನ ಕೆಲವು ಕಡೆ, ಕರಾವಳಿ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆ ಮಳೆಯಾಗಿದೆ. ಮಂಡ್ಯದ ಹೊನಕೆರೆಯಲ್ಲಿ 8 ಸೆಂ. ಮೀ. ಮಳೆಯಾಗಿದೆ. ಬೆಂಗಳೂರಿನ ಜಿಕೆವಿಕೆ ಹಾಗೂ ಕೊಪ್ಪಳದ ಗಂಗಾವತಿಯಲ್ಲಿ ತಲಾ 6 ಸೆಂ. ಮೀ., ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣ, ಬೆಂಗಳೂರು ಗ್ರಾಮಾಂತರದ ದೇವನಹಳ್ಳಿ, ತುಮಕೂರಿನ ಮಿಡಿಗೇಶಿಯಲ್ಲಿ ತಲಾ 5 ಸೆಂ.ಮೀ. ಮಳೆ ಸುರಿದಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ.


ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದ ಎದುರು ಮಳೆಯಲ್ಲಿ ನೆನೆದುಕೊಂಡು ಜನರು ಸಾಗಿದ ದೃಶ್ಯ ಭಾನುವಾರ ಕಂಡುಬಂತು

ಮೊಳಕಾಲ್ಮುರಿನಲ್ಲಿ ಉತ್ತಮ ಮಳೆ

ಚಿತ್ರದುರ್ಗ/ದಾವಣಗೆರೆ: ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ವಿವಿಧೆಡೆ ಶನಿವಾರ ತಡರಾತ್ರಿ ಹಾಗೂ ಭಾನುವಾರ ಉತ್ತಮ ಮಳೆ ಸುರಿದಿದ್ದು, ಹಳ್ಳಕೊಳ್ಳಗಳು ತುಂಬಿ ಹರಿದಿವೆ.

ಕೋನಾಪುರ, ತುಪ್ಪದಕ್ಕನಹಳ್ಳಿ ಕೆರೆ, ಅಮುಕುಂದಿ ಕೆರೆ, ಮೋಟಮಲ್ಲಯ್ಯ ಕೆರೆ, ಪಕ್ಕುರ್ತಿ ಕೆರೆ ಸೇರಿದಂತೆ ಹಲವು ಕೆರೆಗಳಿಗೆ ಸಮೃದ್ಧವಾಗಿ ನೀರು ಹರಿದುಬಂದಿವೆ.

ತಾಲ್ಲೂಕಿನ ದೇವಸಮುದ್ರ ವ್ಯಾಪ್ತಿಯಲ್ಲಿ ಅತ್ಯಧಿಕ 7 ಸೆಂ. ಮೀ ಮಳೆಯಾಗಿದೆ. ರಾಯಾಪುರದಲ್ಲಿ 5.7 ಸೆಂ. ಮೀ., ರಾಂಪುರ ವ್ಯಾಪ್ತಿಯಲ್ಲಿ 6.5 ಸೆಂ. ಮೀ. ಮಳೆಯಾಗಿದೆ.

ಗಾಳಿ, ಮಳೆಯಿಂದಾಗಿ ದೇವಸಮುದ್ರ ಹೋಬಳಿ ವ್ಯಾಪ್ತಿಯ ಜೆ.ಬಿ. ಹಳ್ಳಿ ಗ್ರಾಮದಲ್ಲಿ ಬಾಳೆ ತೋಟಗಳಿಗೆ ಹಾನಿಯಾಗಿದೆ. ಜಂಬನಮಲ್ಕಿ ಗ್ರಾಮದಲ್ಲಿ ಮನೆ ಬಿದ್ದಿದೆ.

ದಾವಣಗೆರೆ ಜಿಲ್ಲೆಯ ಸಂತೇಬೆನ್ನೂರಿನಲ್ಲಿ ಭಾನುವಾರ ಸಂಜೆ ಉತ್ತಮ ಮಳೆಯಾಗಿದ್ದು, ಹರಿಹರದಲ್ಲಿ ತುಂತುರು ಮಳೆಯಾಗಿದೆ.

ಚಿಕ್ಕಜಾಜೂರು ವ್ಯಾಪ್ತಿಯ ಹಿರೇಎಮ್ಮಿಗನೂರು, ನಂದಿಹಳ್ಳಿ, ಅಂತಾಪುರ ಗ್ರಾಮಗಳಲ್ಲಿ ಭಾನುವಾರ ಸಂಜೆ ಮುಕ್ಕಾಲು ಗಂಟೆ ಬಿರುಸಿನ ಮಳೆಯಾಗಿದೆ. ಹಲವು ಕಡೆಗಳಲ್ಲಿ ಹೊಲಗಳಲ್ಲಿ ನೀರು ನಿಂತಿದೆ.

ಕುಸಿದ ಮನೆ ಕುಡತಿನಿ (ಬಳ್ಳಾರಿ ವರದಿ): ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಶನಿವಾರ ತಡ ರಾತ್ರಿ ಉತ್ತಮ ಮಳೆ ಸುರಿದಿದ್ದು, ಜೋರು ಗಾಳಿ, ಮಳೆಗೆ ಪಟ್ಟಣದ 8ನೇ ವಾರ್ಡ್‌ನಲ್ಲಿ ಮಹಿಳೆಯೊಬ್ಬರಿಗೆ ಸೇರಿದ ಸಿಮೆಂಟ್ ಶೀಟಿನ ಮನೆ ಸಂಪೂರ್ಣ ಕುಸಿದಿದೆ.

ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮನೆಯಲ್ಲಿದ್ದ ದವಸ, ಧಾನ್ಯಗಳು, ಇತರೆ ವಸ್ತುಗಳಿಗೆ ಹಾನಿಯಾಗಿದೆ. ವಾರದಿಂದ ಬಿಡುವು ಕೊಟ್ಟಿದ್ದ ಮಳೆ, ಶನಿವಾರ ಒಂದು ಗಂಟೆಗೂ ಹೆಚ್ಚು ಕಾಲ ರಭಸವಾಗಿ ಸುರಿದಿದೆ. ಗಾಳಿ ಅರ್ಭಟವೂ ಜೋರಾಗಿತ್ತು. ಮಳೆ ಮಾಪನ ಕೇಂದ್ರದಲ್ಲಿ 3.4 ಸೆಂ.ಮೀ ಮಳೆಯ ಪ್ರಮಾಣ ದಾಖಲಾಗಿದೆ.

ವಿವಿಧೆಡೆ ಧಾರಾಕಾರ ಮಳೆ

ಒಂದನೇ ಪುಟದಿಂದ

ಚಿಂಚೋಳಿಯಲ್ಲಿ ಸುಮಾರು ಅರ್ಧ ಗಂಟೆ ಬಿರುಸಿನ ಮಳೆ ಸುರಿದರೆ, ಕಲಬುರಗಿಯಲ್ಲಿ 10 ನಿಮಿಷ ಸುರಿಯಿತು. ಬೀದರ್ ಜಿಲ್ಲೆಯ ಕಮಲನಗರ, ಭಾಲ್ಕಿ, ಹುಲಸೂರಿನಲ್ಲಿ ಉತ್ತಮ ಮಳೆಯಾಗಿದ್ದು, ಭಾಲ್ಕಿ ತಾಲ್ಲೂಕಿನ ಹಲಸಿ ತುಗಾಂವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶ್ರೀಮಾಳಿ ಗ್ರಾಮದಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಕಮಲನಗರ, ಮದನೂರ, ಸೋನಾಳ, ಖತಗಾಂವ್ ಗ್ರಾಮಗಳಲ್ಲಿ ಮಳೆಯಾಯಿತು.

ವಿಜಯಪುರ ವರದಿ: ನಗರದಲ್ಲಿ ಭಾನುವಾರ ಸಂಜೆ ಅರ್ಧ ತಾಸು ಗುಡುಗು, ಸಿಡಿಲು ಸಹಿತ ಸಾಧಾರಣ ಮಳೆ ಸುರಿಯಿತು.

ವಾರದಿಂದ ಮಳೆಯಿಲ್ಲದೇ ಬೇಸಿಗೆ ಬಿಸಿಲು 40 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. ಉಷ್ಣಾಂಶ ಹೆಚ್ಚಳದಿಂದ ಜನ ಹೈರಾಣಾಗಿದ್ದರು. ಭಾನುವಾರ ಸುರಿದ ಮಳೆಯು ವಾತಾವರಣವನ್ನು ತಂಪಾಗಿಸಿತು.

ರಾಜಸ್ಥಾನದ ಕೆಲವೆಡೆ ಸಾಧಾರಣ ಮಳೆ

ಜೈಪುರ (ಪಿಟಿಐ): ರಾಜಸ್ಥಾನದ ಕೆಲವೆಡೆ ಭಾನುವಾರ ಗುಡುಗು ಸಹಿತ ಸಾಧಾರಣ ಮಳೆಯಾಗಿದೆ. 'ರಾಜ್ಯದ ಕೆಲವು ಭಾಗಗಳಲ್ಲಿ ಮುಂಜಾನೆ 8:30ರವರೆಗೆ 1ರಿಂದ 5 ಮಿ.ಮೀ ಮಳೆಯಾಗಿದೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಬಿಕನೇರ್, ಜೈಪುರ, ಭರತ್‌ಪುರ, ಅಜ್ಮೀರ್ ಮತ್ತು ಜೋಧ್‌ಪುರದಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂದಿನ ದಿನಗಳಲ್ಲಿ ಗರಿಷ್ಠ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ದಾಖಲಾಗುವ ಮತ್ತು ಬಿಸಿಗಾಳಿ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಜೈಪುರ ಹವಾಮಾನ ಇಲಾಖೆಯ ನಿರ್ದೇಶಕ ರಾಧೇಶ್ಯಾಮ್ ಶರ್ಮ ತಿಳಿಸಿದ್ದಾರೆ.

ಎರ್ನಾಕುಳಂನಲ್ಲಿ ಆರೆಂಜ್ ಅಲರ್ಟ್ (ತಿರುವನಂತಪುರ ವರದಿ): ನೈರುತ್ಯ ಮಾರುತಗಳಿಂದಾಗಿ ಕೇರಳದ ಹಲವು ಭಾಗಗಳಲ್ಲಿ ಭಾನುವಾರವೂ ಉತ್ತಮ ಮಳೆಯಾಗಿದೆ. ಕೆಲವು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿರುವ ಎರ್ನಾಕುಳಂ ಜಿಲ್ಲೆಯಲ್ಲಿ ಹವಾಮಾನ ಇಲಾಖೆಯು (ಐಎಂಡಿ) ಆರೆಂಜ್ ಅಲರ್ಟ್ ಘೋಷಿಸಿದೆ.

ಶನಿವಾರ ಒಂದೇ ದಿನ 245.41 ಗಿಗಾ ವಾಟ್ ಬಳಕೆ ● ಜೂನ್ ತಿಂಗಳಿನಲ್ಲಿ ಮತ್ತಷ್ಟು ಅಧಿಕ: ತಜ್ಞರು

ಬಿಸಿಲ ಬೇಗೆ: ವಿದ್ಯುತ್ ಬಳಕೆ ತೀವ್ರ ಹೆಚ್ಚಳ

ನವದೆಹಲಿ (ಪಿಟಿಐ): ತೀವ್ರ ಬಿಸಿಲಿನ ಪರಿಣಾಮ ಎ.ಸಿ, ಫ್ಯಾನ್ ಮತ್ತಿತರ ಹವಾನಿಯಂತ್ರಕ ಸಾಧನಗಳ ಬಳಕೆ ಹೆಚ್ಚಾಗಿದ್ದು, ಇದರಿಂದ ದೇಶದಲ್ಲಿ ಮೇ ತಿಂಗಳಿನಲ್ಲಿ ವಿದ್ಯುತ್ ಬಳಕೆಯ ಪ್ರಮಾಣವು ಶೇ 15ರಷ್ಟು ಅಧಿಕವಾಗಿದೆ.

ಒಂದೇ ದಿನ 250.07 ಗಿಗಾ ವಾಟ್ ವಿದ್ಯುತ್ ಬಳಕೆಯಾಗಿದ್ದು, ಈವರೆಗೆ ದಾಖಲಾದ ಅತ್ಯಧಿಕ ಪ್ರಮಾಣ ಇದಾಗಿದೆ. 2023 ಸೆಪ್ಟೆಂಬರ್‌ನಲ್ಲಿ ಒಂದು ದಿನ 243.27 ಗಿಗಾ ವಾಟ್ ವಿದ್ಯುತ್ ಬಳಕೆಯಾಗಿತ್ತು.

ಜೂನ್ ತಿಂಗಳ ಮೊದಲ ದಿನವಾದ ಶನಿವಾರ 245.41 ಗಿಗಾ ವಾಟ್ ವಿದ್ಯುತ್ ಬಳಕೆಯಾಗಿದೆ. 'ಈ ದತ್ತಾಂಶಗಳನ್ನು ನೋಡಿದರೆ ಜೂನ್ ತಿಂಗಳಿನಲ್ಲೂ ವಿದ್ಯುತ್ ಬಳಕೆ ಅಧಿಕವಾಗಿರಲಿದೆ' ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಮೇ 29ರಂದು ದೆಹಲಿಯ ಮಂಗೇಶ್‌ಪುರದಲ್ಲಿ 52.9 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಉಷ್ಣತಾ



ಮಾಪಕದಲ್ಲಿ ದೋಷವಿರುವ ಗುಮಾನಿ ಉಂಟಾಗಿದೆ. ಆದರೆ, ನಗರದಲ್ಲಿ ಇದೇ ಮೊದಲ ಬಾರಿಗೆ 8,302 ಮೆಗಾ ವಾಟ್ ವಿದ್ಯುತ್ ಬಳಕೆಯಾಗಿದೆ.

ಬಿಸಿಗಾಳಿಯ ಹೊಡೆತಕ್ಕೆ ಉತ್ತರ ಭಾರತ ತತ್ತರಿಸಿದೆ. ಈಗಾಗಲೇ ಹಲವಾರು ಜನರು ಸಾವನ್ನಪ್ಪಿದ್ದು, ಲಕ್ಷಾಂತರ ಜನರಿಗೆ ಆರೋಗ್ಯ ಸಮಸ್ಯೆ ಎದುರಾಗಿದೆ.

'ಕಳೆದ 120 ವರ್ಷಗಳಲ್ಲಿಯೇ ಕಂಡುಬಂದ ಕಡುಬೇಸಿಗೆ ಕಾಲ ಇದಾಗಿದ್ದು, 45–47 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕ ತಾಪಮಾನ ಈವರೆಗೆ ದಾಖಲಾಗಿರಲಿಲ್ಲ' ಎಂದು ಗಾಂಧಿನಗರದ ಐಐಟಿಯ ಪ್ರಾಧ್ಯಾಪಕ ವಿಮಲ್ ಮಿಶ್ರಾ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಮತ್ತು ಹರಿಯಾಣದ ರೋಹ್ತಕ್‌ನಲ್ಲಿ 48.8 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಈವರೆಗ ದೇಶದಲ್ಲಿ ದಾಖಲಾದ ಅತ್ಯಧಿಕ ತಾಪಮಾನ ಇದಾಗಿದೆ.

ವಿದ್ಯುತ್ ಸುರಕ್ಷತೆ: ಪ್ರಧಾನಿ ನೇತೃತ್ವದಲ್ಲಿ ಸಭೆ

ನವದೆಹಲಿ(ಪಿಟಿಐ): ಆಸ್ಪತ್ರೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅಗ್ನಿಶಾಮಕ ಮತ್ತು ವಿದ್ಯುತ್ ಸುರಕ್ಷತೆಯ ಕುರಿತು ನಿಯಮಿತವಾಗಿ ಪರಿಶೋಧನೆ ನಡೆಸುವ ಅಗತ್ಯ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಪ್ರತಿಪಾದಿಸಿದರು.


ನರೇಂದ್ರ ಮೋದಿ

ದೇಶದಲ್ಲಿ ಶಾಖಾಘಾತ ಮತ್ತು ಅಗ್ನಿ ಅನಾಹುತಗಳು ಹೆಚ್ಚಾಗುತ್ತಿರುವುದಕ್ಕೆ ಸಂಬಂಧಿಸಿ ಹಮ್ಮಿಕೊಂಡಿದ್ದ ಅವಲೋಕನಾ ಸಭೆಯಲ್ಲಿ ಪಾಲ್ಗೊಂಡಿದ್ದ ಅವರು, ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ಬಳಿಕ ರಚನೆಯಾಗುವ ನೂತನ ಸರ್ಕಾರದ 100 ದಿನಗಳ ಕಾರ್ಯಸೂಚಿಯ ಬಗ್ಗೆಯೂ ಚರ್ಚಿಸಿದರು.

ಎನ್‌ಡಿಎ ಒಕ್ಕೂಟವು ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿ, ಮೂರನೇ ಬಾರಿ ಅಧಿಕಾರಕ್ಕೇರಲಿದೆ ಎಂದು ಸಮೀಕ್ಷೆಗಳು ಹೇಳಿದ್ದವು.

ಶಾಖಾಘಾತ ಮತ್ತು ಕಾಳ್ಗಿಚ್ಚಿನ ಬಗ್ಗೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಮೋದಿ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಿದರು.

'ರೀಮಲ್' ಚಂಡಮಾರುತದಿಂದಾದ ಹಾನಿ ಹಾಗೂ ಮಿಜೋರಾಂ, ಅಸ್ಸಾಂ, ಮಣಿಪುರ, ಮೇಘಾಲಯ ಮತ್ತು ತ್ರಿಪುರಾದಲ್ಲಿನ ಪ್ರವಾಹ ಪರಿಸ್ಥಿತಿ ಹಾಗೂ ಭೂಕುಸಿತದ ಬಗ್ಗೆಯೂ ಮೋದಿ ಅಧಿಕಾರಿಗಳಿಂದ ಮಾಹಿತಿ ಪಡೆದರು ಎಂದು ಹೇಳಿಕೆ ತಿಳಿಸಿದೆ.

ಇದೇ 5ರಂದು ನಡೆಯಲಿರುವ ವಿಶ್ವ ಪರಿಸರ ದಿನದ ಸಿದ್ಧತೆಗಳ ಬಗ್ಗೆಯೂ ಮೋದಿ ಅವರು ಅವಲೋಕನಾ ಸಭೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದರು.

ನಿಧನ ವಾರ್ತೆ

ಕೆಳದಿ ಗುಂಡಾ ಜೋಯಿಸ್



ಸಾಗರ: ಇತಿಹಾಸ ಸಂಶೋಧಕ ಕೆಳದಿ ಗುಂಡಾ ಜೋಯಿಸ್ (94) ಭಾನುವಾರ ನಿಧನರಾದರು.

ಇವರಿಗೆ ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಿಗ್ಗೆ 9ಕ್ಕೆ ಇಲ್ಲಿನ ಮಾರಿಕಾಂಬಾ ರುದ್ರಭೂಮಿಯಲ್ಲಿ ನಡೆಯಲಿದೆ.

ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕೆಳದಿಯಲ್ಲಿ 'ಕೆಳದಿ ವಸ್ತುಸಂಗ್ರಹಾಲಯ' ಸ್ಥಾಪನೆಯಲ್ಲಿ ಗುಂಡಾ ಜೋಯಿಸ್ ಪ್ರಮುಖ ಪಾತ್ರ ವಹಿಸಿದ್ದರು. ಕೆಳದಿ ಇತಿಹಾಸದ ಕುರಿತು ಸಾಕಷ್ಟು ಸಂಶೋಧನೆ ನಡೆಸಿರುವ ಇವರು, ತಿಗಳಾರಿ, ಮೋಡಿ ಲಿಪಿ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರು.

'ಕೆಳದಿ ನೃಪವಿಜಯ', 'ಕೆಳದಿ ವೆಂಕಟಣ್ಣನ ಕೀರ್ತನೆಗಳು', 'ಕೆಳದಿ ವೆಂಕಣ್ಣನ ಕತೆಗಳು', 'ಹುಬ್ಬಳ್ಳಿ ಮೂರು ಸಾವಿರ ಮಠದ ಶಾಸನ ಸಂಪುಟ' ಸೇರಿ 40ಕ್ಕೂ ಅಧಿಕ ಕೃತಿಗಳನ್ನು ರಚಿಸಿರುವ ಇವರ ಸಾಧನೆ ಗುರುತಿಸಿ 1979ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ವಿಧಾನಸಭೆಯಿಂದ ಪರಿಷತ್ತಿನ 11 ಸ್ಥಾನಗಳಿಗೆ ಇದೇ 13 ರಂದು ನಡೆಯಲಿರುವ ಚುನಾವಣೆಗೆ ಮೊದಲ ಬಾರಿಗೆ ಟಿಕೆಟ್ ಪಡೆದವರ ವಿವರ

ಮರಾಠ ನಾಯಕನಿಗೆ ಮಣೆ

ಪ್ರಜಾವಾಣಿ ವಾರ್ತೆ

ಬೀದರ: ಬಿಜೆಪಿ ಈ ಸಲ ಗಡಿ ಜಿಲ್ಲೆ ಬೀದರ್‌ನ ಮರಾಠ ಸಮುದಾಯದ ಹಿರಿಯ ಮುಖಂಡ ಎಂ.ಜಿ. ಮುಳೆ ಅವರಿಗೆ ಟಿಕೆಟ್ ನೀಡಿದೆ.


ಮಾರುತಿರಾವ ಮುಳೆ

74 ವರ್ಷ ವಯಸ್ಸಿನ ಮಾರುತಿರಾವ್ ಜಿ. ಮುಳೆ ಅವರು ಮೂಲತಃ ಹುಮನಾಬಾದ್ ತಾಲ್ಲೂಕಿನ ಘಾಟಬೋರಾಳ ಗ್ರಾಮದವರು. ಅವರ ಕರ್ಮಭೂಮಿ ಬಸವಕಲ್ಯಾಣ. ರಾಜಕೀಯ ಜೀವನ ಪ್ರಾರಂಭವಾಗಿದ್ದು 1985ರಲ್ಲಿ. ಒಟ್ಟು ಏಳು ಸಲ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಆದರೆ, ಅವರಿಗೆ ಯಶಸ್ಸು ಸಿಕ್ಕಿದ್ದು 1999ರ ಚುನಾವಣೆಯಲ್ಲಿ. ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್‌ನಿಂದ ಸ್ಪರ್ಧಿಸಿ ವಿಧಾನಸಭೆ ಪ್ರವೇಶಿಸಿದ್ದರು. 2022ರಲ್ಲಿ ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ನೇಮಕ ಗೊಂಡಿದ್ದರು. ಮರಾಠ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕೆಂಬ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು. ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಜೆಪಿಯಲ್ಲಿ ಕೆಲಸ ಮಾಡಿದ್ದಾರೆ. ಶಿವ ಛತ್ರಪತಿ ಸ್ಮಾರಕ ಟ್ರಸ್ಟ್ ಹಾಗೂ ವಿದ್ಯಾ ವಿಕಾಸ ಟ್ರಸ್ಟ್ ಅಧ್ಯಕ್ಷರಾಗಿದ್ದಾರೆ.

ಸಂಘಟನಾ ಸೇವೆಗೆ ಮನ್ನಣೆ

ರಾಯಚೂರು: ವಿಧಾನ ಪರಿಷತ್ತಿಗೆ ಅವಿರೋಧ ಆಯ್ಕೆ ಮಾಡಲು ಎಐಸಿಸಿಯು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ರಾಯಚೂರಿನ ಎ. ವಸಂತಕುಮಾರ ಹೆಸರು ಪ್ರಕಟಿಸಿದೆ. ವಸಂತಕುಮಾರ 2008ರಲ್ಲಿ ಲಿಂಗಸುಗೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಬಿಜೆಪಿಯ ಮಾನಪ್ಪ ವಜ್ಜಲ ವಿರುದ್ಧ ಸೋತಿದ್ದರು. ನಂತರ ಪಕ್ಷದ ಟಿಕೆಟ್ ಕೇಳಲಿಲ್ಲ. ಆದರೆ, ನಿರಂತರವಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು.


ವಸಂತಕುಮಾರ

ವಸಂತಕುಮಾರ 1986ರಿಂದ 90ರವರೆಗೆ ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿಯಾಗಿ, 1990ರಿಂದ 1996ರವರೆಗೆ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ, 1996ರಿಂದ 2001ರವರೆಗೆ ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

2001ರಿಂದ 2006ರವರೆಗೆ ರಾಯಚೂರು ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ, 2006ರಿಂದ 17ರವರೆಗೆ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. 2017ರಿಂದ 2024ರವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಇದಕ್ಕೂ ಮೊದಲು ರಾಯಚೂರು ನಗರಸಭೆ ಸದಸ್ಯರಾಗಿ ಮೂರು ಬಾರಿ ಆಯ್ಕೆಯಾಗಿದ್ದರು. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಹಾಗೂ ತುಂಗಭದ್ರಾ ಕಾಡಾ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಪಕ್ಷ, ನಾಯಕರ ನಿಷ್ಠೆಗೆ ಒಲಿದ ಟಿಕೆಟ್

ಕಲಬುರಗಿ: ಪಕ್ಷ ನಿಷ್ಠೆ ಮತ್ತು ಏಳು ವರ್ಷಗಳ ಕಾಲ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಪಕ್ಷ ಸಂಘಟನೆಗಾಗಿ ಹರಿಸಿದ ಬೆವರಿನ ಫಲವಾಗಿ ಜಗದೇವ ಗುತ್ತೇದಾರ ಅವರಿಗೆ ಟಿಕೆಟ್ ಅನಾಯಾಸವಾಗಿ ಒಲಿದಿದೆ.


ಜಗದೇವ ಗುತ್ತೇದಾರ

ವಿಧಾನಪರಿಷತ್‌ನ ದ್ವೈವಾರ್ಷಿಕ ಚುನಾವಣೆಗೆ ಕಾಂಗ್ರೆಸ್ ತನ್ನ ಎಂಟು ಅಭ್ಯರ್ಥಿಗಳ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ. ಅದರಲ್ಲಿ ಜಗದೇವ ಅವರ ಹೆಸರೂ ಇದೆ. ಜಿಲ್ಲೆಯಿಂದ ವಿಧಾನ ಪರಿಷತ್ ಮಾಜಿ ಸಭಾಪತಿ ಡೇವಿಡ್ ಸಿಮಿಯೋನ್, ಶ್ಯಾಮ್ ನಾಟೀಕರ್ ಸೇರಿ ಹಲವರು ಆಕಾಂಕ್ಷಿಗಳಿದ್ದರೂ ಹೈಕಮಾಂಡ್ ಜಗದೇವ ಅವರಿಗೆ ಮಣೆ ಹಾಕಿದೆ. ಜಗದೇವ ಅವರು ದಿ. ಎನ್. ಧರ್ಮಸಿಂಗ್ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕಟ್ಟಾ ಬೆಂಬಲಿಗರು. ನಾಲ್ಕೂವರೆ ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ತಮ್ಮ 19ನೇ ವಯಸ್ಸಿನಿಂದಲೇ ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದಾರೆ. ಹೈದರಾಬಾದ್ ಶಿಕ್ಷಣ ಸಂಸ್ಥೆಯಲ್ಲಿ ಬಿಇ ಪದವಿ ಪಡೆದಿದ್ದಾರೆ. ಅಂದಿನ ಕಾಳಗಿ ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಮೊದಲ ಬಾರಿಗೆ ಸ್ಪರ್ಧಿಸಿ ಸದಸ್ಯರಾದರು.

ಚಿತ್ತಾಪುರ ತಾಲ್ಲೂಕು ಯುವ ಕಾಂಗ್ರೆಸ್ ಕಾರ್ಯದರ್ಶಿ, ಜಿಲ್ಲಾ ಯುವ ಕಾಂಗ್ರೆಸ್‌ನ ಉಪಾಧ್ಯಕ್ಷ, ಜಿಲ್ಲಾ ಗ್ರಾಮೀಣ ಆಶ್ರಯ ಸಮಿತಿ ಸದಸ್ಯ ಮತ್ತು 15 ವರ್ಷ ನಿರಂತರವಾಗಿ ಚಿತ್ತಾಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು.

ಕಾಂಗ್ರೆಸ್ ಕಟ್ಟಾಳು ಬಸನಗೌಡ ಬಾದರ್ಲಿ

ರಾಯಚೂರು: ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ರಾಜೀನಾಮೆಯಿಂದ ತೆರುವಾಗಿರುವ ಸ್ಥಾನಕ್ಕೆ ಬಸನಗೌಡ ಬಾದರ್ಲಿ ಅವರನ್ನು ಆಯ್ಕೆ ಮಾಡಲು ಕಾಂಗ್ರೆಸ್ ತೀರ್ಮಾನಿಸಿದೆ. ಜಿಲ್ಲೆಯ ಸಿಂಧನೂರಿನ ಬಸನಗೌಡ ಬಾದರ್ಲಿ ಅವರು ಹದಿನೈದು ವರ್ಷಗಳಿಂದ ಕಾಂಗ್ರೆಸ್ ಕಟ್ಟಾಳಾಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಸೇವೆಯನ್ನು ಪರಿಗಣಿಸಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿತ್ತು.


ಬಸನಗೌಡ ಬಾದರ್ಲಿ

ಬಸನಗೌಡ ಬಾದರ್ಲಿ ಅವರು ಎನ್‌ಎಸ್‌ಯುಐ ಸಿಂಧನೂರು ತಾಲ್ಲೂಕು ಘಟಕದ ಅಧ್ಯಕ್ಷರಾಗಿ, ಕೊಪ್ಪಳ ಲೋಕಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಎರಡು ಬಾರಿ, ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಕೋವಿಡ್ ಸಮಯದಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ರಾಜ್ಯದಾದ್ಯಂತ ಆಹಾರ ಕಿಟ್ ವಿತರಿಸಿದ್ದರು.

ತಮ್ಮ ಫೌಂಡೇಶನ್‌ನಿಂದ ಸಿಂಧನೂರು ತಾಲ್ಲೂಕಿನಲ್ಲಿ ವಿಶಿಷ್ಟವಾದ ಸಮಾಜ ಸೇವಾ ಕಾರ್ಯಗಳನ್ನು ಕೈಗೊಂಡಿದ್ದರು. ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ಪ್ರಯತ್ನಿಸಿದ್ದಾರೆ. ಪಕ್ಷದಲ್ಲಿನ ಇವರ ಸೇವೆಯನ್ನು ಪರಿಗಣಿಸಿ ವಿಧಾನ ಪರಿಷತ್‌ಗೆ ಆಯ್ಕೆ ಮಾಡಲು ಪಕ್ಷ ತೀರ್ಮಾನಿಸಿದೆ.

ಬಿಲ್ಕಿಸ್ ಬಾನುಗೆ ಒಲಿದ ಅದೃಷ್ಟ

ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯಾಗಿದ್ದ ಬಿಲ್ಕಿಸ್ ಬಾನು ಅವರಿಗೆ ಕಾಂಗ್ರೆಸ್ ಟಿಕೆಟ್ ಘೋಷಿಸಲಾಗಿದೆ. ಭದ್ರಾವತಿ ಮೂಲದ ಇವರು, ಬಿ.ಕಾಂ ಪದವೀಧರೆ. ಅಲ್ಲಿನ ಸ್ಥಳೀಯ ಖಾಸಗಿ ಶಾಲೆಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದರಲ್ಲದೆ, ಕೆಲಸಕ್ಕೆ ರಾಜೀನಾಮೆ ನೀಡಿ ರಾಜಕೀಯ ಕ್ಷೇತ್ರ ಪ್ರವೇಶಿಸಿದರು. ಆರಂಭದಲ್ಲಿ ಜನತಾದಳದ ಜೊತೆ ಗುರುತಿಸಿಕೊಂಡಿದ್ದರು. 1986ರಲ್ಲಿ ಭದ್ರಾವತಿ ತಾಲ್ಲೂಕಿನ ಸಿಂಗನಮನೆ ಕ್ಷೇತ್ರದಿಂದ ಜಿಲ್ಲಾ ಪರಿಷತ್ ಸದಸ್ಯರಾಗಿ, ನಂತರ 1992ರಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ಅಧ್ಯಕ್ಷೆಯೂ ಆಗಿದ್ದರು.


ಬಿಲ್ಕಿಸ್ ಬಾನು

ಇವರು ಸ್ಥಳೀಯ ಸಂಸ್ಥೆ ಸದಸ್ಯರಿಂದ ವಿಧಾನ ಪರಿಷತ್‌ಗೆ ಆಯ್ಕೆ ಬಯಸಿ ಜನತಾದಳ ಪಕ್ಷದಿಂದ ಸ್ಪರ್ಧಿಸಿ ಬಿಜೆಪಿ ಅಭ್ಯರ್ಥಿ ಶಾಂತವೀರಪ್ಪಗೌಡ ವಿರುದ್ಧ ಕೇವಲ 34 ಮತಗಳ ಅಂತರದಲ್ಲಿ ಸೋತಿದ್ದರು. ಜನತಾದಳ ಇಬ್ಭಾಗವಾದಾಗ ಕಾಂಗ್ರೆಸ್ ಸೇರಿ ಪಕ್ಷ ಸಂಘಟನೆಯಲ್ಲಿ ನಿರತರಾಗಿದ್ದರು.

2013ರಲ್ಲಿ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದರು. ಜನತಾದಳದ ನಂಟಿನ ಕಾರಣದಿಂದಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಲ್ಕಿಸ್ ಬಾನು ಅವರಿಗೆ ಪರಿಷತ್‌ಗೆ ಸ್ಪರ್ಧೆಯ ಅವಕಾಶ ನೀಡಿದ್ದಾರೆ ಎಂದೇ ವಿಶ್ಲೇಷಿಸಲಾಗುತ್ತಿದೆ.

'ಪಕ್ಷ ಸಂಘಟನೆಗಾಗಿ ಹಲವು ವರ್ಷ ದುಡಿದಿದ್ದೇನೆ. ನನ್ನ ಸೇವೆ ಗುರುತಿಸಿ ಅವಕಾಶ ನೀಡಿದ್ದು, ನಾಡಿನ ಜನರ ಪರವಾಗಿ ಉತ್ತಮ ಕೆಲಸ ಮಾಡುತ್ತೇನೆ' ಎಂದು ಬಿಲ್ಕಿಸ್ ಬಾನು ಸಂತಸ ಹಂಚಿಕೊಂಡಿದ್ದಾರೆ.

'ಮತಗಟ್ಟೆ ಸಮೀಕ್ಷೆ ಸುಳ್ಳಾಗಲಿದೆ'

ಬೆಂಗಳೂರು: 'ರಾಜ್ಯ ವಿಧಾನಸಭೆ ಚುನಾವಣೆಗೆ ಸಂಬಂಧಿಸಿ ಮತಗಟ್ಟೆ ಸಮೀಕ್ಷೆಗಳು ಸುಳ್ಳಾದಂತೆ, ಲೋಕಸಭೆ ಚುನಾವಣೆಯ ಸಮೀಕ್ಷೆಗಳೂ ಸುಳ್ಳಾಗಲಿವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾನುವಾರ ಹೇಳಿದರು.

ಎಐಸಿಸಿ ನಾಯಕರ ಜತೆ ವಿಡಿಯೊ ಸಂವಾದದಲ್ಲಿ ಭಾಗವಹಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದು ಭವಿಷ್ಯ ನುಡಿದಿದ್ದ ಸಮೀಕ್ಷೆಗಳು ಸುಳ್ಳಾಯಿತು. ನನ್ನ ಭವಿಷ್ಯವೇ ನಿಜವಾಗಿತ್ತು' ಎಂದರು.

ಮತಗಟ್ಟೆ ಸಮೀಕ್ಷೆಗಳ ಬಗ್ಗೆ ವಿಪಕ್ಷಗಳ ಟೀಕೆ • 'ಇಂಡಿಯಾ' ಕೂಟಕ್ಕೆ ಬಹುಮತ ಗಳಿಸುವ ವಿಶ್ವಾಸ

ಇದು ಮೋದಿ ಮಾಧ್ಯಮ ಸಮೀಕ್ಷೆ: ಕಾಂಗ್ರೆಸ್

ನವದೆಹಲಿ (ಪಿಟಿಐ): ಮತಗಟ್ಟೆ ಸಮೀಕ್ಷೆಗಳನ್ನು 'ಬೋಗಸ್' ಎಂದು ಕರೆದಿರುವ ಕಾಂಗ್ರೆಸ್, ಇದು ಚುನಾವಣಾ ಅಕ್ರಮವನ್ನು ಸಮರ್ಥಿಸಿಕೊಳ್ಳುವ 'ಉದ್ದೇಶಪೂರ್ವಕ ಪ್ರಯತ್ನ' ಮತ್ತು 'ಇಂಡಿಯಾ' ಕೂಟದ ಕಾರ್ಯಕರ್ತರ ಸ್ಥೈರ್ಯ ಕುಗ್ಗಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಅನುಸರಿಸುತ್ತಿರುವ 'ಒತ್ತಡ ತಂತ್ರ'ದ ಭಾಗ ಎಂದು ಭಾನುವಾರ ಟೀಕಿಸಿದೆ.

ಪಕ್ಷದ ಸಂಸದರ ಜತೆ ವಿಡಿಯೊ ಸಂವಾದ ನಡೆಸಿದ ನಂತರ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಇದನ್ನು ಮತಗಟ್ಟೆ ಸಮೀಕ್ಷೆ ಎನ್ನಲಾಗುವುದಿಲ್ಲ. ಇದು ಮೋದಿ ಮಾಧ್ಯಮ ಸಮೀಕ್ಷೆ. ಇದು ಮೋದಿ ಅವರ ಸಮೀಕ್ಷೆ. ಅವರ ಕಾಲ್ಪನಿಕ ಸಮೀಕ್ಷೆ' ಎಂದು ಹೇಳಿದರು.

ಕಾಂಗ್ರೆಸ್ ಎಷ್ಟು ಸ್ಥಾನ ಗಳಿಸಬಹುದು ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, 'ನೀವು ಸಿಧು ಮೂಸೆ ವಾಲಾ ಅವರ '295' ಎಂಬ ಹಾಡು ಕೇಳಿರುವಿರಾ? ಅದಕ್ಕೇ 295 ಸ್ಥಾನ ಸಿಗಲಿದೆ' ಎಂದರು.

ಹೊಸ ಸರ್ಕಾರದ ಮೊದಲ ನೂರು ದಿನಗಳ ಕಾರ್ಯಯೋಜನೆ ಸಿದ್ಧಪಡಿಸಲು ಹಲವು ಸಭೆಗಳನ್ನು ನಡೆಸುತ್ತಿರುವ ಪ್ರಧಾನಿ ಮೋದಿ ಅವರ ಪ್ರಯತ್ನವನ್ನು ಟೀಕಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ನಾನು ವಾಪಸ್ ಬರುತ್ತಿದ್ದೇನೆ, ನಾನು ಮತ್ತೆ ಪ್ರಧಾನಿ ಆಗುತ್ತೇನೆ ಎಂದು ಹೇಳುವುದು ಒತ್ತಡದ ತಂತ್ರ. ಅವರು ಈ ಮೂಲಕ ಅಧಿಕಾರಶಾಹಿಗೆ, ಆಡಳಿತ ವ್ಯವಸ್ಥೆಗೆ ಸಂದೇಶ ಕಳುಹಿಸುತ್ತಿದ್ದು, ನ್ಯಾಯಸಮ್ಮತ ಮತ ಎಣಿಕೆ ನಡೆಸಬೇಕಾದ ಜವಾಬ್ದಾರಿ ಹೊಂದಿರುವ ನಾಗರಿಕ ಸೇವಾ ಅಧಿಕಾರಿಗಳನ್ನು ಇಂಥ ಒತ್ತಡ ತಂತ್ರಗಳ ಮೂಲಕ ಬೆದರಿಸಲಾಗದು ಎಂಬುದಾಗಿ ನಂಬಿದ್ದೇನೆ' ಎಂದು ತಿಳಿಸಿದರು.

ಎಐಸಿಸಿ ಕೇಂದ್ರ ಕಚೇರಿಯಲ್ಲಿ ಮಾತನಾಡಿದ ಅವರು, 'ಮತಗಟ್ಟೆ ಸಮೀಕ್ಷೆಗಳು 'ಸಂಪೂರ್ಣ ಬೋಗಸ್' ಆಗಿವೆ. ಜೂನ್ 4ರಂದು ನಿರ್ಗಮಿಸುವುದು ಅನಿವಾರ್ಯವಾಗಿರುವ ಮತ್ತು ಗ್ಯಾರಂಟಿಯಾಗಿರುವ ವ್ಯಕ್ತಿಯೊಬ್ಬರೇ ಇದರ ಸೃಷ್ಟಿಕರ್ತರು' ಎಂದು ಪ್ರಧಾನಿ ಮೋದಿ ಹೆಸರು ಪ್ರಸ್ತಾಪಿಸದೇ ಟೀಕಿಸಿದರು.

'ಮತಗಟ್ಟೆ ಸಮೀಕ್ಷೆಗಳು ಚುನಾವಣಾ ಅಕ್ರಮವನ್ನು, ಇವಿಎಂಗಳ ಕೈವಾಡವನ್ನು ಸಮರ್ಥಿಸುವ ಉದ್ದೇಶಪೂರ್ವಕ ಪ್ರಯತ್ನ. ನಾವು ಹೆದರಿಕೊಳ್ಳುವುದಿಲ್ಲ. ಮತಗಟ್ಟೆ ಸಮೀಕ್ಷೆಗಳಿಗಿಂತ ಸಂಪೂರ್ಣ ಭಿನ್ನವಾದ, ನಿಜವಾದ ಫಲಿತಾಂಶವನ್ನು ನೀವು ಜೂನ್ 4ರಂದು ನೋಡಲಿದ್ದೀರಿ' ಎಂದು ತಿಳಿಸಿದರು.



ಕಾಂಗ್ರೆಸ್ ಸಂಸದರು, ಶಾಸಕರು, ಮುಖಂಡರ ಜತೆ ವಿಡಿಯೊ ಸಂವಾದ ನಡೆಸಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ನಾಯಕರಾದ ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ನವದೆಹಲಿಯ ಎಐಸಿಸಿ ಕಚೇರಿಗೆ ಬಂದರು–ಪಿಟಿಐ ಚಿತ್ರ



ಎನ್‌ಡಿಎ ಮೈತ್ರಿಕೂಟವು ಮತಗಟ್ಟೆ ಸಮೀಕ್ಷೆಗಳಲ್ಲಿ ಹೇಳಿರುವುದಕ್ಕಿಂತಲೂ ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲಲಿದೆ. ಮಹಾರಾಷ್ಟ್ರದಲ್ಲಿ ಒಟ್ಟು 48 ಸ್ಥಾನಗಳ ಪೈಕಿ 'ಮಹಾಯುತಿ' 35–40 ಸ್ಥಾನ ಗೆಲ್ಲಲಿದ್ದು, ದೇಶದಲ್ಲಿ ಎನ್‌ಡಿಎ 400ಕ್ಕೂ ಹೆಚ್ಚು ಸ್ಥಾನ ಗಳಿಸಲಿದೆ

ರಾಮದಾಸ್ ಅಠಾವಳೆ, ಕೇಂದ್ರ ಸಚಿವ



ಮತಗಟ್ಟೆ ಸಮೀಕ್ಷೆಗಳ ಕಾಲಾನುಕ್ರಮಣಿಕೆಯನ್ನು ಗಮನಿಸಿ. ಬಿಜೆಪಿ ಪರ ಮಾಧ್ಯಮಗಳು ಪಕ್ಷವು 300 ಸ್ಥಾನ ದಾಟುತ್ತದೆ ಎಂದು ಬಿಂಬಿಸುತ್ತವೆ, ಅದು ವಂಚನೆಗೆ ಅವಕಾಶ ಕಲ್ಪಿಸುತ್ತದೆ ಎಂದು ವಿರೋಧ ಪಕ್ಷಗಳು ಮೊದಲೇ ಹೇಳಿದ್ದವು. ಚುನಾವಣೋತ್ತರ ಸಮೀಕ್ಷೆಗಳನ್ನು ಕೆಲವು ತಿಂಗಳ ಹಿಂದೆಯೇ ಸಿದ್ಧಪಡಿಸಲಾಗಿದೆ. ಸಾರ್ವಜನಿಕ ಅಭಿಪ್ರಾಯವನ್ನು ಮತಗಟ್ಟೆ ಸಮೀಕ್ಷೆಗಳ ಮೂಲಕ ತಿರುಚಲಾಗಿದೆ. ಸಮೀಕ್ಷೆಗಳನ್ನು ಆಧರಿಸಿ ಬಿಜೆಪಿ ಸೋಮವಾರದಿಂದ ಆರಂಭವಾಗುವ ಷೇರು ಮಾರುಕಟ್ಟೆಯಿಂದ ಲಾಭ ಪಡೆಯಲು ಹೊರಟಿದೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ಮತಗಟ್ಟೆ ಸಮೀಕ್ಷೆಗಳು ಎರಡು ತಿಂಗಳ ಹಿಂದೆ 'ಮನೆಯಲ್ಲಿ ಸೃಷ್ಟಿಯಾದವು'. ಹೀಗಾಗಿ ಅವು ವಾಸ್ತವ ಸ್ಥಿತಿಯೊಂದಿಗೆ ತಾಳೆಯಾಗುವುದಿಲ್ಲ. ಅವುಗಳಿಗೆ ಯಾವ ಬೆಲೆಯೂ ಇಲ್ಲ. 2016, 2019 ಮತ್ತು 2021ರಲ್ಲಿ ಮತಗಟ್ಟೆ ಸಮೀಕ್ಷೆಗಳು ಹೇಗೆ ಸುಳ್ಳಾದವು ಎನ್ನುವುದನ್ನು ನಾವು ಕಂಡಿದ್ದೇವೆ. ಅಖಿಲೇಶ್, ತೇಜಸ್ವಿ, ಸ್ಟಾಲಿನ್ ಮತ್ತು ಉದ್ಧವ್ ಉತ್ತಮ ಪ್ರದರ್ಶನ ನೀಡಲಿದ್ದಾರೆ. ಪ್ರಾದೇಶಿಕ ಪಕ್ಷಗಳು ಉತ್ತಮ ಫಲಿತಾಂಶ ತರಲಿವೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

ವಿಡಿಯೊ ಸಂವಾದ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ಪಕ್ಷದ ಸಂಸದರು, ಶಾಸಕರು, ರಾಜ್ಯ ಘಟಕಗಳ ಅಧ್ಯಕ್ಷರ ಜತೆ ವಿಡಿಯೊ ಸಂವಾದ ನಡೆಸಿ, ಮತ ಎಣಿಕೆಯ ದಿನ ಯಾವುದೇ ರೀತಿಯ ಅಕ್ರಮಕ್ಕೆ ಅವಕಾಶ ನೀಡದಂತೆ ಎಚ್ಚರಿಕೆ ವಹಿಸುವಂತೆ ಸೂಚಿಸಿದ್ದಾರೆ.

ಸಂವಾದದಲ್ಲಿ ಪಕ್ಷದ ಹಿರಿಯ ಮುಖಂಡರಾದ ಜೈರಾಮ್ ರಮೇಶ್, ಕೆ.ಸಿ.ವೇಣುಗೋಪಾಲ್ ಮತ್ತು ಇತರರು ಪಾಲ್ಗೊಂಡು, ಮತ ಎಣಿಕೆಯ ದಿನದ ಸಿದ್ಧತೆಗಳ ಬಗ್ಗೆ ಪರಾಮರ್ಶೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದ್ದು, ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿ ಆಗಲಿದ್ದಾರೆ ಎಂದು ಮತಗಟ್ಟೆ ಸಮೀಕ್ಷೆಗಳಲ್ಲಿ ಹೇಳಲಾಗಿದೆ. ಮತಗಟ್ಟೆ ಸಮೀಕ್ಷೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮತ ಎಣಿಕೆಯ ಬಗ್ಗೆ ವಿಶೇಷವಾಗಿ ಗಮನ ಹರಿಸುತ್ತಿದೆ.

ಸಂದೇಶ್‌ಖಾಲಿ: ಮಮತಾ ಮಧ್ಯಪ್ರವೇಶಿಸಲಿ–ರಾಜ್ಯಪಾಲ



ಆನಂದ ಬೋಸ್

ಕೋಲ್ಕತ್ತ (ಪಿಟಿಐ): ಸಂದೇಶ್‌ಖಾಲಿಯಲ್ಲಿ ನಡೆದ ಹಿಂಸಾಚಾರ ಘಟನೆಗೆ ಕಳವಳ ವ್ಯಕ್ತಪಡಿಸಿದ ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು, ಪ್ರದೇಶದಲ್ಲಿ ಶಾಂತಿ ಮರುಸ್ಥಾಪಿಸಲು ಮಧ್ಯ ಪ್ರವೇಶಿಸುವಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಲ್ಲಿ ಕೇಳಿಕೊಂಡಿದ್ದಾರೆ.

ಮತದಾನದ ಮರುದಿನ ಸಂದೇಶ್‌ಖಾಲಿಯಲ್ಲಿ ನಡೆದ ಹಿಂಸಾಚಾರ ಘಟನೆಗಳಲ್ಲಿ ಭಾಗಿಯಾಗಿರುವವರ ವಿರುದ್ಧ ತೆಗೆದುಕೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿ ಮಮತಾ ಅವರಿಗೆ ಪತ್ರ ಬರೆದಿರುವುದಾಗಿ ಅವರು ಭಾನುವಾರ ಹೇಳಿದ್ದಾರೆ.

'ಸಂದೇಶ್‌ಖಾಲಿಯ ಈಗಿನ ಪರಿಸ್ಥಿತಿ ಬಗ್ಗೆ ಕಳವಳಗೊಂಡಿದ್ದೇನೆ. ಮತದಾನ ಕೊನೆಗೊಂಡ ಕೆಲವೇ ಗಂಟೆಗಳಲ್ಲಿ ಅಲ್ಲಿ ಮಹಿಳೆಯರ ಮೇಲೆ ಹಲ್ಲೆ ನಡೆದಿರುವುದು ನನ್ನ ಗಮನಕ್ಕೆ ಬಂದಿದೆ' ಎಂದಿದ್ದಾರೆ.

'ಇಂತಹ ದಾಳಿ ಮುಂದುವರಿದರೆ ಮತ್ತು ನಿವಾಸಿಗಳಿಗೆ ಕಿರುಕುಳ ನೀಡಿದರೆ, ನಾನು ರಾಜಭವನದ ಬಾಗಿಲನ್ನು ಅವರಿಗಾಗಿ ತೆರೆಯುತ್ತೇನೆ. ಅವರಿಗೆ ರಾಜಭವನದಲ್ಲಿ ಸುರಕ್ಷಿತ ಆಶ್ರಯ ಕಲ್ಪಿಸಲಾಗುವುದು' ಎಂದು ಹೇಳಿದ್ದಾರೆ.

ವಶಕ್ಕೆ ಪಡೆಯಲು ತೆರಳಿದ್ದ ಪೊಲೀಸರು, ಮಹಿಳೆಯರ ನಡುವೆ ಘರ್ಷಣೆ

ಕೋಲ್ಕತ್ತ (ಪಿಟಿಐ): ಮತದಾನ ದಿನದಂದು ಪೊಲೀಸರ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿ ವ್ಯಕ್ತಿಯೊಬ್ಬರನ್ನು ವಶಕ್ಕೆ ಪಡೆಯಲು ತೆರಳಿದ್ದ ಪೊಲೀಸರು ಮತ್ತು ಮಹಿಳೆಯರ ನಡುವೆ ಸಂದೇಶ್‌ಖಾಲಿಯಲ್ಲಿ ಭಾನುವಾರ ಘರ್ಷಣೆ ನಡೆದಿದೆ.

ದಾಳಿ ಪ್ರಕರಣದಲ್ಲಿ ಭಾಗಿಯಾದವರಾಗಿ ಶಂಕಿತ ಕಾರ್ಯಕರ್ತನ ಪತ್ತೆಗಾಗಿ ಕ್ಷಿಪ್ರ ಕಾರ್ಯಪಡೆಯ (ಆರ್‌.ಎ.ಎಫ್) ಸಿಬ್ಬಂದಿ ಸಂದೇಶ್‌ಖಾಲಿಯ ಆಗರ್‌ಹಟಿ ಗ್ರಾಮಕ್ಕೆ ತೆರಳಿದ್ದ ವೇಳೆ ಅಲ್ಲಿನ ಮಹಿಳೆಯರು ರಸ್ತೆ ತಡೆ ನಡೆಸಿ, ಸಿಬ್ಬಂದಿ ಮೇಲೆ ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

'ನಾವು ಯಾರನ್ನೂ ಬಂಧಿಸಿಲ್ಲ. ಆದರೆ ಸ್ಥಳೀಯ ಮಹಿಳೆಯರು ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ನಡೆದ ಘರ್ಷಣೆಯಲ್ಲಿ ಕೆಲವು ಮಹಿಳಾ ಸಿಬ್ಬಂದಿ ಗಾಯಗೊಂಡಿದ್ದಾರೆ' ಎಂದು ಹೇಳಿದರು.

ವಶಕ್ಕೆ ಪಡೆದಿದ್ದ ವ್ಯಕ್ತಿಯನ್ನು ಬಿಡಿಸಲು ಮಹಿಳೆಯರು ಪ್ರಯತ್ನಿಸಿದ್ದಾರೆ ಎಂದೂ ವಿವರಿಸಿದರು.

ಅರುಣಾಚಲ: 'ಕಮಲ' ಹ್ಯಾಟ್ರಿಕ್

ಒಂದನೇ ಪುಟದಿಂದ

ಪೀಪಲ್ ಪಾರ್ಟಿ ಆಫ್ ಅರುಣಾಚಲ (ಪಿಪಿಎ) 2 ಸ್ಥಾನಗಳನ್ನು ಗೆದ್ದರೆ, ಮೂರು ಕ್ಷೇತ್ರಗಳು ಪಕ್ಷೇತರರ ಪಾಲಾದವು.

ಸಿಕ್ಕಿಂನಲ್ಲಿ ಎಸ್‌ಕೆಎಂ ಜಯಭೇರಿ: ಹಿಮಾಲಯದ ತಪ್ಪಲಿನಲ್ಲಿರುವ ಸಿಕ್ಕಿಂನಲ್ಲಿ ಎಸ್‌ಕೆಎಂ ಭಾರಿ ಗೆಲುವು ಸಾಧಿಸಿದೆ. 2019ರ ವರೆಗೂ ಸತತ 25 ವರ್ಷ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್ (ಎಸ್‌ಡಿಎಫ್) ಕೇವಲ ಒಂದು ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಪಕ್ಷದ ಅಧ್ಯಕ್ಷರೂ ಆಗಿರುವ ಮಾಜಿ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್, ಸ್ಪರ್ಧಿಸಿದ ಎರಡೂ ಕಡೆ ಸೋತಿದ್ದಾರೆ. 73 ವರ್ಷದ ಅವರು ನಾಲ್ಕು ದಶಕಗಳಲ್ಲಿ ಇದೇ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಲು ವಿಫಲರಾಗಿದ್ದಾರೆ. 1985ರಲ್ಲಿ ಅವರು ಮೊದಲ ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು.

ಎಸ್‌ಕೆಎಂ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಅವರು ಕಣಕ್ಕಿಳಿದ ಎರಡೂ ಕ್ಷೇತ್ರಗಳಲ್ಲಿ ಜಯಿಸಿದ್ದಾರೆ. ಒಟ್ಟು ಮತಗಳಲ್ಲಿ ಶೇ 58.38ರಷ್ಟನ್ನು ಎಸ್‌ಕೆಎಂ ಗಳಿಸಿದೆ. 2019ರ ಚುನಾವಣೆಯಲ್ಲಿ ಈ ಪಕ್ಷ 17 ಸ್ಥಾನಗಳನ್ನು ಗೆದ್ದು ಸರ್ಕಾರ ರಚಿಸಿತ್ತು.

ಸಿಕ್ಕಿಂನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಒಂದೂ ಸ್ಥಾನ ಗೆದ್ದಿಲ್ಲ. ಸಿಕ್ಕಿಂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಡಿ.ಆರ್. ಥಾಪಾ ಅವರು ಅಪ್ಪರ್ ಬುರ್ತುಕ್ ಕ್ಷೇತ್ರದಲ್ಲಿ ಎಸ್‌ಕೆಎಂ ಅಭ್ಯರ್ಥಿ ಕಾಲಾ ರಾಯ್ ಎದುರು 2,968 ಮತಗಳ ಅಂತರದಿಂದ ಪರಾಭವಗೊಂಡರು.

ತಮಾಂಗ್ ಅವರು ರಿನಾಕ್ ಮತ್ತು ಸೊರೆಂಗ್ ಚಾಕುಂಗ್ ಕ್ಷೇತ್ರಗಳಲ್ಲಿ 7 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದರು. ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ, ಎಸ್‌ಡಿಎಫ್ ಪಕ್ಷದ ಉಪಾಧ್ಯಕ್ಷ ಬೈಚುಂಗ್ ಭುಟಿಯಾ ಅವರು ಬಾರ್ಫಂಗ್ ಕ್ಷೇತ್ರದಲ್ಲಿ ಎಸ್‌ಕೆಎಂ ಸ್ಪರ್ಧಿಯ ಎದುರು ಸೋತರು.

> ಕಳೆದ ಐದು ವರ್ಷಗಳಲ್ಲಿ ಜನರ ಪ್ರೀತಿ ಮತ್ತು ವಿಶ್ವಾಸ ಗಳಿಸಲು ಸಾಧ್ಯವಾಗಿದ್ದು ಹಾಗೂ ಪಕ್ಷದ ಕಾರ್ಯಕರ್ತರ ಶ್ರಮದಿಂದಾಗಿ ನಮಗೆ ಭಾರಿ ಗೆಲುವು ಲಭಿಸಿದೆ
>
> **ಪ್ರೇಮ್ ಸಿಂಗ್ ತಮಾಂಗ್,** ಸಿಕ್ಕಿಂ ಮುಖ್ಯಮಂತ್ರಿ

> ಇದು ಬಿಜೆಪಿಗೆ ಮತ್ತು ಅರುಣಾಚಲ ಪ್ರದೇಶಕ್ಕೆ ಐತಿಹಾಸಿಕ ಕ್ಷಣ. ಪ್ರಧಾನಿ ಮೋದಿ ನೀಡಿದ ಕೊಡುಗೆಗಳಿಗೆ ರಾಜ್ಯದ ಜನರು ತಮ್ಮ ಋಣ ತೀರಿಸಿದ್ದಾರೆ
>
> **ಪೆಮಾ ಖಂಡು,** ಅರುಣಾಚಲ ಪ್ರದೇಶ ಮುಖ್ಯಮಂತ್ರಿ

ಪ್ರಮುಖ ಅಂಶಗಳು

ಅರುಣಾಚಲ ಪ್ರದೇಶ

- ಪೆಮಾ ಖಂಡು ಮುಖ್ಯಮಂತ್ರಿಯಾಗಿ ಮುಂದುವರಿಯುವ ಸಾಧ್ಯತೆ
- 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ ದಕ್ಕಿದ್ದು ಒಂದು ಸ್ಥಾನ
- ಬಿಜೆಪಿ ಕಣಕ್ಕಿಳಿಸಿದ್ದ ನಾಲ್ವರು ಮಹಿಳಾ ಅಭ್ಯರ್ಥಿಗಳಿಗೆ ಗೆಲುವು
- ಬಿಜೆಪಿ ಮತಗಳಿಕೆ ಪ್ರಮಾಣ ಶೇ 54.57
- ಶಿಕ್ಷಣ ಸಚಿವ ತಬಾ ತೆದಿರ್‌ಗೆ 228 ಮತಗಳಿಂದ ಸೋಲು

ಸಿಕ್ಕಿಂ

- ಖಾತೆ ತೆರೆಯಲು ಬಿಜೆಪಿ, ಕಾಂಗ್ರೆಸ್ ವಿಫಲ
- 31 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದ ಬಿಜೆಪಿ
- ನೋಟಾಗಿಂತಲೂ (ಶೇ 0.99) ಕಡಿಮೆ ಮತ ಗಳಿಸಿದ ಕಾಂಗ್ರೆಸ್ (ಶೇ 0.32)
- ಸ್ಪರ್ಧಿಸಿದ ಎರಡೂ ಕ್ಷೇತ್ರಗಳಲ್ಲಿ ಗೆದ್ದ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್
- ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾಗೆ ಸೋಲು

ಪ್ರಧಾನಿ ಮೋದಿ ಅಭಿನಂದನೆ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತಂದ ಮತದಾರರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

'ಅರುಣಾಚಲ ಪ್ರದೇಶಕ್ಕೆ ಧನ್ಯವಾದಗಳು! ಈ ರಾಜ್ಯದ ಜನರು ಅಭಿವೃದ್ಧಿಯ ರಾಜಕಾರಣದ ಪರ ಸ್ಪಷ್ಟ ಜನಾದೇಶ ನೀಡಿದ್ದಾರೆ. ಬಿಜೆಪಿ ಮೇಲೆ ಮತ್ತೆ ನಂಬಿಕೆಯಿಟ್ಟದ್ದಕ್ಕೆ ಕೃತಜ್ಞತೆಗಳು. ನಮ್ಮ ಪಕ್ಷ ಇನ್ನಷ್ಟು ಹುಮ್ಮಸ್ಸಿನಿಂದ ರಾಜ್ಯದ ಅಭಿವೃದ್ಧಿಗೆ ಶ್ರಮಿಸಲಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಚುನಾವಣಾ ಪ್ರಚಾರದ ಅವಧಿಯಲ್ಲಿ ರಾಜ್ಯಾದ್ಯಂತ ಪಕ್ಷದ ಕಾರ್ಯಕರ್ತರು ತೋರಿದ ಅವಿರತ ಶ್ರಮವನ್ನು ಪ್ರಶಂಸಿಸುತ್ತೇನೆ' ಎಂದಿದ್ದಾರೆ.

ಸಿಕ್ಕಿಂನಲ್ಲಿ ಅಧಿಕಾರಕ್ಕೇರಿದ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ನೇತೃತ್ವದ ಎಸ್‌ಕೆಎಂ ಪಕ್ಷಕ್ಕೂ ಪ್ರಧಾನಿ ಅಭಿನಂದನೆ ಸಲ್ಲಿಸಿದ್ದಾರೆ.

ವಿಧಾನಪರಿಷತ್ ಬಿಆರ್‌ಎಸ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಹೈದರಾಬಾದ್: 2023ರ ವಿಧಾನಸಭೆ ಚುನಾವಣೆ ಬಳಿಕ ಸರಣಿ ಸೋಲುಗಳಿಂದ ಕಂಗೆಟ್ಟಿದ್ದ ಭಾರತ ರಾಷ್ಟ್ರ ಸಮಿತಿಗೆ (ಬಿಆರ್‌ಎಸ್) ವಿಧಾನಪರಿಷತ್ ಉಪಚುನಾವಣೆಯಲ್ಲಿ ಗೆಲುವು ಲಭಿಸಿದೆ.

ಮಹಬೂಬ್ ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆದ ಉಪಚುನಾವಣೆಯಲ್ಲಿ ಬಿಆರ್‌ಎಸ್ ಪಕ್ಷದ ಅಭ್ಯರ್ಥಿ ಕೆ.ನವೀನ್ ಕುಮಾರ್ ರೆಡ್ಡಿ ಅವರು ಗೆಲುವು ದಾಖಲಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು 108 ಮತಗಳ ಅಂತರದಲ್ಲಿ ಮಣಿಸಿದ್ದಾರೆ.

ಬಿಆರ್‌ಎಸ್ ಗೆದ್ದಿರುವ ಮಹಬೂಬ್ ನಗರವು ಮುಖ್ಯಮಂತ್ರಿ ರೇವಂತ್ ರೆಡ್ಡಿಯವರ ತವರೂರಾಗಿದ್ದು, ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ.

ವಿಧಾನ ಪರಿಷತ್ ಸದಸ್ಯರಾಗಿದ್ದ ಕಾಶಿರೆಡ್ಡಿ ನಾರಾಯಣ ರೆಡ್ಡಿ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಲ್ವಕುರ್ತಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಶಾಸಕರಾಗಿ ಆಯ್ಕೆಯಾಗಿದ್ದರಿಂದ ವಿಧಾನಪರಿಷತ್‌ಗೆ ಉಪಚುನಾವಣೆ ನಡೆದಿತ್ತು. ಈ ಚುನಾವಣೆಯಲ್ಲಿ ಬಿಜೆಪಿ ಸ್ಪರ್ಧೆ ಮಾಡಿರಲಿಲ್ಲ.

'ಬಿಆರ್‌ಎಸ್‌ನ ಗೆಲುವು, ತೆಲಂಗಾಣ ರಾಜಕೀಯ ಚಿತ್ರಣ ಬದಲಾವಣೆಯ ಮುನ್ಸೂಚನೆ' ಎಂದು ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮ ರಾವ್ ಅವರು ತಿಳಿಸಿದ್ದಾರೆ.

ಮತ ಎಣಿಕೆ ಮಾರ್ಗಸೂಚಿ ಪಾಲನೆ ಖಾತ್ರಿಪಡಿಸಿ: 'ಇಂಡಿಯಾ' ಒತ್ತಾಯ

ನವದೆಹಲಿ (ಪಿಟಿಐ): ಇವಿಎಂಗಳ ಮತ ಎಣಿಕೆ ಫಲಿತಾಂಶ ಪ್ರಕಟಣೆಗೂ ಮುನ್ನ ಅಂಚೆ ಮತಗಳ ಫಲಿತಾಂಶ ಘೋಷಿಸುವುದೂ ಸೇರಿದಂತೆ ಜೂನ್ 4ರಂದು ಲೋಕಸಭಾ ಚುನಾವಣೆಯ ಮತ ಎಣಿಕೆಯಲ್ಲಿ ಎಲ್ಲ ಮಾರ್ಗಸೂಚಿಗಳ ಪಾಲನೆಯನ್ನು ಖಾತ್ರಿಪಡಿಸುವಂತೆ 'ಇಂಡಿಯಾ' ಕೂಟದ ಮುಖಂಡರ ನಿಯೋಗವು ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

ಚುನಾವಣಾ ಆಯೋಗವನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕಾಂಗ್ರೆಸ್ ಮುಖಂಡ ಅಭಿಷೇಕ್ ಸಿಂಘ್ವಿ, 'ಲೋಕಸಭಾ ಚುನಾವಣೆಯ ವೇಳೆ ವಿರೋಧ ಪಕ್ಷಗಳ ನಿಯೋಗವು ಚುನಾವಣಾ ಆಯೋಗವನ್ನು ಭೇಟಿ ಮಾಡುತ್ತಿರುವುದು ಇದು ಮೂರನೇ ಬಾರಿ. ಭೇಟಿಯ ವೇಳೆ ಕೆಲವು ಮುಖ್ಯ ವಿಚಾರಗಳನ್ನು ಚರ್ಚಿಸಿದೆವು' ಎಂದು ತಿಳಿಸಿದರು.

'ಆಯೋಗದ ಮಾರ್ಗಸೂಚಿ ಅನುಸರಿಸುವಂತೆ ಅಧಿಕಾರಿಗಳಿಗೆ ಸೂಚಿಸಬೇಕು ಎಂದು ಮನವಿ ಮೂಲಕ ಸಾಗಿಸಬೇಕು ಮತ್ತು ಸಲ್ಲಿಸಿದ್ದೇವೆ' ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಮತ್ತು ಕಾಂಗ್ರೆಸ್ ಯುನಿಟ್‌ಗಳ ದಿನಾಂಕ ಸಮಯವನ್ನು ಸರಿಯಾಗಿ 'ಕಂಟ್ರೋಲ್ ಯುನಿಟ್‌ಗಳ ಪ್ರದರ್ಶಿಸುವಂತೆಯೇ ಎನ್ನುವುದನ್ನು ಇವಿಎಂಗಳನ್ನು ಸಿ.ಸಿ.ಟಿ.ವಿ. ಕ್ಯಾಮೆರಾಗಳ ಪರಿಶೀಲಿಸಬೇಕು' ಎಂದು ನಿಗಾವಣೆಯಲ್ಲಿರುವ ಕಾರಿಡಾರ್‌ಗಳ ಒತ್ತಾಯಿಸಿದ್ದಾಗಿ ಹೇಳಿದರು.

ಆಯೋಗಕ್ಕೆ ಬಿಜೆಪಿ ದೂರು

ಕಾಂಗ್ರೆಸ್ ಮತ್ತು 'ಇಂಡಿಯಾ' ಕೂಟದ ಇತರ ಮಿತ್ರಪಕ್ಷಗಳು ಹಾಗೂ ಕೆಲವು ಸಂಘಟನೆಗಳು ಭಾರತದ ಚುನಾವಣಾ ಪ್ರಕ್ರಿಯೆ ಬಗ್ಗೆ ಅನುಮಾನ ಹುಟ್ಟಿಸಲು ಪ್ರಯತ್ನಿಸುತ್ತಿವೆ ಎಂದು ಬಿಜೆಪಿ ಆರೋಪಿಸಿದೆ. ಲೋಕಸಭಾ ಚುನಾವಣೆಯ ಮತ ಎಣಿಕೆಯ ವೇಳೆ ಹಿಂಸಾಚಾರ ಮತ್ತು ಕ್ಷೋಭೆ ಉಂಟುಮಾಡುವ ಯಾವುದೇ ಪ್ರಯತ್ನವನ್ನು ತಡೆಯಬೇಕು ಎಂದು ಪಕ್ಷವು ಚುನಾವಣಾ ಆಯೋಗವನ್ನು ಭಾನುವಾರ ಒತ್ತಾಯಿಸಿದೆ.

ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಪೀಯೂಷ್ ಗೋಯಲ್ ಅವರನ್ನೊಳಗೊಂಡ ನಿಯೋಗವು ಚುನಾವಣಾ ಆಯೋಗವನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ನಂತರ ಮಾತನಾಡಿದ ಗೋಯಲ್, 'ಭಾರತದ ಅತ್ಯಂತ ದೃಢ ಚುನಾವಣಾ ಪ್ರಕ್ರಿಯೆಯನ್ನು ಗುರಿಯಾಗಿಸಿರುವುದು ದೇಶದ ಸಾಂವಿಧಾನಿಕ ಸಂಸ್ಥೆಗಳ ಮೇಲೆ ನಡೆಯುತ್ತಿರುವ ನೇರ ದಾಳಿಯಾಗಿದೆ ಮತ್ತು ಸಾಮಾಜಿಕ ಸ್ವಾಸ್ಥ್ಯಕ್ಕೆ ಹಾಗೂ ಚುನಾವಣಾ ಪ್ರಕ್ರಿಯೆಯಲ್ಲಿನ ನಂಬಿಕೆಗೆ ಚ್ಯುತಿ ತರುವಂಥದ್ದಾಗಿದೆ' ಎಂದು ಹೇಳಿದರು.

ಜಿಲ್ಲಾಧಿಕಾರಿಗಳಿಗೆ ಕರೆ; ವಿವರ ಕೋರಿದ ಆಯೋಗ

ನವದೆಹಲಿ (ಪಿಟಿಐ): ಜೂನ್ 4ರ ಲೋಕಸಭಾ ಚುನಾವಣೆಯ ಮತ ಎಣಿಕೆಯ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 150 ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ಮಾತನಾಡಿದ್ದಾರೆ ಎನ್ನುವ ಆರೋಪದ ಬಗ್ಗೆ ವಿವರ ನೀಡುವಂತೆ ಚುನಾವಣಾ ಆಯೋಗವು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಅವರಿಗೆ ಭಾನುವಾರ ಪತ್ರ ಬರೆದಿದೆ. ಭಾನುವಾರ ಸಂಜೆ ಏಳು ಗಂಟೆಗೆ ವಿವರ ಹಂಚಿಕೊಳ್ಳುವಂತೆ ತಿಳಿಸಲಾಗಿತ್ತು.

'ಸರ್ವಾಧಿಕಾರದ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ ಜೈಲಿಗೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಾನು ಮತ್ತೆ ಜೈಲಿಗೆ ಹೋಗುತ್ತಿರುವುದು ಭ್ರಷ್ಟಾಚಾರದಲ್ಲಿ ತೊಡಗಿದ್ದಕ್ಕಾಗಿ ಅಲ್ಲ. ಬದಲಿಗೆ ಸರ್ವಾಧಿಕಾರದ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಭಾನುವಾರ ಹೇಳಿದರು.

ತಿಹಾರ್ ಜೈಲಿಗೆ ಶರಣಾಗಲು ಹೋಗುವುದಕ್ಕೂ ಮುನ್ನ ಅವರು ಎಎಪಿಯ ಮುಖ್ಯ ಕಚೇರಿಯಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

'ಸುಪ್ರೀಂ ಕೋರ್ಟ್ ನನಗೆ 21 ದಿನಗಳ ಮಧ್ಯಂತರ ಜಾಮೀನು ನೀಡಿತ್ತು. ಈ ದಿನಗಳು ನನ್ನ ಜೀವನದ ಅವಿಸ್ಮರಣೀಯ ಕ್ಷಣಗಳಾಗಿದ್ದವು. ಒಂದು ನಿಮಿಷವನ್ನೂ ವ್ಯರ್ಥ ಮಾಡಿಲ್ಲ. ದೇಶವನ್ನು ಉಳಿಸಲಿಕ್ಕಾಗಿ ಪ್ರಚಾರ ಮಾಡಿದ್ದೇನೆ. ನಮಗೆ ಎಎಪಿಗಿಂತ ದೇಶವೇ ಮೊದಲು' ಎಂದು ಅವರು ತಿಳಿಸಿದರು.

'ಚುನಾವಣೆಯಲ್ಲಿ ಭಾರಿ ಬಹುಮತದೊಂದಿಗೆ ಗೆದ್ದ ಮುಖ್ಯಮಂತ್ರಿಯನ್ನು ಸಾಕ್ಷ್ಯಾಧಾರ ಗಳಿಲ್ಲದೇ ಬಂಧಿಸಲಾಗಿದೆ. ಮುಂದೆ ಇತರರೂ ಇದೇ ಹಾದಿ ಕಾದಿದೆ ಎಂಬುದರ ಸಂದೇಶ ಇದಾಗಿದೆ' ಎಂದು ಅವರು ಹೇಳಿದರು.

ಸಮೀಕ್ಷೆಗಳು ನಕಲಿ: 'ಮತಗಟ್ಟೆ ಸಮೀಕ್ಷೆಗಳು ನಕಲಿ ಎಂಬುದನ್ನು ನಾನು ಬರೆದುಕೊಡಬಲ್ಲೆ. ರಾಜಸ್ಥಾನದಲ್ಲಿ 25 ಲೋಕಸಭಾ ಕ್ಷೇತ್ರಗಳಿವೆ. ಆದರೆ ಸಮೀಕ್ಷೆಯೊಂದು ಅವರಿಗೆ 33 ಸ್ಥಾನಗಳನ್ನು ನೀಡಿದೆ. ಇಂಥ ನಕಲಿ ಸಮೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸುವ ಉದ್ದೇಶವೇನು' ಎಂದು ಅವರು ಪ್ರಶ್ನಿಸಿದರು.

'ಯಾವುದೇ ಕಾರಣಕ್ಕೂ ಜೂನ್ 4ರಂದು ಬಿಜೆಪಿ ಸರ್ಕಾರ ರಚಿಸುವುದಿಲ್ಲ. ಈ ಸಮೀಕ್ಷೆಗಳ ಮೂಲಕ ನಮ್ಮ ಕಾರ್ಯಕರ್ತರನ್ನು ಖಿನ್ನರನ್ನಾಗಿಸುವ ಯತ್ನ ನಡೆದಿದೆಯಷ್ಟೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಎಎಪಿಯ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯನ್ನು ನಡೆಸಿದ್ದ ಕೇಜ್ರಿವಾಲ್ ಅವರು ಒಗ್ಗಟ್ಟಿನಿಂದ ಇರುವಂತೆ ನಾಯಕರಿಗೆ ತಿಳಿಸಿದರು.

ಕೇಜ್ರಿವಾಲ್ ಅವರು ತಿಹಾರ್ ಜೈಲಿಗೆ ಬರುವುದಕ್ಕೂ ಮುನ್ನ ಜೈಲಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಚಾರ ದಟ್ಟಣೆಯನ್ನು ನಿಬಂಧಿಸಲಾಗಿತ್ತು. ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು.



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಹಾರ್ ಜೈಲಿಗೆ ತೆರಳುವುದಕ್ಕೂ ಮುನ್ನ ತಂದೆ, ತಾಯಿಯ ಆಶೀರ್ವಾದ ಪಡೆದರು –ಪಿಟಿಐ ಚಿತ್ರ

ಮಕ್ಕಳನ್ನು ಅಪ್ಪಿಕೊಂಡು ವಿದಾಯ

ತಿಹಾರ್ ಜೈಲಿಗೆ ಮರಳುವುದಕ್ಕೂ ಮುನ್ನ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ಮಕ್ಕಳಾದ ಪುಲಕಿತ್, ಹರ್ಷಿತಾ ಅವರನ್ನು ಅಪ್ಪಿಕೊಂಡು ಭಾವಪೂರ್ಣವಾಗಿ ವಿದಾಯ ಹೇಳಿದರು. ಬಳಿಕ ಪೋಷಕರ ಪಾದ ಸ್ಪರ್ಶಿಸಿ ಆಶೀರ್ವಾದ ಪಡೆದರು.


ರಾಜ್‌ಘಾಟ್ ಭೇಟಿ ವಿರೋಧಿಸಿ ಬಿಜೆಪಿ ಪ್ರತಿಭಟನೆ

ಕೇಜ್ರಿವಾಲ್ ಅವರು ರಾಜ್‌ಘಾಟ್‌ಗೆ ಹೋಗುವುದನ್ನು ವಿರೋಧಿಸಿ ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ ಅವರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಬಕಾರಿ ಹಗರಣದಲ್ಲಿ ಜೈಲು ಸೇರಿರುವ ವ್ಯಕ್ತಿಯೊಬ್ಬರು ಮಹಾತ್ಮ ಗಾಂಧಿ ಅವರಿಗೆ ಗೌರವ ಸಲ್ಲಿಸಲು ರಾಜ್‌ಘಾಟ್‌ಗೆ ಹೋಗುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ವೀರೇಂದ್ರ ಸೇರಿದಂತೆ ಪ್ರತಿಭಟನಾಕಾರರನ್ನು ಬಂಧಿಸಿದ ಪೊಲೀಸರು, ನಂತರ ಎಚ್ಚರಿಕೆ ನೀಡಿ ಬಿಡುಗಡೆ ಮಾಡಿದರು.

ತೆಲಂಗಾಣ ಸಂಸ್ಥಾಪನಾ ದಿನ ಆಚರಣೆ ನಾಡಗೀತೆ ಅನಾವರಣ ಮಾಡಿದ ಸಿ.ಎಂ

ಪ್ರಜಾವಾಣಿ ವಾರ್ತೆ



ರೇವಂತ ರೆಡ್ಡಿ

ಹೈದರಾಬಾದ್: ತೆಲಂಗಾಣ ರಾಜ್ಯದ ಸಂಸ್ಥಾಪನಾ ದಿನ ಸಮಾರಂಭ ಭಾನುವಾರ ಸಂಭ್ರಮದಿಂದ ನಡೆಯಿತು.

ಅನಾರೋಗ್ಯದ ಕಾರಣ ನೀಡಿ ಕಾರ್ಯಕ್ರಮಕ್ಕೆ ಗೈರಾಹಜರಾಗಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಶುಭ ಹಾರೈಸಿ ಕಳುಹಿಸಿದ್ದ ವಿಡಿಯೊ ಸಂದೇಶವನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮಕ್ಕೆ ಸೋನಿಯಾ ಗಾಂಧಿ ಅವರನ್ನು ಆಹ್ವಾನಿಸಿದ ಸರ್ಕಾರದ ಕ್ರಮಕ್ಕೆ ವಿರೋಧ ಪಕ್ಷಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಆದರೆ, ಮುಖ್ಯಮಂತ್ರಿ ರೇವಂತ್ ರೆಡ್ಡಿ ಸಮರ್ಥಿಸಿಕೊಂಡಿದ್ದರು.

ತಮ್ಮ ಭಾಷಣದಲ್ಲೂ ಇದನ್ನು ಉಲ್ಲೇಖಿಸಿದ ಮುಖ್ಯಮಂತ್ರಿ, 'ಚರಿತ್ರೆಯಲ್ಲಿ ತೆಲಂಗಾಣ ಇರುವಷ್ಟು ಕಾಲ ಈ ಸಮಾಜ ಸೋನಿಯಾಗಾಂಧಿ ಅವರಿಗೆ ತಾಯಿ ಸ್ಥಾನದ ಗೌರವ ನೀಡಲಿದೆ' ಎಂದರು. 'ಭಾರತೀಯ ಸಮಾಜವು ಯಾವ ಆಧಾರದಲ್ಲಿ ಗಾಂಧೀಜಿ ಅವರನ್ನು ರಾಷ್ಟ್ರಪಿತ ಎಂದು ಗುರುತಿಸುತ್ತದೆ' ಎಂದು ಪ್ರಶ್ನಿಸುವ ಮೂಲಕ ಅವರು ತಮ್ಮ ಈ ಮಾತನ್ನು ಸಮರ್ಥಿಸಿಕೊಂಡರು.

ಸೋನಿಯಾ ಗಾಂಧಿ ತಮ್ಮ ಸಂದೇಶದಲ್ಲಿ, 'ಪ್ರತ್ಯೇಕ ರಾಜ್ಯ ಸ್ಥಾಪನೆಗೆ ಕಾಂಗ್ರೆಸ್‌ನ ಬದ್ಧತೆಯನ್ನು 2004ರಲ್ಲಿ ನೀಡಿದ್ದ ಭರವಸೆಯನ್ನು ಉಲ್ಲೇಖಿಸಿ, 'ರಾಜ್ಯದ ಕಾಂಗ್ರೆಸ್ ಸರ್ಕಾರವು, ಪಕ್ಷದ ಎಲ್ಲ ಆರು ಗ್ಯಾರಂಟಿಗಳನ್ನು ಜಾರಿಗೊಳಿಸುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸಲಿದೆ' ಎಂದು ತಿಳಿಸಿದರು.

ಇದೇ ವೇಳೆ ರೇವಂತರೆಡ್ಡಿ ಅವರು, ಕವಿ ಅಂದೆಶ್ರೀ ಅವರು ರಚಿಸಿ, ಸಂಗೀತ ನಿರ್ದೇಶಕ ಎಂ.ಎಂ.ಕೀರವಾಣಿ ಸಂಯೋಜಿಸಿರುವ 'ಜಯ ಜಯ ಹೇ ತೆಲಂಗಾಣ..' ನಾಡಗೀತೆಯನ್ನು ಬಿಡುಗಡೆ ಗೊಳಿಸಿದರು. ಗನ್‌ಪಾರ್ಕ್‌ನಲ್ಲಿದ್ದ ಹುತಾತ್ಮರ ಸ್ಮಾರಕಕ್ಕೆ ಬಳಿಕ ನಮನ ಸಲ್ಲಿಸಿದರು.

ಪ್ರತಿಪಕ್ಷ ಬಿಆರ್‌ಎಸ್ ಪ್ರತ್ಯೇಕವಾಗಿ ಸ್ಥಾಪನಾ ದಿನ ಆಚರಿಸಿತು. ಅದ್ದೂರಿ ಕಾರ್ಯಕ್ರಮಕ್ಕೆ ನೀಡಿದ್ದ ಆಹ್ವಾನವನ್ನು ಬಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ ನಿರಾಕರಿಸಿದ್ದರು.

ಎನ್ಇಸಿಸಿ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹315-504
ದ್ವಿತಳಿ (ಬಿ.ವಿ)	₹368-618

‘ಎಫ್‌ಡಿಐ ಕುಸಿತಕ್ಕೆ ಕೇಂದ್ರವೇ ಹೊಣೆ’

ಪ್ರಜಾವಾಣಿ ವಾರ್ತೆ



ಎಂ.ಬಿ. ಪಾಟೀಲ

ಬೆಂಗಳೂರು: ‘ಕಳೆದ ಎರಡು–ಮೂರು ವರ್ಷಗಳಿಂದ ಇಡೀ ದೇಶದಲ್ಲಿಯೇ ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ಒಳಹರಿವು ಕಡಿಮೆಯಾಗಿದೆ. ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿರುವ ಅಂಕಿ–ಅಂಶಗಳೇ ಇದರ ವಾಸ್ತವ ಚಿತ್ರಣ ನೀಡುತ್ತವೆ’ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಕರ್ನಾಟಕದಲ್ಲಿ ಮಾತ್ರ ಎಫ್‌ಡಿಐ ಒಳಹರಿವು ಕಡಿಮೆಯಾಗಿಲ್ಲ. ಕೇಂದ್ರದ ದೂರದೃಷ್ಟಿ ಇಲ್ಲದ ಹಾಗೂ ದೋಷಪೂರಿತ ನೀತಿಗಳೇ ಕುಸಿತಕ್ಕೆ ಕಾರಣವಾಗಿವೆ. ಜೊತೆಗೆ, ಜಾಗತಿಕ ವಿದ್ಯಮಾನಗಳು ಕೂಡ ಕಾರಣವಾಗಿರ ಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ಎಫ್‌ಡಿಐ ಒಳಹರಿವು ನಿರಂತರವಾಗಿ ಕುಸಿಯುತ್ತಿದೆ. 2020-21ರಲ್ಲಿ ₹4.42 ಲಕ್ಷ ಕೋಟಿ, 2021-22ರಲ್ಲಿ ₹4.37 ಲಕ್ಷ ಕೋಟಿ, 2022-23ರಲ್ಲಿ ₹3.67 ಲಕ್ಷ ಕೋಟಿ ಮತ್ತು 2023-24ರಲ್ಲಿ ₹ 3.47 ಲಕ್ಷ ಕೋಟಿಗೆ ಇಳಿದಿದೆ. 2022-23ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ 2023-24ರಲ್ಲಿ ಶೇ 3ರಷ್ಟು ಇಳಿಕೆಯಾಗಿದೆ. ಆದರೆ, ಅದಕ್ಕೂ ಮುಂಚಿನ ನಾಲ್ಕು ವರ್ಷಗಳಲ್ಲಿ ಇಳಿಕೆ ಪ್ರಮಾಣವು ಶೇ 25ಕ್ಕಿಂತಲೂ ಹೆಚ್ಚಿದೆ ಎಂದು ಹೇಳಿದ್ದಾರೆ.

‘ಎಫ್‌ಡಿಐ ಆಕರ್ಷಿಸುವಲ್ಲಿ ಮೊದಲ ಸ್ಥಾನ-ದಲ್ಲಿದ್ದ ಕರ್ನಾಟಕವು ಈಗ ಮೂರನೇ ಸ್ಥಾನಕ್ಕೆ ಇಳಿಯಲು ಕೇಂದ್ರದ ಧೋರಣೆ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರದ ಉದಾಸೀನ ನಿಲುವು ಕಾರಣಗಳಾಗಿವೆ. ವಿದೇಶಿ ಹೂಡಿಕೆದಾರರು ಇತ್ತೀಚಿನ ವರ್ಷಗಳಲ್ಲಿ ಕೇಂದ್ರದ ಒತ್ತಾಸೆ ಮೇರೆಗೆ ಮಹಾರಾಷ್ಟ್ರ ಮತ್ತು ಗುಜರಾತ್‌ನತ್ತ ಮುಖ ಮಾಡಿದ್ದಾರೆ ಎಂದು ದೂರಿದ್ದಾರೆ. ‘ರಾಜ್ಯದಲ್ಲಿ 2023-24ರಲ್ಲಿ ಒಳಹರಿವು ಕಡಿಮೆ ಆಗಿದೆ. ಈ ಪರಿಸ್ಥಿತಿ ಸುಧಾರಿಸಲು ಕಾಂಗ್ರೆಸ್ ಸರ್ಕಾರವು ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿದೆ. ಕಂಪನಿಗಳ ಹೂಡಿಕೆಗೆ ಸೂಕ್ತ ಭೂಮಿಕೆ ಸಿದ್ಧಪಡಿಸಲು ಸರ್ವ ಪ್ರಯತ್ನ ಮಾಡುತ್ತಿದೆ’ ಎಂದು ಹೇಳಿದ್ದಾರೆ.

₹1.13 ಲಕ್ಷ ಕೋಟಿ ಹೂಡಿಕೆ ಆಕರ್ಷಣೆ: ‘2023-24ನೇ ಆರ್ಥಿಕ ವರ್ಷದಲ್ಲಿ ದೇಶೀಯ ಹಾಗೂ ವಿದೇಶಿ ಕಂಪನಿಗಳಿಂದ ರಾಜ್ಯ ಸರ್ಕಾರವು ₹1.13 ಲಕ್ಷ ಕೋಟಿ ಹೂಡಿಕೆಯನ್ನು ಆಕರ್ಷಿಸಿದೆ ಎಂದು ಸಚಿವರು ತಿಳಿಸಿದ್ದಾರೆ.

ನಿವೃತ್ತಿ ಜೀವನಕ್ಕೆ ₹5 ಕೋಟಿ ಗಳಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ನಿವೃತ್ತಿ ಜೀವನಕ್ಕೆ ₹5 ಕೋಟಿ ಗಳಿಸುವುದು ಹೇಗೆ?... ಹೀಗೆ ಕೇಳಿದ ತಕ್ಷಣ ಇದು ಸಾಧ್ಯವೇ ಎನ್ನುವ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಆದರೆ, ತಿಂಗಳಿಗೆ ₹7,698 ಹೂಡಿಕೆ ಮಾಡುವ ಮೂಲಕ ನಿವೃತ್ತಿ ಬದುಕಿಗೆ ಇಷ್ಟು ಕೋಟಿಯನ್ನು ಗಳಿಸಬಹುದು. ಇಷ್ಟು ಹಣ ಸಂಪಾದಿಸಲು ಯಾವಾಗ ಹೂಡಿಕೆ ಆರಂಭಿಸಬೇಕು? ಎಲ್ಲಿ ಹೂಡಿಕೆ ಮಾಡಬೇಕು? ಎಷ್ಟು ಸಮಯ ಹೂಡಿಕೆ ಮಾಡಬೇಕು? ಬನ್ನಿ ಎಲ್ಲವನ್ನೂ ತಿಳಿಯೋಣ.

ನಿವೃತ್ತಿಗೆ ಯಾವಾಗ ಹೂಡಿಕೆ ಆರಂಭಿಸಬೇಕು?: ನಿವೃತ್ತಿ ಜೀವನಕ್ಕೆ ಸಾಕಷ್ಟು ಸಮಯವಿದೆ ಎಂದು ತಿಳಿದು ಬಹುತೇಕರು ಹೂಡಿಕೆ ಮಾಡುವುದನ್ನು ತಡ ಮಾಡುತ್ತಾರೆ. ಆದರೆ, ನಿಮಗೆ ಗೊತ್ತಿರಲಿ; ನಿವೃತ್ತಿ ಬದುಕಿಗೆ ದೊಡ್ಡ ಮೊತ್ತ ಪೇರಿಸಬೇಕಾದರೆ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹೂಡಿಕೆ ಆರಂಭಿಸಬೇಕು.

ಯಾಕೆಂದರೆ ಹೂಡಿಕೆ ಮಾಡಿದ ದುಡ್ಡು ಬೆಳವಣಿಗೆಯಾಗಲು ಸಮಯ ಬೇಕಾಗುತ್ತದೆ. ಬೇಗ ಹೂಡಿಕೆ ಆರಂಭಿಸಿದಾಗ ಹೂಡಿಕೆಯ ಮೊತ್ತ ಕಡಿಮೆ ಇದ್ದರೂ ದೀರ್ಘಾವಧಿಯಲ್ಲಿ ಅದು ದೊಡ್ಡ ಗಳಿಕೆಯಾಗಿ ರೂಪುಗೊಳ್ಳುತ್ತದೆ. ಇಲ್ಲಿ ಹೂಡಿಕೆ ಹಣದ ಬೆಳವಣಿಗೆಗೆ ಹೆಚ್ಚು ಸಮಯ ದಕ್ಕುತ್ತದೆ. ಆದರೆ, ತಡವಾಗಿ ಹೂಡಿಕೆ ಆರಂಭಿಸಿದಾಗ ದುಡ್ಡಿನ ಬೆಳವಣಿಗೆಗೆ ಹೆಚ್ಚು ಸಮಯಾವಕಾಶ ಸಿಗುವುದಿಲ್ಲ. ಹಾಗಾಗಿ, ನಿಮ್ಮ ಹೂಡಿಕೆಯು ಗುರಿ ಮುಟ್ಟಲು ದೊಡ್ಡ ಮೊತ್ತದ ಹೂಡಿಕೆ ಮಾಡಬೇಕಾಗುತ್ತದೆ (ಪಟ್ಟಿ ಗಮನಿಸಿ).

ಎಷ್ಟು ಹೂಡಿಕೆ ಮಾಡಬೇಕು?

ಉದಾಹರಣೆ	ಹೂಡಿಕೆದಾರನ ವಯಸ್ಸು	ನಿವೃತ್ತಿಗೆ ಬಾಕಿ ಇರುವ ವರ್ಷಗಳು	ಮಾಸಿಕ ಹೂಡಿಕೆ ಮೊತ್ತ
ಉದಾಹರಣೆ 1	40 ವರ್ಷ	20 ವರ್ಷ	₹50,043
ಉದಾಹರಣೆ 2	35 ವರ್ಷ	25 ವರ್ಷ	₹26,349
ಉದಾಹರಣೆ 3	25 ವರ್ಷ	35 ವರ್ಷ	₹7,698

ಗಮನಿಸಿ: ಶೇ 12ರ ಗಳಿಕೆ ಅಂದಾಜಿನಲ್ಲಿ ಮೇಲಿನ ಲೆಕ್ಕಾಚಾರ ಮಾಡಲಾಗಿದೆ

ಉದಾಹರಣೆ 1: 40 ವರ್ಷದ ವ್ಯಕ್ತಿಯೊಬ್ಬ ನಿವೃತ್ತಿ ಜೀವನಕ್ಕೆ ₹5 ಕೋಟಿ ಪೇರಿಸಬೇಕು ಎಂದುಕೊಳ್ಳೋಣ. ಆತನಿಗೆ ಇನ್ನು 20 ವರ್ಷ ಮಾತ್ರ ಸೇವಾವಧಿ ಇದೆ ಎಂದುಕೊಳ್ಳಿ. ಇಂತಹ ಸಂದರ್ಭದಲ್ಲಿ ಇಷ್ಟು ಹಣ ಗಳಿಸಲು ಆತ ಪ್ರತಿ ತಿಂಗಳು ₹50,043 ಹೂಡಿಕೆ ಮಾಡಬೇಕಾಗುತ್ತದೆ. ಇಲ್ಲಿ ಹೂಡಿಕೆ ಹಣ ಬೆಳವಣಿಗೆ ಸಾಧಿಸಲು ಹೆಚ್ಚು ಸಮಯ ಸಿಗದ ಕಾರಣ ಹೂಡಿಕೆ ಮಾಡುವಾಗ ದೊಡ್ಡ ಮೊತ್ತವನ್ನೇ ಹಾಕಬೇಕಾಗುತ್ತದೆ.

ಉದಾಹರಣೆ 2: 35 ವರ್ಷದ ವ್ಯಕ್ತಿಯೊಬ್ಬ ನಿವೃತ್ತಿ ಜೀವನಕ್ಕೆ ₹5 ಕೋಟಿ ಪೇರಿಸಬೇಕು ಎಂದುಕೊಳ್ಳೋಣ. ಆತನಿಗೆ ಇನ್ನು 25 ವರ್ಷ ಸೇವಾವಧಿ ಇದೆ ಎಂದು ಭಾವಿಸೋಣ. ಇಂತಹ ಸನ್ನಿವೇಶದಲ್ಲಿ ಆತ ಪ್ರತಿ ತಿಂಗಳು ₹26,349 ಹೂಡಿಕೆ ಮಾಡಬೇಕಾಗುತ್ತದೆ.

ಮೊದಲನೇ ಉದಾಹರಣೆಗೆ ಹೋಲಿಸಿದಾಗ ಇಲ್ಲಿ ಹೂಡಿಕೆ ಮಾಡಬೇಕಾದ ಮಾಸಿಕ ಮೊತ್ತ ಹೆಚ್ಚು ಕಡಿಮೆ ಅರ್ಧದಷ್ಟು ಕಡಿಮೆಯಾಗುತ್ತದೆ. ಹೂಡಿಕೆ ಮಾಡಿದ ಹಣದ ಬೆಳವಣಿಗೆಗೆ ಕೊಂಚ ಜಾಸ್ತಿ ಸಮಯ ಸಿಗುವ ಕಾರಣ ನಿಗದಿತ ಮೊತ್ತ ಗಳಿಸಲು ಸ್ವಲ್ಪ ಕಡಿಮೆ ಮೊತ್ತದ ಹೂಡಿಕೆ ಸಾಕಾಗುತ್ತದೆ.

ಉದಾಹರಣೆ 3: 25 ವರ್ಷದ ವ್ಯಕ್ತಿಯೊಬ್ಬ ನಿವೃತ್ತಿ ಜೀವನಕ್ಕೆ ₹5 ಕೋಟಿ ಪೇರಿಸಬೇಕು ಎಂದುಕೊಳ್ಳೋಣ. ಆತನಿಗೆ ಇನ್ನು 35 ವರ್ಷ ಸೇವಾವಧಿ ಇದೆ ಎಂದು ಭಾವಿಸೋಣ. ಇಂತಹ ಸಂದರ್ಭದಲ್ಲಿ ಆತ ಪ್ರತಿ ತಿಂಗಳು ₹7,698 ಹೂಡಿಕೆ ಮಾಡಬೇಕಾಗುತ್ತದೆ. ಮೊದಲನೇ ಮತ್ತು ಎರಡನೇ ಉದಾಹರಣೆಯನ್ನು ಪರಿಗಣಿಸಿದಾಗ ಇಲ್ಲಿ ಹೂಡಿಕೆ ಮಾಡಿದ ಹಣದ ಬೆಳವಣಿಗೆಗೆ 35 ವರ್ಷಗಳ ಸಮಯ ಸಿಗುತ್ತದೆ. ಹಾಗಾಗಿ, ಇಲ್ಲಿ ಕಡಿಮೆ ಮೊತ್ತ ಅಂದರೆ ಪ್ರತಿ ತಿಂಗಳು ₹7,698 ಹೂಡಿಕೆ ಮಾಡಿದರೆ ಸಾಕು ₹5 ಕೋಟಿ ಗಳಿಕೆ ಸಾಧ್ಯವಿದೆ.

ಎಲ್ಲಿ ಹೂಡಿಕೆ ಮಾಡಬೇಕು?: ನಿವೃತ್ತಿ ಜೀವನಕ್ಕೆ ಹೂಡಿಕೆ ಮಾಡುವಾಗ ಹಣದುಬ್ಬರವನ್ನು (ಬೆಲೆ ಏರಿಕೆ) ಮೀರಿ ಹೆಚ್ಚು ಲಾಭ ತಂದುಕೊಡುವ ಹೂಡಿಕೆಗಳನ್ನು ಪರಿಗಣಿಸಬೇಕು. ನಿಶ್ಚಿತ ಠೇವಣಿ, ಅಂಚೆ ಕಚೇರಿ ಎಫ್‌ಡಿ, ಅಂಚೆ ಕಚೇರಿ ಆರ್‌ಡಿ, ಮನಿ ಬ್ಯಾಕ್ ಪಾಲಿಸಿ, ಎಂಡೋಮೆಂಟ್ ಪಾಲಿಸಿಗಳಿಂದ ಹೆಚ್ಚಿನ ಲಾಭವಿಲ್ಲ.

ನಿವೃತ್ತಿಗಾಗಿ ಹೂಡಿಕೆ ಮಾಡುವಾಗ ಎನ್‌ಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ) ಪರಿಗಣಿಸಬಹುದು. ಕೇಂದ್ರ ಸರ್ಕಾರ ಆರಂಭಿಸಿರುವ ಈ ಯೋಜನೆಯಡಿ 18 ವರ್ಷ ಮೇಲ್ಪಟ್ಟವರು ಮತ್ತು 70 ವರ್ಷದ ಒಳಗಿನವರು ಹೂಡಿಕೆ ಮಾಡಬಹುದು. ಎನ್‌ಪಿಎಸ್‌ನಲ್ಲಿ ದೀರ್ಘಾವಧಿಯಲ್ಲಿ ಶೇ10ರಿಂದ ಶೇ12ರಷ್ಟು ಗಳಿಕೆ ನಿರೀಕ್ಷಿಸಬಹುದು. ಉಳಿದಂತೆ ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳು ಕೂಡ ನಿವೃತ್ತಿ ಜೀವನಕ್ಕೆ ದೊಡ್ಡ ಮೊತ್ತ ಪೇರಿಸಲು ಉತ್ತಮ ಆಯ್ಕೆಯಾಗಿವೆ. ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ ಶೇ 12ರಿಂದ ಶೇ 15ರ ವರೆಗೆ ಲಾಭಾಂಶ ನಿರೀಕ್ಷೆ ಮಾಡಬಹುದು.

ಇನ್ನು ಹೂಡಿಕೆ ಮೇಲೆ ಹೆಚ್ಚು ರಿಸ್ಕ್ ಬೇಡ ಎನ್ನುವವರು ಇಪಿಎಫ್ (ಕಾರ್ಮಿಕರ ಭವಿಷ್ಯ ನಿಧಿ) ಮತ್ತು ಪಿಪಿಎಫ್ (ಸಾರ್ವಜನಿಕ ಭವಿಷ್ಯ ನಿಧಿ) ಹೂಡಿಕೆಯನ್ನು ಗಣನೆಗೆ ತೆಗೆದುಕೊಳ್ಳಬಹುದು. ಎರಡೂ ಹೂಡಿಕೆಗಳ ಬಡ್ಡಿದರವನ್ನು ಕೇಂದ್ರ ಸರ್ಕಾರ ಕಾಲಕಾಲಕ್ಕೆ ನಿಗದಿ ಮಾಡುತ್ತದೆ. ಸದ್ಯದ ಇಪಿಎಫ್ ಬಡ್ಡಿದರ ಶೇ 8.25ರಷ್ಟಿದೆ. ಪಿಪಿಎಫ್ ಬಡ್ಡಿದರ ಸದ್ಯ ಶೇ 7.1ರಷ್ಟಿದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)



ಅನಿಶ್ಚಿತತೆ ಆಟ; ಕುಸಿದ ಸೂಚ್ಯಂಕಗಳು

ಸತತ ಎರಡು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಮೇ 31ಕ್ಕೆ ಕೊನೆಗೊಂಡ ವಾರದಲ್ಲಿ ಕುಸಿತ ಕಂಡಿವೆ.

73,961 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.92ರಷ್ಟು ಇಳಿಕೆಯಾಗಿದೆ. 22,530 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.86ರಷ್ಟು ಇಳಿಕೆ ದಾಖಲಿಸಿದೆ.

ಕಡಿಮೆ ಮತದಾನ ಪ್ರಮಾಣದಿಂದಾಗಿ ಲೋಕಸಭಾ ಚುನಾವಣೆಯಲ್ಲಿ ಫಲಿತಾಂಶ ಏನಾಗಬಹುದು ಎಂಬ ಆತಂಕ, ಅಮೆರಿಕದಲ್ಲಿ ಹಣದುಬ್ಬರ ಮತ್ತಷ್ಟು ಹೆಚ್ಚಾಗಬಹುದೆಂಬ ನಿರೀಕ್ಷೆ, ಸುರಕ್ಷಿತ ಹೂಡಿಕೆಗಳಿಗೆ ಹಣ ವರ್ಗಾವಣೆ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ. ನಿಫ್ಟಿ ಮಿಡ್ ಕ್ಯಾಪ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ತಲಾ ಶೇ 1.53ರಷ್ಟು ಇಳಿಕೆ ಕಂಡಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಹೊರತುಪಡಿಸಿದರೆ ಉಳಿದೆಲ್ಲಾ ಸೂಚ್ಯಂಕಗಳು ಇಳಿಕೆಯಾಗಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 4.25, ನಿಫ್ಟಿ ಎನರ್ಜಿ ಸೂಚ್ಯಂಕ ಶೇ 3.31, ಅನಿಲ ಮತ್ತು ತೈಲ ಸೂಚ್ಯಂಕ ಶೇ 3.06, ಎಫ್‌ಎಂಸಿಜಿ ಸೂಚ್ಯಂಕ ಶೇ 2.42, ಲೋಹ ಸೂಚ್ಯಂಕ ಶೇ 2.06, ವಾಹನ ಸೂಚ್ಯಂಕ ಶೇ 1.97, ಫಾರ್ಮಾ ಸೂಚ್ಯಂಕ ಶೇ 1.69 ಮತ್ತು ಮಾಧ್ಯಮ ಸೂಚ್ಯಂಕ ಶೇ 1.4ರಷ್ಟು ಕುಸಿದಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಡಿವೀಸ್ ಲ್ಯಾಬ್ಸ್ ಶೇ 4.42, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 2.4, ಬಜಾಜ್ ಆಟೊ ಶೇ 1.67, ಅದಾನಿ ಪೋರ್ಟ್ಸ್ ಶೇ 1.55, ಇಂಡಸ್ ಇಂಡ್ ಬ್ಯಾಂಕ್ ಶೇ 1.24, ಎಲ್ ಆ್ಯಂಡ್ ಟಿ ಶೇ 1.14, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 0.94, ಅದಾನಿ ಎಂಟರ್‌ಪ್ರೈಸಸ್ ಶೇ 0.79 ಮತ್ತು ಎಸ್‌ಬಿಐ ಶೇ 0.18ರಷ್ಟು ಗಳಿಸಿಕೊಂಡಿವೆ.

ಟೆಕ್ ಮಹೀಂದ್ರ ಶೇ 6.76, ಒಎನ್‌ಜಿಸಿ ಶೇ 6.59, ವಿಪ್ರೊ ಶೇ 5.56, ಗ್ರಾಸಿಮ್ ಇಂಡಸ್ಟ್ರೀಸ್ ಶೇ 4.95, ಟೈಟನ್ ಶೇ 4.75, ಟಿಸಿಎಸ್ ಶೇ 4.71, ಮಾರುತಿ ಸುಜುಕಿ ಶೇ 4.6 ಮತ್ತು ಬಜಾಜ್ ಫಿನ್‌ಸರ್ವ್ ಶೇ 4.55ರಷ್ಟು ಕುಸಿತ ದಾಖಲಿಸಿವೆ.

ಮುನ್ನೋಟ: ಲೋಕಸಭಾ ಚುನಾವಣೆ ಫಲಿತಾಂಶ ಷೇರುಪೇಟೆಯ ಮೇಲೆ ನೇರ ಪರಿಣಾಮ ಬೀರಲಿದೆ. ಉಳಿದಂತೆ ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳು, ಜಾಗತಿಕ ವಿದ್ಯಮಾನಗಳಿಗೆ ಸೂಚ್ಯಂಕಗಳು ಪ್ರತಿಕ್ರಿಯಿಸಲಿವೆ.

ವಿಸ್ತಾರಾ ವಿಮಾನಕ್ಕೆ ಬಾಂಬ್ ಬೆದರಿಕೆ

ಮುಂಬೈ (ಪಿಟಿಐ): ಪ್ಯಾರಿಸ್‌ನಿಂದ ಮುಂಬೈಗೆ ಆಗಮಿಸುತ್ತಿದ್ದ ವಿಸ್ತಾರಾ ವಿಮಾನದಲ್ಲಿ ಬಾಂಬ್ ಬೆದರಿಕೆ ಪತ್ರ ಪತ್ತೆಯಾಗಿದ್ದರಿಂದ ಮುಂಬೈನ ವಿಮಾನ ನಿಲ್ದಾಣದಲ್ಲಿ ಭಾನುವಾರ ತುರ್ತು ಪರಿಸ್ಥಿತಿ ಘೋಷಿಸಲಾಯಿತು.

ಬೆಳಿಗ್ಗೆ 10.19ಕ್ಕೆ ಈ ವಿಮಾನವು ಭೂ ಸ್ಪರ್ಶ ಮಾಡಿತು. ಬಳಿಕ ಅದರಲ್ಲಿದ್ದ 294 ಪ್ರಯಾಣಿಕರು ಮತ್ತು 12 ಸಿಬ್ಬಂದಿಯನ್ನು ಸುರಕ್ಷಿತವಾಗಿ ಇಳಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಪ್ಯಾರಿಸ್‌ನ ಚಾರ್ಲ್ಸ್ ಡಿ ಗಾಲ್ ವಿಮಾನ ನಿಲ್ದಾಣದಿಂದ ಮುಂಬೈಗೆ ಬರುತ್ತಿದ್ದ ಈ ವಿಮಾನದಲ್ಲಿನ (ಯುಕೆ 024) ಏರ್‌ಸಿಕ್‌ನೆಸ್ ಬ್ಯಾಗ್‌ನಲ್ಲಿ ಬಾಂಬ್ ಬೆದರಿಕೆ ಪತ್ರ ಸಿಕ್ಕಿದೆ. ಈ ಬಗ್ಗೆ ವಿಮಾನಯಾನ ಸಂಸ್ಥೆಯು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ನೀಡಿದೆ. ಭದ್ರತಾ ಏಜೆನ್ಸಿಗಳ ಪರಿಶೀಲನೆಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ರೆಪೊ ದರ ಯಥಾಸ್ಥಿತಿ?

5ರಿಂದ 7ರ ವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ

ಮುಂಬೈ (ಪಿಟಿಐ): ದೇಶದಲ್ಲಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವನ್ನು ನಿಯಂತ್ರಿಸುವುದು ಸವಾಲಾಗಿದೆ. ಹಾಗಾಗಿ, ಜೂನ್ 5ರಿಂದ 7ರ ವರೆಗೆ ನಡೆಯಲಿರುವ ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ರೆಪೊ ದರವನ್ನು ಕಡಿತಗೊಳಿಸುವ ಸಾಧ್ಯತೆ ಕಡಿಮೆಯಿದೆ ಎಂದು ಹಣಕಾಸು ತಜ್ಞರು ಹೇಳಿದ್ದಾರೆ.

ಲೋಕಸಭಾ ಚುನಾವಣಾ ಫಲಿತಾಂಶ ಹೊರಬಿದ್ದ ಮಾರನೇ ದಿನವೇ ಸಭೆ ಆರಂಭವಾಗಲಿದೆ. ಗವರ್ನರ್ ಶಕ್ತಿಕಾಂತ ದಾಸ್ ಅವರು ಇದರ ಅಧ್ಯಕ್ಷತೆ ವಹಿಸಲಿದ್ದು, ಜೂನ್ 7ರಂದು ಸಭೆಯ ನಿರ್ಣಯ ಪ್ರಕಟಿಸಲಿದ್ದಾರೆ.

ರೆಪೊ ದರ ಕಡಿತವಾಗದಿದ್ದರೆ ಗೃಹ, ವಾಹನ ಮತ್ತು ಇತರೆ ಸಾಲಗಳ ಮೇಲಿನ ಬಡ್ಡಿದರ ಇಳಿಕೆಯಾಗಲಿದೆ ಎಂಬ ನಿರೀಕ್ಷೆಯಲ್ಲಿ ಇರುವ ಸಾಲಗಾರರಿಗೆ ನಿರಾಸೆಯಾಗಲಿದೆ.

2023ರ ಫೆಬ್ರುವರಿಯಲ್ಲಿ ನಡೆದ ದ್ವೈಮಾಸಿಕ ಸಭೆಯಲ್ಲಿ ಆರ್‌ಬಿಐ ರೆಪೊ ದರವನ್ನು ಶೇ 6.5ಕ್ಕೆ ಹೆಚ್ಚಿಸಿತ್ತು. ಕಳೆದ ಆರು ಎಂಪಿಸಿ ಸಭೆಗಳಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ.

‘ಕಳೆದ ಎರಡು ತಿಂಗಳ ಅವಧಿಯಲ್ಲಿ ದೇಶದ ಆರ್ಥಿಕ ಸ್ಥಿತಿಗತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಬದಲಾವಣೆಯಾಗಿಲ್ಲ. ಆರ್ಥಿಕತೆಯ ಮಾನದಂಡ ನಿರ್ಧರಿಸುವ ಜಿಎಸ್‌ಟಿ ಸಂಗ್ರಹ ಮತ್ತು ತಯಾರಿಕಾ ವಲಯವಷ್ಟೇ ಬೆಳವಣಿಗೆ ದಾಖಲಿಸಿವೆ’ ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

‘ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ 5ಕ್ಕಿಂತಲೂ ಕಡಿಮೆ ದಾಖಲಾಗಿದೆ. ಆದರೆ, ಬಿಸಿ ಗಾಳಿಯು ತರಕಾರಿಗಳ ಬೆಲೆ ಏರಿಕೆ ಮೇಲೆ ನೇರ ಪರಿಣಾಮ ಬೀರಲಿದೆ. ಭಾರತೀಯ ಹವಾಮಾನ ಇಲಾಖೆಯು ಈ ಬಾರಿ ಮುಂಗಾರು ಸಾಮಾನ್ಯವಾಗಿರಲಿದೆ ಎಂದು ಅಂದಾಜಿಸಿದೆ. ಈ ಬೆಳವಣಿಗೆಗಳನ್ನು ಅವಲೋಕಿಸಿದರೆ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯಿದೆ’ ಎನ್ನುತ್ತಾರೆ ಅವರು.

‘ಚಿಲ್ಲರೆ ಹಣದುಬ್ಬರವು ಶೇ 4ಕ್ಕಿಂತಲೂ ಹೆಚ್ಚಿದೆ. ಹಾಗಾಗಿ, ರೆಪೊ ದರ ಕಡಿತಗೊಳಿಸುವ ಸಾಧ್ಯತೆ ಕಡಿಮೆ ಇದೆ’ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಅಸೋಚಾಂ) ಅಧ್ಯಕ್ಷ ಸಂಜಯ್ ನಾಯರ್ ಹೇಳಿದ್ದಾರೆ.

‘ಏಪ್ರಿಲ್‌ನ ಹಣದುಬ್ಬರದ ಅಂಕಿ-ಅಂಶಗಳನ್ನು ಅವಲೋಕಿಸಿದರೆ ಆಹಾರ ಮತ್ತು ಸರಕುಗಳ ಬೆಲೆಯಲ್ಲಿ ಏರಿಕೆಯಾಗಿದೆ. ಹಾಗಾಗಿ, ಹಣಕಾಸು ನೀತಿ ಸಮಿತಿ ಸಭೆಯು ರೆಪೊ ದರವನ್ನು ಇಳಿಕೆ ಮಾಡುವ ನಿರೀಕ್ಷೆ ಕಡಿಮೆ ಇದೆ’ ಎನ್ನುತ್ತಾರೆ ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್.

ಅದಾನಿ ಏಷ್ಯಾದ ಶ್ರೀಮಂತ ವ್ಯಕ್ತಿ



ಗೌತಮ್ ಅದಾನಿ

ನವದೆಹಲಿ (ಪಿಟಿಐ): ಬ್ಲೂಮ್‌ಬರ್ಗ್ ಕೋಟ್ಯಧಿಪತಿಗಳ ಸೂಚ್ಯಂಕದ ಪ್ರಕಾರ ಉದ್ಯಮಿ ಗೌತಮ್ ಅದಾನಿ ಅವರು, ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರನ್ನು ಹಿಂದಿಕ್ಕಿ ಏಷ್ಯಾದ ಅತಿದೊಡ್ಡ ಶ್ರೀಮಂತ ವ್ಯಕ್ತಿಯಾಗಿ ಅಗ್ರಸ್ಥಾನಕ್ಕೇರಿದ್ದಾರೆ.


ತನ್ನ ಒಡೆತನದ ಕಂಪನಿಗಳ ಮಾರುಕಟ್ಟೆ ಮೌಲ್ಯದ ಏರಿಕೆಯಿಂದಾಗಿ ಅದಾನಿ ಅವರ ಸಂಪತ್ತಿನಲ್ಲಿ ಏರಿಕೆಯಾಗಿದೆ. ಸದ್ಯ ಅವರ ಒಟ್ಟು ಸಂಪತ್ತು ₹9.26 ಲಕ್ಷ ಕೋಟಿ ಆಗಿದ್ದು, ಜಾಗತಿಕ ಮಟ್ಟದ ಸಿರಿವಂತರ ಪಟ್ಟಿಯಲ್ಲಿ 11ನೇ ಸ್ಥಾನ ಪಡೆದಿದ್ದಾರೆ.

ಮುಕೇಶ್ ಅಂಬಾನಿ ₹9.09 ಲಕ್ಷ ಕೋಟಿ ಸಂಪತ್ತು ಹೊಂದಿದ್ದು, ಜಾಗತಿಕ ಮಟ್ಟದಲ್ಲಿ 12ನೇ ಸ್ಥಾನದಲ್ಲಿ ದ್ದಾರೆ. ಮುಂದಿನ ಹತ್ತು ವರ್ಷಗಳಲ್ಲಿ ಅದಾನಿ ಸಮೂಹವು ಉದ್ಯಮದ ವಿಸ್ತರಣೆಗಾಗಿ ₹7.51 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ ಎಂದು ಅಮೆರಿಕದ ಬ್ರೋಕರೇಜ್ ಸಂಸ್ಥೆಯಾದ ಜೆಫರೀಸ್ ಹೇಳಿತ್ತು. ಹಾಗಾಗಿ, ಶುಕ್ರವಾರದ ಷೇರು ವಹಿವಾಟಿನಲ್ಲಿ ಅದಾನಿ ಒಡೆತನದ ಹತ್ತು ಕಂಪನಿಗಳ ಮಾರುಕಟ್ಟೆ ಮೌಲ್ಯಕ್ಕೆ ₹84,064 ಕೋಟಿ ಸೇರ್ಪಡೆಯಾಗಿತ್ತು. ಒಟ್ಟು ಎಂ–ಕ್ಯಾಪ್ ₹17.51 ಲಕ್ಷ ಕೋಟಿ ಆಗಿದೆ.



ನೀರಾಟ ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಬೇಸಿಗೆ ಧಗೆಯಿಂದ ಹೊರ ಬಂದು ತಂಪಾಗಲು ಗಂಗಾ ನದಿಯಲ್ಲಿ ಜನರು ನೀರಾಟ ಆಡಿದರು –ಪಿಟಿಐ ಚಿತ್ರ

ನ್ಯಾಯಾಂಗ ವ್ಯವಸ್ಥೆಗೆ ಟ್ರಂಪ್ ತರಾಟೆ ರಷ್ಯಾ ಅಧ್ಯಕ್ಷ ಪುಟಿನ್‌ಗೆ ವರದಾನ?



ಡೊನಾಲ್ಡ್ ಟ್ರಂಪ್

ನ್ಯೂಯಾರ್ಕ್ (ಎ.ಪಿ): ‘ಹಷ್ ಮನಿ’ ಪ್ರಕರಣದಲ್ಲಿ ದಾಖಲೆಗಳನ್ನು ತಿರುಚಿದ್ದ ಆರೋಪ ಸಾಬೀತಾಗಿ, ಸ್ಥಳೀಯ ಕೋರ್ಟ್ ತಪ್ಪಿತಸ್ಥ ಎಂದು ನಿರ್ಧರಿಸಿದ ಹಿಂದೆಯೇ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ದೇಶದ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಈ ಬೆಳವಣಿಗೆಯು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಸೇರಿದಂತೆ, ನಿರಂಕುಶ ಆಡಳಿತದ ಅನೇಕ ನಾಯಕರಿಗೆ ಅನುಕೂಲಕರವಾಗಿ ಪರಿಣಮಿಸಬಹುದು ಎಂದು ಪರಿಣತರು ವಿಶ್ಲೇಷಿಸಿದ್ದಾರೆ.

‘ನನಗೇ ಇಂತಹ ಸ್ಥಿತಿ ಬರುವುದಾದರೆ, ಬೇರೆ ಯಾರಿಗಾದರೂ ಬರಬಹುದು’ ಎಂದು ಇಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಡೊನಾಲ್ಡ್ ಟ್ರಂಪ್ ಅವರು ಹೇಳಿದರು.

ಟ್ರಂಪ್ ಸೇರಿದಂತೆ ಮೂವರು ಮಾಜಿ ಅಧ್ಯಕ್ಷರಿಗೆ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿದ್ದ ಫಿಯೊನಾ ಹಿಲ್ ಅವರು, ‘ಬಹುಶಃ ಸಾವಿರಾರು ಮೈಲಿ ದೂರದಲ್ಲಿ ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಖುಷಿಯಿಂದ ತಮ್ಮ ಕೈ ಉಜ್ಜಿಕೊಳ್ಳುತ್ತಿರಬಹುದು’ ಎಂದು ಅಭಿಪ್ರಾಯಪಟ್ಟರು.

ಟ್ರಂಪ್ ಅವರು ನ್ಯಾಯಾಂಗ ವ್ಯವಸ್ಥೆ ಮೇಲೆ ದಾಳಿ ನಡೆಸಿರುವುದರಿಂದ ಪುಟಿನ್ ಅವರಿಗೆ ತಮ್ಮ ದೇಶದಲ್ಲಿ ವರ್ಚಸ್ಸು ವೃದ್ಧಿಸಿಕೊಳ್ಳಲು ನೆರವಾಗಲಿದೆ ಎಂದು ಚಿಂತಕರು ವಿಶ್ಲೇಷಿಸಿದ್ದಾರೆ. ಕೆಲ ನಿರಂಕುಶಾಧಿಕಾರಿ ದೇಶಗಳು ಈಗಾಗಲೇ ಟ್ರಂಪ್ ಅವರಿಗೆ ಈ ಸಂಬಂಧ ಬೆಂಬಲ ಘೋಷಿಸಿವೆ.

ತನ್ನ ವಿರುದ್ಧದ ತೀರ್ಪಿನ ಹಿನ್ನೆಲೆಯಲ್ಲಿ ಟ್ರಂಪ್ ಮಾಡಿರುವ ಟೀಕೆಯನ್ನು ರಷ್ಯಾ ಸ್ವಾಗತಿಸಿದೆ. ‘ನಿಯಮಾನುಸಾರ ಅಥವಾ ನಿಯಮ ಬಾಹಿರವಾಗಿ ರಾಜಕೀಯ ವೈರಿಯನ್ನು ತೆರೆಮರೆಗೆ ಸರಿಸುವ ಯತ್ನ ಇದಾಗಿದೆ’ ಎಂದು ರಷ್ಯಾ ಸರ್ಕಾರದ ವಕ್ತಾರ ಡಿಮಿಟ್ರಿ ಪೆಸ್ಕೊವ್ ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಂದ್ರನಲ್ಲಿ ಇಳಿದ ಚಾಂಗ್ ಇ–6

ಬೀಜಿಂಗ್ (ಪಿಟಿಐ): ಭೂಮಿಗೆ ಬಹುತೇಕ ಗೋಚರಿಸದ ಚಂದ್ರನ ಭಾಗವನ್ನು ಚೀನಾದ ಬಾಹ್ಯಾಕಾಶ ನೌಕೆಯೊಂದು ಭಾನುವಾರ ಸ್ಪರ್ಶಿಸಿದೆ.

‘ಮುಂಜಾನೆ 3:53ರ ವೇಳೆಗೆ ಚಾಂಗ್ ಇ– 6 ನೌಕೆಯು ಚಂದ್ರನ ದಕ್ಷಿಣ ಧ್ರುವ ಐಟ್ಕೆನ್‌ನಲ್ಲಿ ಯಶಸ್ವಿಯಾಗಿ ಇಳಿದಿದೆ. ಈ ಭಾಗದಲ್ಲಿ ನೌಕೆಯನ್ನು ಇಳಿಸಿದ ಮೊದಲ ದೇಶ ನಮ್ಮದು’ ಎಂದು ಚೀನಾದ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆ (ಸಿಎನ್‌ಎಸ್‌ಎ) ತಿಳಿಸಿದೆ. ‘ಭೂಮಿಗೆ ಬಹುತೇಕ ಗೋಚರಿಸದ ಚಂದ್ರನ ಭಾಗದಿಂದ ಮಾದರಿಗಳನ್ನು ಸಂಗ್ರಹಿಸುವ ಉದ್ದೇಶದಿಂದ ಮೇ 3ರಂದು ನೌಕೆಯನ್ನು ಉಡಾವಣೆ ಮಾಡಲಾಗಿತ್ತು. ಎರಡು ದಿನಗಳಲ್ಲಿ ಲ್ಯಾಂಡರ್‌ನಲ್ಲಿನ ಉಪಕರಣಗಳು ಮಾದರಿಗಳನ್ನು ಸಂಗ್ರಹಿಸಲಿವೆ’ ಎಂದು ಸಿಎನ್‌ಎಸ್‌ಎ ತಿಳಿಸಿದೆ.

ಚಂದ್ರನ ದಕ್ಷಿಣ ಧ್ರುವದಲ್ಲಿ ಮೊದಲ ಬಾರಿಗೆ ನೌಕೆಯನ್ನು ಇಳಿಸಿದ ಖ್ಯಾತಿ ಭಾರತದ ಪಾಲಿಗಿದೆ.

ಹಿಂಸಾಚಾರ ನಡೆದಿದ್ದ ಮೆಕ್ಸಿಕೊದಲ್ಲಿ ಮತದಾನ ಅಂತ್ಯ

ಮೆಕ್ಸಿಕೊ ಸಿಟಿ(ಎಪಿ): ಸಾರ್ವತ್ರಿಕ ಚುನಾವಣೆ ಕಾರಣ ಕಳೆದ ವಾರ ಮೆಕ್ಸಿಕೊದಲ್ಲಿ ಪ್ರಚಾರ ಕಾರ್ಯ ಮುಕ್ತಾಯಗೊಂಡ ಬಳಿಕ ದೇಶದ ವಿವಿಧೆಡೆ ಹಿಂಸಾಚಾರ ಘಟನೆಗಳು ನಡೆದಿದ್ದ ಬೆನ್ನಲ್ಲೇ ಭಾನುವಾರ ಮತದಾನ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮೊರೆನಾ ಪಕ್ಷದ ಕ್ಲಾಡಿಯಾ ಶೀನ್‌ಬಾಮ್ ಮತ್ತು ಒಬ್ರಡಾರ್ ಅವರ ನಡುವೆ ತೀವ್ರ ಪೈಪೋಟಿ ಇದ್ದು, ಇಬ್ಬರಲ್ಲಿ ಯಾರೇ ಗೆಲುವು ಸಾಧಿಸಿದರೂ ಮೆಕ್ಸಿಕೊದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ಅಧ್ಯಕ್ಷರಾಗಿ ಆಯ್ಕೆಯಾಗಲಿದ್ದಾರೆ. ಇದು ದೇಶದ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ಚುನಾವಣೆಯಾಗಿದೆ ಎಂದು ವಿಶ್ಲೇಷಕರು ತಿಳಿಸಿದ್ದಾರೆ.

ಪ್ರಚಾರ ಕಾರ್ಯ ಮುಕ್ತಾಯಗೊಂಡ ಬುಧವಾರ ದೇಶದ ವಿವಿಧೆಡೆ ಹಿಂಸಾಚಾರ ಭುಗಿಲೆದ್ದಿತ್ತು.

ಆ್ಯಂಡ್ರಿಸ್ ಅರ್ಧಶತಕ • ಗಮನ ಸೆಳೆದ ಶ್ರೇಯಸ್ ಮೊವ್ವಾ

ಮಿಂಚಿದ ಆ್ಯರನ್ ಜೋನ್ಸ್ ಅಮೆರಿಕ ಶುಭಾರಂಭ

ಡಲ್ಲಾಸ್ (ಪಿಟಿಐ): ಆ್ಯರನ್ ಜೋನ್ಸ್ ಅಮೋಘ ಆಟದಿಂದ ಆತಿಥೇಯ ಅಮೆರಿಕ ತಂಡವು ಭಾನುವಾರ ಆರಂಭವಾದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಚೊಚ್ಚಲ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಗ್ರ್ಯಾಂಡ್ ಪ್ರಯರಿ ಕ್ರೀಡಾಂಗಣದಲ್ಲಿ ನಡೆದ ಎ ಗುಂಪಿನ ಪಂದ್ಯದಲ್ಲಿ ಅಮೆರಿಕ ತಂಡವು 7 ವಿಕೆಟ್‌ಗಳಿಂದ ಗೆದ್ದು 2 ಅಂಕಗಳನ್ನು ತನ್ನದಾಗಿಸಿಕೊಂಡಿತು.

ಟಾಸ್ ಗೆದ್ದ ಅಮೆರಿಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೆನಡಾ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 194 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಅಮೆರಿಕ ತಂಡವು ಆ್ಯರನ್ ಜೋನ್ಸ್ (ಔಟಾಗದೆ 94; 40ಎಸೆತ) ಅವರ ಬಲದಿಂದ ಇನಿಂಗ್ಸ್‌ನಲ್ಲಿ ಇನ್ನೂ 14 ಎಸೆತಗಳು ಬಾಕಿ ಇರುವಾಗಲೇ 3 ವಿಕೆಟ್‌ಗಳಿಗೆ 197 ರನ್ ಹೊಡೆದು ಜಯಿಸಿತು.

ಸ್ಥಳೀಯ ಹೀರೊ ಆ್ಯರನ್ ಜೋನ್ಸ್ ಬ್ಯಾಟಿಂಗ್ ಗಮನ ಸೆಳೆಯಿತು. ಕ್ವೀನ್ಸ್‌ನಲ್ಲಿ ಜನಿಸಿ ನ್ಯೂಯಾರ್ಕ್‌ನಲ್ಲಿ ಬೆಳೆದ ಆಟಗಾರ ಆ್ಯರನ್ ಕೆನಡಾ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. 10 ಸಿಕ್ಸರ್ ಹಾಗೂ 4 ಬೌಂಡರಿ ಸಿಡಿಸಿದ ಅವರು ಮಿಂಚಿದರು.

ಅವರೊಂದಿಗೆ ಆ್ಯಂಡ್ರಿಸ್ ಗೌಸ್ ಕೂಡ ವಿಜೃಂಭಿಸಿದರು. ಅವರು 46 ಎಸೆತಗಳಲ್ಲಿ 65 ರನ್ ಗಳಿಸಿದರು. ಅವರ ಆಟದಲ್ಲಿ ಏಳು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳಿದ್ದವು. 42 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿದ್ದ ಅಮೆರಿಕ ತಂಡ ಸಂಕಷ್ಟದಲ್ಲಿತ್ತು. ಕೆನಡಾದ ಖಲೀಂ ಸನಾ ಅವರು ಅಮೆರಿಕದ ಬ್ಯಾಟರ್ ಸ್ಟೀವ್ ಟೇಲರ್ ವಿಕೆಟ್ ಕಬಳಿಸಿದರು. ಟೇಲರ್ ಖಾತೆ ತೆರೆಯಲಿಲ್ಲ.



ಅಮೆರಿಕದ ಆಟಗಾರ ಆ್ಯರನ್ ಜೋನ್ಸ್ –ಎಎಫ್‌ಪಿ ಚಿತ್ರ

16 ರನ್ ಗಳಿಸಿದ್ದ ನಾಯಕ ಮೊನಾಂಕ್ ಪಟೇಲ್ ಅವರ ವಿಕೆಟ್ ಗಳಿಸಿದ ದಿಲೊನ್ ಹೆಲಿಗರ್ ಮಿಂಚಿದರು. ಈ ಹಂತದಲ್ಲಿ ಜೊತೆಗೂಡಿದ ಜೋನ್ಸ್ ಮತ್ತು ಗೌಸ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 131 ರನ್ ಸೇರಿಸಿ ತಂಡದ ಗೆಲುವಿಗೆ ನೆರವಾದರು.

ಕೆನಡಾ ತಂಡದ ಬ್ಯಾಟಿಂಗ್ ಚೆನ್ನಾಗಿತ್ತು. ಆ್ಯರನ್ ಜಾನ್ಸನ್ (23; 16ಎ) ಹಾಗೂ ನವನೀತ್ ಧಲಿವಾಲ್ (61; 44ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 43 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ಮಧ್ಯಮ ಕ್ರಮಾಂಕದಲ್ಲಿ ನಿಕೊಲಸ್ ಕಿರ್ಟನ್ (51; 31ಎ) ಹಾಗೂ ಕನ್ನಡಿಗ ಶ್ರೇಯಸ್ ಮೊವ್ವಾ (32; 16ಎ) ತಂಡದ ಮೊತ್ತ ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರು: ಕೆನಡಾ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 194 (ಆ್ಯರನ್ ಜಾನ್ಸನ್ 23, ನವನೀತ್ ಧಲಿವಾಲ್ 61, ನಿಕೊಲಸ್ ಕಿರ್ಟನ್ 51, ಶ್ರೇಯಸ್ ಮೊವ್ವಾ ಔಟಾಗದೆ 32, ಅಲಿ ಖಾನ್ 41ಕ್ಕೆ1, ಹರ್ಮೀತ್ ಸಿಂಗ್ 27ಕ್ಕೆ1, ಕೋರಿ ಆ್ಯಂಡರ್ಸನ್ 29ಕ್ಕೆ1) ಅಮೆರಿಕ: 17.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 197 (ಆ್ಯಂಡ್ರಿಸ್ ಗೌಸ್ 65, ಆ್ಯರನ್ ಜೋನ್ಸ್ ಔಟಾಗದೆ 94, ಖಲೀಂ ಸನಾ 34ಕ್ಕೆ1, ದಿಲೊನ್ ಹೆಲಿಗರ್ 19ಕ್ಕೆ1) ಫಲಿತಾಂಶ: ಅಮೆರಿಕ ತಂಡಕ್ಕೆ 7 ವಿಕೆಟ್‌ಗಳ ಜಯ. **ಪಂದ್ಯಶ್ರೇಷ್ಠ:** ಆ್ಯರನ್ ಜೋನ್ಸ್.

ನಮಿಬಿಯಾಗೆ ಒಮಾನ್ ಸವಾಲು ಇಂದು

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಅಕೀಬ್ ಅಲಿಯಾಸ್ ನಾಯಕತ್ವದ ಒಮಾನ್ ತಂಡವು ಸೋಮವಾರ ನಡೆಯಲಿರುವ ಬಿ ಗುಂಪಿನ ಪಂದ್ಯದಲ್ಲಿ ಗೆರಾರ್ಡ್ ಎರಸ್ಮಸ್ ನಾಯಕತ್ವದ ನಮಿಬಿಯಾವನ್ನು ಎದುರಿಸಲಿದೆ.


ಗೆರಾರ್ಡ್ ಎರಸ್ಮಸ್

ಒಮಾನ್ ತಂಡಕ್ಕೆ ಇದು ಮೂರನೇ ವಿಶ್ವಕಪ್ ಟೂರ್ನಿಯಾಗಿದೆ. ನಮಿಬಿಯಾ ತಂಡವು ಆಫ್ರಿಕನ್ ವಿಭಾಗದ ಕ್ವಾಲಿಫೈಯರ್‌ನಲ್ಲಿ ಅರ್ಹತೆ ಪಡೆದು ಮುಖ್ಯ ಸುತ್ತು ಪ್ರವೇಶಿಸಿದೆ.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಉಭಯ ತಂಡಗಳು 6 ಸಲ ಮುಖಾಮುಖಿಯಾಗಿವೆ. ನಮಿಬಿಯಾ 4 ಹಾಗೂ ಒಮಾನ್ 2 ಸಲ ಜಯಿಸಿವೆ.

ಪಂದ್ಯ ಆರಂಭ: ಬೆಳಿಗ್ಗೆ 6

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ಶರೀಫುಲ್‌ಗೆ ಗಾಯ

ನ್ಯೂಯಾರ್ಕ್ (ಪಿಟಿಐ): ಭಾರತ ವಿರುದ್ಧ ಶನಿವಾರ ಇಲ್ಲಿ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದ ವೇಳೆ, ಬಾಂಗ್ಲಾದೇಶ ತಂಡದ ಎಡಗೈ ವೇಗಿ ಶರೀಫುಲ್ ಇಸ್ಲಾಮ್ ಅವರ ಕೈ ಬೆರಳುಗಳ ಮಧ್ಯೆ ಗಾಯವಾಗಿದ್ದು ಆರು ಹೊಲಿಗೆ ಹಾಕಲಾಗಿದೆ. ಇದು ಬಾಂಗ್ಲಾ ತಂಡಕ್ಕೆ ಕಳವಳ ಮೂಡಿಸಿದೆ.

ತಮ್ಮ ಕೊನೆಯ ಓವರ್ ಬೌಲ್ ಮಾಡುವಾಗ ಹಾರ್ದಿಕ್ ಪಾಂಡ್ಯ ಮಾಡಿದ ಬಿರುಸಿನ ಡ್ರೈವ್‌ನಲ್ಲಿ ಚೆಂಡು ತಡೆಯುವ ಯತ್ನದಲ್ಲಿ ಅವರ ಬೌಲಿಂಗ್ ಮಾಡುವ ಕೈಯ ತೋರು ಬೆರಳು ಮತ್ತು ಮಧ್ಯದ ಬೆರಳಿನ ಮಧ್ಯೆ ಗಾಯವಾಗಿತ್ತು. ನೋವಿನಿಂದ ಮೈದಾನ ತೊರೆದಿದ್ದರು.

ವೆಸ್ಟ್ ಇಂಡೀಸ್‌ಗೆ ಪ್ರಯಾಸದ ಜಯ

ಟಿ20 ವಿಶ್ವಕಪ್: ರಾಸ್ಟನ್ ಚೇಸ್ ಮಿಂಚು • ಪಾಪುವಾ ನ್ಯೂಗಿನಿಗೆ ಸೋಲು

ಗಯಾನ (ಪಿಟಿಐ): ಎರಡು ಬಾರಿಯ ವಿಶ್ವಕಪ್ ವಿಜೇತ ವೆಸ್ಟ್ ಇಂಡೀಸ್ ತಂಡವು ಭಾನುವಾರ ಪಾಪುವಾ ನ್ಯೂಗಿನಿ ಎದುರಿನ ಪಂದ್ಯದಲ್ಲಿ ಪ್ರಯಾಸದ ಜಯ ಸಾಧಿಸಿತು.

ಆ್ಯಂಡ್ರೆ ರಸೆಲ್ (19ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಹಾಗೂ ಆಲ್‌ರೌಂಡರ್ ರಾಸ್ಟನ್ ಚೇಸ್ (ಅಜೇಯ 42, 27ಎ, 4X4, 6X2) ಬ್ಯಾಟಿಂಗ್ ಬಲದಿಂದ ವೆಸ್ಟ್ ಇಂಡೀಸ್ ತಂಡ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಪಾಪುವಾ ನ್ಯೂಗಿನಿ ತಂಡದ ವಿರುದ್ಧ 5 ವಿಕೆಟ್‌ಗಳ ಗೆಲುವು ಸಾಧಿಸಿತು.

ಪ್ರಾವಿಡೆನ್ಸ್ ಕ್ರೀಡಾಂಗಣ ದಲ್ಲಿ ಭಾನುವಾರ ನಡೆದ ಸಿ ಗುಂಪಿನ ಪಂದ್ಯದಲ್ಲಿ ಸೆಸೆ ಬಾವ್ (50; 43ಎ, 4X6, 6X1) ಅವರ ದಿಟ್ಟ ಆಟದಿಂದ ನ್ಯೂಗಿನಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 136 ರನ್ ಗಳಿಸಿತು.

ಈ ಸಾಧಾರಣ ಮೊತ್ತದ ಗುರಿ ಬೆನ್ನಟ್ಟಿದ್ದ ವಿಂಡೀಸ್ ತಂಡವು ಬ್ರೆಂಡನ್ ಕಿಂಗ್ (34, 29ಎ) ಹಾಗೂ ರಾಸ್ಟನ್ ಚೇಸ್ ಅವರ ತಾಳ್ಮೆಯ ಆಟದ ನೆರವಿನಿಂದ 19 ಓವರ್‌ಗಳಲ್ಲಿ 5 ವಿಕೆಟ್‌ಗೆ 137 ರನ್ ಗಳಿಸಿತು.

ವಿಂಡೀಸ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನ್ಯೂಗಿನಿ ತಂಡದ ವೇಗಿ ಅಲೀ ನಾವೋ ಅವರು ಆರಂಭಿಕ ಆಟಗಾರ ಜಾನ್ಸನ್ ಚಾರ್ಲ್ಸ್ ಅವರಿಗೆ ಖಾತೆ ತೆರೆಯಲು ಅವಕಾಶ ನೀಡಲಿಲ್ಲ.



ವೆಸ್ಟ್‌ಇಂಡೀಸ್ ತಂಡದ ನಿಕೊಲಸ್ ಪೂರನ್. ಎಪಿ/ಪಿಟಿಐ ಚಿತ್ರ

ಬ್ರೆಂಡನ್ ಕಿಂಗ್ ಮತ್ತು ನಿಕೂಲಸ್ ಪೂರನ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ನಾಯಕ ಅಸಾದ್ ವಾಲಾ ಅವರು ಕಿಂಗ್ ಹಾಗೂ ಶರ್ಫೆನ್ ರುದರ್‌ಫೋರ್ಡ್ ಅವರ ವಿಕೆಟ್ ಪಡೆದರು.

ಒಂದು ಹಂತದಲ್ಲಿ 97 ರನ್‌ಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಮಧ್ಯಮ ಕ್ರಮಾಂಕದ ಆಟಗಾರ ರಾಸ್ಟನ್ ಚೇಸ್ 27 ಎಸೆತಗಳಲ್ಲಿ 42 ರನ್ ಗಳಿಸಿ ಗೆಲುವಿಗೆ ಕಾಣಿಕೆ ನೀಡಿದರು. ಅಲ್‌ರೌಂಡರ್ ಆ್ಯಂಡ್ರೆ ರಸೆಲ್ (ಅಜೇಯ 15, 9ಎ) ಮಿಂಚಿದರು.

ಇದಕ್ಕೆ ಮೊದಲು ಕ್ರಿಕೆಟ್ ಲೋಕದ 'ಕೂಸು' ಪಾಪುವಾ ನ್ಯೂಗಿನಿ ಆರಂಭವೂ ಉತ್ತಮವಾಗಿರಲಿಲ್ಲ. ತಂಡವು 50 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಸೆಸೆ ಬಾವ್ ಚೆಂದದ ಅರ್ಧಶತಕ ಗಳಿಸಿ, ವೆಸ್ಟ್ ಇಂಡೀಸ್ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು.

ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಬಂದ ಸೆಸೆ ತಂಡಕ್ಕೆ ಆಸರೆಯಾದರು. 31 ವರ್ಷದ ಸೆಸೆ ಅವರ ಆಟದಿಂದಾಗಿ ತಂಡವು ಅಲ್ಪ-ಮೊತ್ತಕ್ಕೆ ಕುಸಿಯುವುದು ತಪ್ಪಿತು.

17ನೇ ಓವರ್‌ನಲ್ಲಿ ಅಲ್ಝರಿ ಜೋಸೆಫ್ ಎಸೆತದಲ್ಲಿ ಅವರು ಕ್ಲೀನ್ ಬೌಲ್ಡ್ ಆದರು.

ಕೊನೆಯ ಹಂತದ ಓವರ್‌ಗಳಲ್ಲಿ ಕಿಪ್ಲಿನ್ ಡೊರಿಗಾ (ಔಟಾಗದೆ 27; 18ಎ, 4X3) ಮಿಂಚಿದರು. ಆರಂಭಿಕ ಬ್ಯಾಟರ್ ಮತ್ತು ನಾಯಕ ಅಸದ್ ವಾಲಾ (21; 22ಎ) ಕೂಡ ಅಲ್ಪಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಪಾಪುವಾ ನ್ಯೂಗಿನಿ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 136 (ಅಸಾದ್ ವಾಲಾ 21, ಸೆಸೆ ಬಾವ್ 50, ಕಿಪ್ಲಿನ್ ಡೊರಿಗಾ 27, ಆ್ಯಂಡ್ರೆ ರಸೆಲ್ 19ಕ್ಕೆ2, ಅಲ್ಝರಿ ಜೋಸೆಫ್ 34ಕ್ಕೆ2)

ವೆಸ್ಟ್ ಇಂಡೀಸ್: 19 ಓವರ್‌ಗಳಲ್ಲಿ 5 ವಿಕೆಟ್‌ಗೆ 137 (ಬ್ರೆಂಡನ್ ಕಿಂಗ್ 34, ನಿಕೊಲಸ್ ಪೂರನ್ 27, ರಾಸ್ಟನ್ ಚೇಸ್ ಅಜೇಯ 42, ಅಸಾದ್ ವಾಲಾ 28ಕ್ಕೆ2, ಜಾನ್ ಕಾರಿಕೊ 17ಕ್ಕೆ1) **ಪಂದ್ಯ ಶ್ರೇಷ್ಠ: ರಾಸ್ಟನ್ ಚೇಸ್**

ಲಂಕಾಗೆ ದಕ್ಷಿಣ ಆಫ್ರಿಕಾ 'ಪವರ್ ಪ್ಲೇ' ಸವಾಲು

ಏಡನ್ ಮರ್ಕರಂ ಪಡೆ– ವನಿಂದು ಹಸರಂಗಾ ಬಳಗ ಮುಖಾಮುಖಿ ಇಂದು

ನ್ಯೂಯಾರ್ಕ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ಅಬ್ಬರದ ಬ್ಯಾಟಿಂಗ್‌ನಿಂದ ಬೌಲರ್‌ಗಳ ನಿದ್ದೆಗೆಡಿಸಿದ ಬ್ಯಾಟರ್‌ಗಳಿರುವ ದಕ್ಷಿಣ ಆಫ್ರಿಕಾ ತಂಡವನ್ನು ಸೋಮವಾರ ನಡೆಯುವ ಪಂದ್ಯದಲ್ಲಿ ಶ್ರೀಲಂಕಾ ಎದುರಿಸಲಿದೆ.

ನಾಸೌ ಕೌಂಟಿ ಕ್ಲಬ್ ಕ್ರಿಕೆಟ್ ಕ್ರೀಡಾಂಗಣ ದಲ್ಲಿ ನಡೆಯಲಿರುವ ಡಿ ಗುಂಪಿನ ಪಂದ್ಯವು ಲಂಕಾ ಬೌಲರ್‌ಗಳಿಗೆ ಕಠಿಣ ಪರೀಕ್ಷೆಯೊಡ್ಡುವ ಸಾಧ್ಯತೆ ಇದೆ. ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ, ವಿಕೆಟ್‌ಕೀಪರ್–ಬ್ಯಾಟರ್ ಹೆನ್ರಿಚ್ ಕ್ಲಾಸೆನ್, ಕ್ವಿಂಟನ್ ಡಿಕಾಕ್, ಡೇವಿಡ್ ಮಿಲ್ಲರ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರನ್ನು ಕಟ್ಟಿಹಾಕುವುದು ಸುಲಭದ ಮಾತಲ್ಲ.

ಈಚೆಗೆ ಮುಗಿದ ಐಪಿಎಲ್‌ನಲ್ಲಿ ಕ್ಲಾಸೆನ್ 16 ಪಂದ್ಯಗಳಿಂದ 471 ರನ್‌ಗಳನ್ನು 171ರ ಸ್ಟ್ರೈಕ್‌ರೇಟ್‌ನಲ್ಲಿ ಗಳಿಸಿದ್ದರು. ಅವರು ಪ್ರತಿನಿಧಿಸಿದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಫೈನಲ್ ಪ್ರವೇಶಿಸಿತ್ತು. ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿದ್ದ ಸ್ಟಬ್ಸ್ 14 ಪಂದ್ಯಗಳಲ್ಲಿ 190ರ ಸ್ಟ್ರೈಕ್‌ರೇಟ್‌ನಲ್ಲಿ 378 ರನ್ ಗಳಿಸಿದ್ದರು.

ಲಂಕಾ ತಂಡವು ಪ್ರಮುಖ ಸ್ಪಿನ್ನರ್‌ಗಳಾದ ನಾಯಕ ವನಿಂದು ಹಸರಂಗಾ ಮತ್ತು ಮಹೀಷ ತೀಕ್ಷಣ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ಒಂದೊಮ್ಮೆ ಇವರು ವೈಫಲ್ಯ ಅನುಭವಿಸಿದರೆ ವೇಗಿಗಳಾದ ಮಥೀಷ ಪಥಿರಾಣ, ಮಧುಶಂಕಾ ಹಾಗೂ ನುವಾನ್ ತುಷಾರ ಅವರ ಮೇಲೆ ಒತ್ತಡ ಹೆಚ್ಚಲಿದೆ. ದಕ್ಷಿಣ ಆಫ್ರಿಕಾ ತಂಡದ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ. ಕಗಿಸೊ ರಬಾಡ, ನಾಕಿಯಾ ಹಾಗೂ ಎಡಗೈ ಸ್ಪಿನ್ನರ್ ತಬ್ರೇಜ್ ಶಮ್ಸಿ ಅವರ ಪರಿಣಾಮಕಾರಿ ದಾಳಿಯನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯವನ್ನು ಲಂಕಾ ಬ್ಯಾಟಿಂಗ್ ಪಡೆ ತೋರಬೇಕಿದೆ. ಪಥುಮ್ ನಿಸಾಂಕ, ಚರಿತ ಅಸಲಂಕಾ, ಅನುಭವಿ ಏಂಜೆಲೊ ಮ್ಯಾಥ್ಯೂಸ್ ಅವರ ಮೇಲೆ ನಿರೀಕ್ಷೆಯ ಭಾರವಿದೆ.



ದಕ್ಷಿಣ ಆಫ್ರಿಕಾದ ಹೆನ್ರಿಚ್ ಕ್ಲಾಸನ್ ಮತ್ತು ಏಡನ್ ಮರ್ಕರಂ ಅಭ್ಯಾಸ –ಎಎಫ್‌ಪಿ ಚಿತ್ರ

ಇಲ್ಲಿಯ ಪಿಚ್ ಇನಿಂಗ್ಸ್‌ನ ಆರಂಭದಲ್ಲಿ ವೇಗಿಗಳಿಗೆ ಹಾಗೂ ನಂತರದ ಬಹುತೇಕ ಅವಧಿಯಲ್ಲಿ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವಾಗುವ ಸಾಧ್ಯತೆ ಇದೆ.


ಪಂದ್ಯ ಆರಂಭ: ರಾತ್ರಿ 8, ನೇರ ಪ್ರಸಾರ ಸ್ಟಾರ್‌ಸ್ಪೋರ್ಟ್ಸ್

ಕೋಚ್ ಆಗಲು ಇಷ್ಟ: ಗಂಭೀರ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡಕ್ಕೆ ಕೋಚ್ ಆಗಲು ಇಷ್ಟ ಎಂದು ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಹೇಳಿದ್ದಾರೆ.

ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಸಲ್ಲಿಸಲು ಮೇ 27 ಕೊನೆ ದಿನವಾಗಿತ್ತು. ಆದರೆ, ಗಂಭೀರ್ ಅರ್ಜಿ ಸಲ್ಲಿಸಿದ್ದಾರೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

'ನಾನು ಭಾರತ ತಂಡಕ್ಕೆ ತರಬೇತುದಾರನಾಗಲು ಇಷ್ಟಪಡುತ್ತೇನೆ. ರಾಷ್ಟ್ರೀಯ ತಂಡಕ್ಕೆ ತರಬೇತಿ ನೀಡುವುದಕ್ಕಿಂತ ದೊಡ್ಡ ಗೌರವ ಇನ್ನೊಂದಿಲ್ಲ. ನೀವು 140 ಕೋಟಿ ಭಾರತೀಯರನ್ನು ಮತ್ತು ವಿಶ್ವದಾದ್ಯಂತ ಇರುವವರನ್ನು ಪ್ರತಿನಿಧಿಸುತ್ತೀರಿ' ಎಂದು ಅಬುಧಾಬಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ 42 ವರ್ಷದ ಗಂಭೀರ್ ಹೇಳಿದರು.


ಗೌತಮ್

ಮುಖ್ಯ ಕೋಚ್ ಹುದ್ದೆಗೆ ಗಂಭೀರ್ ಉತ್ತಮ ಆಯ್ಕೆ ಎಂದು ಮಾಜಿ ನಾಯಕ ಸೌರವ್ ಗಂಗೂಲಿ ಹೇಳಿದ್ದರು.


ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರ ವೆಂಕಟೇಶ್ ಅಯ್ಯರ್ ಅವರು ಶ್ರುತಿ ರಘುನಾಥನ್ ಅವರನ್ನು ವಿವಾಹವಾದರು –ಕೆಕೆಆರ್ ಎಕ್ಸ್ ಚಿತ್ರ

12 ತಂಡಗಳಿಂದ ಪೋಶೆ ಪ್ರಕರಣ ತನಿಖೆ

ರಕ್ತದ ಮಾದರಿ ಬದಲಿಸಲು ಆಸ್ಪತ್ರೆಗೆ ಭೇಟಿ ನೀಡಿದ್ದಾಗಿ ಹೇಳಿದ ಪೋಷಕರು

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾಗಿರುವ 17 ವರ್ಷ ವಯಸ್ಸಿನ ಬಾಲಕನ ಪೋಷಕರು, ರಕ್ತದ ಮಾದರಿಯನ್ನು ಬದಲಿಸುವ ಸಲುವಾಗಿ ಸಸೂನ್ ಆಸ್ಪತ್ರೆಗೆ ಭೇಟಿ ನೀಡಿದ್ದಾಗಿ ಪುಣೆಯ ನ್ಯಾಯಾಲಯವೊಂದಕ್ಕೆ ಭಾನುವಾರ ತಿಳಿಸಿದ್ದಾರೆ.

ಅಪಘಾತ ಪ್ರಕರಣದಲ್ಲಿ ತಮ್ಮ ಮಗನ ಪರವಾಗಿ ದಂಪತಿಯು ಸಾಕ್ಷ್ಯನಾಶಕ್ಕೆ ಮುಂದಾಗಿತ್ತು. ಹೀಗಾಗಿ ಅವರ ಪೊಲೀಸ್ ಬಂಧನದ ಅವಧಿಯನ್ನು ವಿಸ್ತರಿಸಬೇಕು ಎಂದು ಪೊಲೀಸರು ನ್ಯಾಯಾಲಯಕ್ಕೆ ಮನವಿ ಮಾಡಿದರು. ಈ ವೇಳೆ ದಂಪತಿಯು ಆಸ್ಪತ್ರೆಗೆ ಭೇಟಿ ನೀಡಿದ್ದ ಕುರಿತು ಪೊಲೀಸರು ಮಾಹಿತಿ ನೀಡಿದರು.

ತಮ್ಮ ರಕ್ತದ ಮಾದರಿಯೊಂದಿಗೆ ಮಗನ ರಕ್ತದ ಮಾದರಿಯನ್ನು ಬದಲಾಯಿಸಿದ್ದ ಆರೋಪದ ಮೇಲೆ ತಾಯಿ ಶಿವಾನಿ ಅಗರ್ವಾಲ್ ಅವರನ್ನು ಪೊಲೀಸರು ಜೂನ್ 1ರಂದು ಬಂಧಿಸಿದ್ದರು.

100 ಪೊಲೀಸರ ನೇಮಕ: ತನಿಖೆಯನ್ನು ಬಹು ಆಯಾಮದಲ್ಲಿ ನಡೆಸುವ ಸಲುವಾಗಿ 100 ಪೊಲೀಸ್ ಸಿಬ್ಬಂದಿಯನ್ನು ಒಳಗೊಂಡಿರುವ 12 ತಂಡಗಳನ್ನು ರಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

'ಈ ಪ್ರಕರಣದ ತನಿಖೆಯನ್ನು ಪರಿಣಾಮಕಾರಿಯಾಗಿ ನಡೆಸುವ ಸಲುವಾಗಿ ನಾವು ಹಲವು ತಂಡಗಳನ್ನು ನಿಯೋಜಿಸಿದ್ದೇವೆ. ಅಧಿಕಾರಿಗಳೂ ಸೇರಿ 8–10 ಪೊಲೀಸರು ಪ್ರತಿ ತಂಡದಲ್ಲೂ ಇದ್ದಾರೆ. ಪ್ರಕರಣದ ಹಲವು ಆಯಾಮಗಳನ್ನು ಪರಿಶೀಲಿಸುತ್ತಿದ್ದೇವೆ' ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ಅಪರಾಧ) ಶೈಲೇಶ್ ಬಲ್ಕವಾಡೆ ಅವರು ಹೇಳಿದ್ದಾರೆ.

ಇದೇ ವೇಳೆ, ಬಾಲಕನ ತಾಯಿಯ ಉಪಸ್ಥಿತಿಯಲ್ಲಿ ಬಾಲಕನ ಜೊತೆ ಪೊಲೀಸರು ವೀಕ್ಷಣಾ ಗೃಹದಲ್ಲಿ ಒಂದು ಗಂಟೆಗೂ ಹೆಚ್ಚು ಸಮಯ ಮಾತನಾಡಿದರು.

ಮೇ 19ರಂದು ನಡೆದ ಪೋಶೆ ಕಾರು ಅಪಘಾತದಲ್ಲಿ ಇಬ್ಬರು ಟೆಕಿಗಳು ಮೃತಪಟ್ಟಿದ್ದರು.

ಜೂನ್ 5ರವರೆಗೆ ಬಾಲಕನ ಪೋಷಕರು ಪೊಲೀಸ್ ವಶಕ್ಕೆ

ಪೋಶೆ ಕಾರು ಅಪಘಾತ ಮಾಡಿದ ಆರೋಪ ಹೊತ್ತಿರುವ ಬಾಲಕನ ಪೋಷಕರನ್ನು ಜೂನ್ 5ರವರೆಗೆ ಪೊಲೀಸ್ ವಶಕ್ಕೆ ನೀಡುವಂತೆ ಪುಣೆ ಹೈಕೋರ್ಟ್ ಆದೇಶಿಸಿದೆ. ಸಾಕ್ಷ್ಯನಾಶಕ್ಕೆ ಪ್ರಯತ್ನಿಸಿದ ಆರೋಪದ ಮೇಲೆ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸಾಕ್ಷ್ಯನಾಶ ಮಾಡುವ ಸಲುವಾಗಿ ಬಾಲಕನ ರಕ್ತದ ಮಾದರಿಯನ್ನು ಬದಲಿಸಲು ದಂಪತಿ ಸಂಚು ಮಾಡಿದ್ದರು. ಇದಕ್ಕಾಗಿ ಅವರು ಸರ್ಕಾರಿ ಆಸ್ಪತ್ರೆಗೆ ತೆರಳಿ ಅಲ್ಲಿಯ ಸಿಬ್ಬಂದಿಯಿಂದ ನೆರವು ಪಡೆದಿದ್ದರು ಎಂದು ಪೊಲೀಸರು ನ್ಯಾಯಾಲಯಕ್ಕೆ ಹೇಳಿದರು.

ಪ್ರತಿವಾದ ಮಂಡಿಸಿದ ಆರೋಪಿಗಳ ಪರ ವಕೀಲರು, ಪೊಲೀಸರು ತಮ್ಮ ಕಕ್ಷಿದಾರರ ಮನೆಯಲ್ಲಿ ಈಗಾಗಲೇ ಶೋಧ ನಡೆಸಿದ್ದಾರೆ. ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಪರಿಶೀಲಿಸಿದ್ದಾರೆ. ಅವರ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 201 (ಸಾಕ್ಷ್ಯನಾಶಕ್ಕೆ ಯತ್ನ) ಅಡಿ ಪ್ರಕರಣ ದಾಖಲಿಸಲಾಗಿದೆ. ಇದು ಜಾಮೀನಿಗೆ ಅರ್ಹವಾದ ಪ್ರಕರಣವಾಗಿದ್ದು ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಬೇಕು ಎಂದು ನ್ಯಾಯಾಲಯಕ್ಕೆ ಕೋರಿದರು.

ಎರಡೂ ಕಡೆಯ ವಾದ ಆಲಿಸಿದ ನ್ಯಾಯಾಲಯವು ಈ ನಿರ್ದೇಶನ ನೀಡಿತು.

ಸಂಕ್ಷಿಪ್ತ ಸುದ್ದಿ

ಪ್ರಾಣಿ ಬಲಿ: ಭಕ್ತರಲ್ಲಿ ಆತಂಕ– ಅರ್ಚಕ

ಕಣ್ಣೂರು (ಪಿಟಿಐ): ಕೇರಳದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಪ್ರಾಣಿ ಬಲಿ ನಡೆದಿದೆ ಎಂಬ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಯು ಭಕ್ತರಲ್ಲಿ ಆತಂಕ ಮೂಡಿಸಿದೆ ಎಂದು ದೇವಸ್ಥಾನದ ಅರ್ಚಕ ತಿಳಿಸಿದ್ದಾರೆ.

ಪ್ರಾಣಿಗಳ ಬಲಿಯನ್ನು ಒಳಗೊಳ್ಳುವ 'ಶತ್ರು ಭೈರವಿ ಯಾಗ' ಕೇರಳದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ನಡೆದಿಲ್ಲ. ಆದರೆ, ಆ ಪ್ರದೇಶದ ಹತ್ತಿರದ ಖಾಸಗಿ ಸ್ಥಳದಲ್ಲಿ ಯಾಗ ನಡೆದಿದೆ ಎಂಬುದಾಗಿ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ ಹೊರತಾಗಿಯೂ, ಈ ಕುರಿತ ವಿವಾದಗಳು ಮುಂದುವರಿದಿವೆ.

ಈ ಕುರಿತು ಭಾನುವಾರ ಪ್ರತಿಕ್ರಿಯಿಸಿದ ರಾಜರಾಜೇಶ್ವರಿ ದೇವಸ್ಥಾನದ ಮುಖ್ಯ ಅರ್ಚಕ ಇ.ಪಿ. ಕುಬೇರನ್ ನಂಬೂದಿರಿಪಾದ್, 'ಡಿ.ಕೆ.ಶಿವಕುಮಾರ್ ಹೇಳಿರುವಂತೆ ದೇವಸ್ಥಾನದಲ್ಲಿ ಏನಾದರೂ ನಡೆದಿದೆಯೇ ಎಂದು ಹಲವು ಭಕ್ತರು ಪ್ರಶ್ನಿಸುತ್ತಿದ್ದಾರೆ. ಅನಗತ್ಯ ವಿವಾದದಿಂದಾಗಿ ಇಂತಹ ಪರಿಸ್ಥಿತಿ ಉದ್ಭವವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಈ ವಿಚಾರವು ಭಕ್ತರಲ್ಲಿ ಆತಂಕ ಹುಟ್ಟಿಸಿದೆ. ಇದೇ ಪರಿಸ್ಥಿತಿ ಮುಂದುವರಿದರೆ, ದೇವಸ್ಥಾನದ ಹೆಸರಿಗೆ ಧಕ್ಕೆಯಾಗುತ್ತದೆ' ಎಂದಿದ್ದಾರೆ.

ರವೀನಾ ಟಂಡನ್ ಮೇಲೆ ಹಲ್ಲೆ: ಆರೋಪ

ಮುಂಬೈ(ಪಿಟಿಐ): ಬಾಲಿವುಡ್ ನಟಿ ರವೀನಾ ಟಂಡನ್ ಹಾಗೂ ಅವರ ಕಾರು ಚಾಲಕನ ಮೇಲೆ ಗುಂಪೊಂದು ಹಲ್ಲೆ ನಡೆಸಿರುವ ಆರೋಪ ಕೇಳಿಬಂದಿದೆ.

ಈ ಸಂಬಂಧಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ತಮ್ಮ ಮೇಲೆ ಹಲ್ಲೆ ನಡೆಸದಂತೆ ರವೀನಾ ಅವರು ಮನವಿ ಮಾಡುತ್ತಿರುವುದು ಕಂಡುಬಂದಿದೆ.



ಮುಂಬೈನ ಬಾಂದ್ರಾದಲ್ಲಿರುವ ರವೀನಾ ಅವರ ನಿವಾಸದ ಸಮೀಪ ಈ ಘಟನೆ ನಡೆದಿದೆ. ಈ ಸಂಬಂಧ ಇಲ್ಲಿಯವರೆಗೆ ಪೊಲೀಸರಿಗೆ ಯಾವುದೇ ದೂರು ಬಂದಿಲ್ಲವಾದರೂ, ಸಮೀಪದ ಖಾರ್ ಠಾಣೆಯ ಡೈರಿಯಲ್ಲಿ ಘಟನೆಯ ವಿವರಗಳನ್ನು ನಮೂದಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

'ರವೀನಾ ಅವರ ಕಾರು ಚಾಲಕ ಅಜಾಗರೂಕತೆಯಿಂದ ಕಾರು ಚಾಲನೆ ಮಾಡಿ, ಮೂವರಿಗೆ ಡಿಕ್ಕಿ ಹೊಡೆದಿದ್ದಾರೆ. ಇದರಿಂದ ಉದ್ರಿಕ್ತಗೊಂಡ ಸ್ಥಳದಲ್ಲಿದ್ದ ಜನರ ಗುಂಪು ಕಾರು ಚಾಲಕನ ಮೇಲೆ ಹಲ್ಲೆಗೆ ಮುಂದಾಗಿದೆ. ಕಾರಿನಿಂದ ಕೆಳಗಿಳಿದು ಬಂದ ರವೀನಾ ಮೇಲೆಯೂ ದುಷ್ಕರ್ಮಿಗಳು ಹಲ್ಲೆ ನಡೆಸಿ, ನಟಿಯನ್ನು ತಳ್ಳಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ರವೀನಾ ಅವರ ಕಾರು ನಮ್ಮ ತಾಯಿಗೆ ಡಿಕ್ಕಿ ಹೊಡೆಯಿತು. ಈ ಬಗ್ಗೆ ನಾವು ಕಾರು ಚಾಲಕನನ್ನು ಪ್ರಶ್ನಿಸಿದಾಗ, ಆತ ನಮ್ಮ ಮೇಲೆಯೇ ಹಲ್ಲೆ ಮಾಡಲು ಮುಂದಾದ. ಇದೇ ವೇಳೆ, ಪಾನಮತ್ತರಾಗಿದ್ದ ನಟಿ ರವೀನಾ ಅವರು ಕೂಡ ಕಾರಿನಿಂದ ಕೆಳಗಿಳಿದು ಹಲ್ಲೆ ನಡೆಸಿದರು' ಎಂಬುದಾಗಿ ವ್ಯಕ್ತಿಯೊಬ್ಬರು ಆಪಾದಿಸಿದ್ದಾರೆ.

8 ನಕ್ಸಲರ ಶರಣಾಗತಿ

ಸುಕ್ಮಾ (ಪಿಟಿಐ): ಎಂಟು ಮಂದಿ ನಕ್ಸಲರು ಛತ್ತೀಸಗಢದ ಸುಕ್ಮಾ ಭದ್ರತಾಪಡೆ ಎದುರು ಜಿಲ್ಲೆಯಲ್ಲಿ ಭಾನುವಾರ ಶರಣಾಗತರಾದರು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಪೈಕಿ ನಾಲ್ವರ ತಲೆಗಳಿಗೆ ಒಟ್ಟಾರೆ ₹5 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದಿದ್ದಾರೆ.

ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಎದುರು ನಕ್ಸಲರು ಶರಣಾದರು. ಆದಿವಾಸಿಗಳ ಮೇಲೆ ನಕ್ಸಲರು ನಡೆಸುತ್ತಿರುವ ದೌರ್ಜನ್ಯಗಳನ್ನು ನೋಡಿ ಮನನೊಂದು ಈ ನಿರ್ಧಾರ ತೆಗೆದುಕೊಂಡಿದ್ದಾಗಿ ಅವರು ಹೇಳಿದ್ದಾರೆ,

ಶರಣಾಗತರಾದವರಲ್ಲಿ 3 ಮಹಿಳೆಯರಿದ್ದಾರೆ.

ಕಚ್ಚಾ ಬಾಂಬ್ ಸ್ಫೋಟ– ಯುವಕನಿಗೆ ಗಾಯ: ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಕಚ್ಚಾಬಾಂಬ್ ಸ್ಫೋಟಿಸಿದ್ದರಿಂದ 22 ವರ್ಷದ ಯುವಕರೊಬ್ಬರು ಭಾನುವಾರ ಗಾಯಗೊಂಡಿದ್ದಾರೆ. ನಕ್ಸಲರು ಈ ಬಾಂಬ್ ಇಟ್ಟಿರಬಹುದು ಎಂಬ ಶಂಕೆ ಇರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಛುಟವೈ ಗ್ರಾಮದ ಮಾದ್ವಿ ನಂದಾ ಗಾಯಗೊಂಡ ಯುವಕ.

ಸಲ್ಮಾನ್ ಖಾನ್ ಹತ್ಯೆಗೆ ಸಂಚು: ಮತ್ತೊಬ್ಬ ಬಂಧನ

ಠಾಣೆ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಹತ್ಯೆಗೆ ಸಂಚು ರೂಪಿಸಿದ್ದ ಪ್ರಕರಣದ ಸಂಬಂಧ ನವಿ ಮುಂಬೈ ಪೊಲೀಸರು ಹರಿಯಾಣದಲ್ಲಿ ಮತ್ತೊಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಈ ಮೂಲಕ ಒಟ್ಟು ಬಂಧಿತರ ಸಂಖ್ಯೆ 5ಕ್ಕೆ ಏರಿಕೆಯಾಗಿದೆ.

ಬಂಧಿತನನ್ನು ದೀಪಕ್ ಹವಾಸಿಂಗ್ ಗೊಗಲಿಯಾ ಅಲಿಯಾಸ್ ಜಾನಿ ವಾಲ್ಮೀಕಿ(30) ಎಂದು ಗುರುತಿಸಲಾಗಿದೆ. ಈತ ಕುಖ್ಯಾತ ಗ್ಯಾಂಗ್‌ಸ್ಟರ್‌ಗಳಾದ ಲಾರೆನ್ಸ್ ಬಿಷ್ಣೋಯಿ ಮತ್ತು ಗೋಲ್ಡಿ ಬ್ರಾರ್ ಗ್ಯಾಂಗ್‌ಗಳ ಸಕ್ರಿಯ ಸದಸ್ಯನಾಗಿದ್ದ. ಇದೇ ಪ್ರಕರಣದಲ್ಲಿ ಈಗಾಗಲೇ ಬಂಧಿತವಾಗಿರುವ ಇತರ ನಾಲ್ವರಿಗೆ ಈತ ವಸತಿ ಸೌಲಭ್ಯ ಕಲ್ಪಿಸಿದ್ದ. ವಿಡಿಯೊ ಕಾಲ್ ಮೂಲಕ ಅವರೊಂದಿಗೆ ಸಂಪರ್ಕ ಹೊಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಕ್ಸಿಂಗ್: ಅಮಿತ್, ಜಾಸ್ಮಿನ್‌ಗೆ ಪ್ಯಾರಿಸ್ ಒಲಿಂಪಿಕ್ ಟಿಕೆಟ್



ಅಮಿತ್



ಜಾಸ್ಮಿನ್

ಬ್ಯಾಂಕಾಕ್ (ಪಿಟಿಐ): ರಾಷ್ಟ್ರೀಯ ತಂಡಕ್ಕೆ ಪುನರಾಗಮನ ಮಾಡಿದ ಬಾಕ್ಸರ್ ಅಮಿತ್ ಪಂಘಲ್, ಎರಡನೇ ವಿಶ್ವ ಕ್ವಾಲಿಫಿಕೇಷನ್ ಟೂರ್ನಿಯಲ್ಲಿ ಭಾನುವಾರ 51 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯವನ್ನು ಗೆಲ್ಲುವ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅವಕಾಶ ಪಡೆದರು. ಅದೇ ರೀತಿ ಮಹಿಳಾ ವಿಭಾಗದಲ್ಲಿ ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆ ಜಾಸ್ಮಿನ್ ಲಂಬೋರಿಯಾ ಅವರು 57 ಕೆ.ಜಿ ತೂಕದ ವಿಭಾಗದಲ್ಲಿ 5–0 ಯಿಂದ ಮಾಲಿಯ ಮರೀನ್ ಕಮಾರಾ ಅವರನ್ನು ಸೋಲಿಸಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು.

ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಪಂಘಲ್ ಕಠಿಣ ಹೋರಾಟದಲ್ಲಿ 5–0 ಯಿಂದ ಚೀನಾದ ಚುವಾಂಗ್ ಲಿಯು ಅವರನ್ನು ಎಂಟರ ಘಟ್ಟದಲ್ಲಿ ಸೋಲಿಸಿ ಪ್ಯಾರಿಸ್ ಟಿಕೆಟ್ ಖಚಿತಪಡಿಸಿಕೊಂಡರು. ಮುಂದಿನ ತಿಂಗಳ (ಜುಲೈ) 26 ರಿಂದ ಆಗಸ್ಟ್ 11ರವರೆಗೆ ಒಲಿಂಪಿಕ್ ಕ್ರೀಡೆಗಳು ನಡೆಯಲಿವೆ.

ನಿಶಾಂತ್ ದೇವ್ (71 ಕೆ.ಜಿ), ನಿಖತ್ ಝರೀನ್ (50 ಕೆ.ಜಿ), ಪ್ರೀತಿ ಪವಾರ್ (54 ಕೆ.ಜಿ) ಮತ್ತು ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ) ಅವರು ಒಲಿಂಪಿಕ್ಸ್‌ಗೆ ಈಗಾಗಲೇ ಸ್ಥಾನ ಖಚಿತಪಡಿಸಿಕೊಂಡಿರುವ ಇತರ ಬಾಕ್ಸರ್‌ಗಳಾಗಿದ್ದಾರೆ.

ಪಂಘಲ್ ಅವರಿಗೆ ಈ ಕೂಟವೊಂದೇ ಅರ್ಹತೆ ಪಡೆಯಲು ಇದ್ದ ಏಕೈಕ ಅವಕಾಶವಾಗಿದ್ದು, ಅದನ್ನು ಚೆನ್ನಾಗಿಯೇ ಬಳಸಿಕೊಂಡರು. ಒಲಿಂಪಿಕ್ಸ್ ದಾರಿ ಅವರಿಗೆ ಸುಲಭವಾಗಿರಲಿಲ್ಲ. ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ದೀಪಕ್ ಭೋರಿಯಾ ಅವರು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಮೌಲ್ಯಮಾಪನ ವ್ಯವಸ್ಥೆ ಯಲ್ಲಿ ಅಮಿತ್ ಅವರಿಗಿಂತ ಮುಂದಿದ್ದ ಕಾರಣ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದು ಮೊದಲ ಎರಡು ಕ್ವಾಲಿಫಿಕೇಷನ್ ಕೂಟಗಳಲ್ಲಿ ಭಾಗವಹಿಸಿದ್ದರು.

ಟೋಕಿಯೊ ಒಲಿಂಪಿಕ್ಸ್ ನಂತರ ಹರಿಯಾಣದ ಬಾಕ್ಸರ್ ಪಂಘಲ್ ಭಾಗವಹಿಸಿದ ಮಹತ್ವದ ಕೂಟ ಎಂದರೆ 2022ರ ಕಾಮನ್ವೆಲ್ತ್ ಗೇಮ್ಸ್. ಅದರಲ್ಲಿ ಅವರು ಚಿನ್ನ ಗೆದ್ದಿದ್ದರು. ಈ ವರ್ಷದ ಆರಂಭದಲ್ಲಿ ಪ್ರತಿಷ್ಠಿತ ಸ್ಟ್ರಾಂಡ್ಜ ಸ್ಮಾರಕ ಟೂರ್ನಿಯಲ್ಲೂ ಅವರು ವಿಜೇತರಾಗಿದ್ದರು.

57 ಕೆ.ಜಿ ವಿಭಾಗದಲ್ಲಿ ಭಾರತದ ಸಚಿನ್ ಸಿವಾಚ್ ಅವರು ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಮುನಾರ್ಬೆಕ್ ಸೀಟ್ಬೆಕ್ ವಿರುದ್ಧ 0-5 ಅಂತರದಲ್ಲಿ ಸೋತರು.

ಕಮಲಿ ಕಮಾಲ್; ಮತ್ತೊಮ್ಮೆ 'ಡಬಲ್'

ಸರ್ಫಿಂಗ್; ಅಜೀಶ್, ತಯಿನ್‌ಗೆ ಕ್ರಮವಾಗಿ ಪುರುಷ, ಬಾಲಕರ ವಿಭಾಗದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ತಮಿಳುನಾಡಿನ ಕಮಲಿಮೂರ್ತಿ, ಇಲ್ಲಿನ ಸಸಿಹಿತ್ಲು ಬೀಚ್‌ನಲ್ಲಿ ನಡೆದ ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.

ಮಂತ್ರ ಸರ್ಫಿಂಗ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಷನ್ ಆಶ್ರಯದಲ್ಲಿ ಭಾರತ ಸರ್ಫಿಂಗ್ ಫೆಡರೇಷನ್ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಅಂತರರಾಷ್ಟ್ರೀಯ ಸರ್ಫರ್ ತಮಿಳುನಾಡಿನ ಅಜೀಶ್ ಅಲಿ ಮತ್ತು ಬಾಲಕರ ವಿಭಾಗದಲ್ಲಿ ತಯಿನ್ ಅರುಣ್ ಪ್ರಶಸ್ತಿ ಗೆದ್ದುಕೊಂಡರು.

ಕಮಲಿ ಮೂರ್ತಿ ಕಳೆದ ಬಾರಿಯೂ ಮಹಿಳೆಯರ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಎನಿಸಿ ಕಮಲಿ ಅವರಿಗೆ ಭಾರಿ ಪೈಪೋಟಿ ಕೊಂಡಿದ್ದರು. ಮಹಿಳೆಯರ ಫೈನಲ್‌ನಲ್ಲಿ ನೀಡಿದ, 2022ರ ಚಾಂಪಿಯನ್ ಗೋವಾದ ಸುಗರ್ ಶಾಂತಿ ಬನಾರಸಿ ರನ್ನರ್ ಅಪ್ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಮುಂಬೈಯ ನೇಹಾ ವೈದ್ ಮೂರನೇ ಸ್ಥಾನ ಗಳಿಸಿದರು.



ಮಹಿಳೆಯರ ಮತ್ತು ಬಾಲಕಿಯರ ವಿಭಾಗದ ಚಾಂಪಿಯನ್ ಕಮಲಿಮೂರ್ತಿ ಅವರ ಪ್ರದರ್ಶನ – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಮೂವರು ಕಣದಲ್ಲಿದ್ದ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಕಮಲಿ ಸುಲಭವಾಗಿ ಜಯ ಗಳಿಸಿದರು. ಪುರುಷರ ವಿಭಾಗದ ಫೈನಲ್‌ನಲ್ಲಿ ಅಜೀಶ್ ಅಲಿ 14.70 ಸ್ಕೋರು ಸಾಧನೆ ಮಾಡಿದರೆ ಶ್ರೀಕಾಂತ್ ಗರಿಷ್ಠ 12.57 ಸ್ಕೋರು ಗಳಿಸಿ ರನ್ನರ್ ಅಪ್ ಆದರು.

ಹರೀಶ್ ಪಿ ಎದುರು 1.77ರ ಮುನ್ನಡೆಯೊಂದಿಗೆ ಚಾಂಪಿಯನ್ ಆದ ತಯಿನ್ ಅರುಣ್, ಓಪನ್ ಸರ್ಫಿಂಗ್‌ನ ಮೊದಲ ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು. ಹರೀಶ್‌ಗೆ ಪ್ರಬಲ ಪೈಪೋಟಿ ನೀಡಿದ ಪ್ರಹ್ಲಾದ್ ಶ್ರೀರಾಮ್ ಮೂರನೇ ಸ್ಥಾನ ಗಳಿಸಿದರೆ, ಕರ್ನಾಟಕದ ಪ್ರದೀಪ್ ಪೂಜಾರ್ ನಾಲ್ಕನೇ ಸ್ಥಾನ ಗಳಿಸಿದರು.

ಹಾಕಿ : ಇಂಗ್ಲೆಂಡ್‌ಗೆ ಸೋತ ಭಾರತ

ಲಂಡನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಲಂಡನ್ ಲೆಗ್‌ನ ಎರಡನೇ ಪಂದ್ಯದಲ್ಲಿ ಭಾನುವಾರ ಆತಿಥೇಯ ಇಂಗ್ಲೆಂಡ್ ವಿರುದ್ಧ 1-3 ಗೋಲುಗಳಿಂದ ಸೋತಿದೆ. ಶನಿವಾರ ವಿಶ್ವ ಚಾಂಪಿಯನ್ ಜರ್ಮನಿಯನ್ನು 3-0 ಗೋಲುಗಳಿಂದ ಮಣಿಸಿತ್ತು.

ಇಂಗ್ಲೆಂಡ್ ಪರ ಬಂಡುರಾಕ್ ನಿಕೋಲಸ್ (2 ಮತ್ತು 11ನೇ ನಿಮಿಷ) ಗೋಲು ಗಳಿಸಿದರೆ, ಕ್ಯಾಲ್ನಾನ್ ವಿಲ್ 47ನೇ ನಿಮಿಷದಲ್ಲಿ ಗೋಲು ಗಳಿಸಿದರು. ಭಾರತದ ಪರ 35ನೇ ನಿಮಿಷದಲ್ಲಿ ಅಭಿಷೇಕ್ ಏಕೈಕ ಗೋಲು ಗಳಿಸಿದರು.

ಭಾರತ ಮಹಿಳಾ ಹಾಕಿ ತಂಡ ಸುಧಾರಿತ ಪ್ರದರ್ಶನ ನೀಡಿದರೂ, ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪ್ ಲೆಗ್‌ನ ಪಂದ್ಯದಲ್ಲಿ ಆತಿಥೇಯ ಗ್ರೇಟ್ ಬ್ರಿಟನ್ ತಂಡಕ್ಕೆ 2–3 ರಿಂದ ಮಣಿಯಿತು.,

ಜೊಕೊವಿಚ್‌ಗೆ ಜಯ,ರೋಹನ್ ಬೋಪಣ್ಣ ಜೋಡಿ ಮುನ್ನಡೆ


ಎಂಟರ ಘಟ್ಟಕ್ಕೆ ಇಗಾ ಶ್ವಾಂಟೆಕ್ ಲಗ್ಗೆ

ಪ್ಯಾರಿಸ್ (ಪಿಟಿಐ): ಹಾಲಿ ಚಾಂಪಿಯನ್, ಪೋಲೆಂಡ್‌ನ ಇಗಾ ಶ್ವಾಂಟೆಕ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿದರು.

ಭಾನುವಾರ ನಡೆದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಗಾ 6–0, 6–0ಯಿಂದ ನೇರ ಸೆಟ್‌ಗಳಲ್ಲಿ ರಷ್ಯಾದ ಅನಾಸ್ತೇಸಿಯಾ ಪೊಟಪೊವಾ ವಿರುದ್ಧ ಜಯಿಸಿದರು.

ಇಗಾ ಅವರು ಈ ಪಂದ್ಯದಲ್ಲಿ ಸುಲಭ ಜಯ ಸಾಧಿಸಿದರು. ಯಾವುದೇ ಹಂತದಲ್ಲಿಯೂ ಅನಾಸ್ತೇಸಿಯಾ ಅವರಿಂದ ಪ್ರತಿರೋಧ ಎದುರಾಗಲೇ ಇಲ್ಲ. 40 ನಿಮಿಷಗಳಲ್ಲಿಯೇ ಪಂದ್ಯ ಮುಗಿಯಿತು.

ನೊವಾಕ್ ಜಯಭೇರಿ: ಸರ್ಬಿಯಾದ ನೊವಾಕ್ ಜೊಕೊವಿಚ್ ಪುರುಷರ ಸಿಂಗಲ್ಸ್‌ನ ಮೂರನೇ ಸುತ್ತಿನಲ್ಲಿ ಜಯಗಳಿಸಿದರು. ಅಗ್ರಶ್ರೇಯಾಂಕದ ನೊವಾಕ್ 7-5, 6-7 (6), 2-6, 6-3, 6-0ಯಿಂದ ಇಟಲಿಯ ಲೊರೆಂಜೊ ಮಸೆಟಿ ವಿರುದ್ಧ ಜಯಿಸಿದರು.



ಪೋಲೆಂಡ್‌ನ ಇಗಾ ಶ್ವಾಂಟೆಕ್. ಎಎಫ್‌ಪಿ ಚಿತ್ರ

ಬೋಪಣ್ಣ ಜೋಡಿ ಮುನ್ನಡೆ : ಎರಡನೇ ಶ್ರೇಯಾಂಕದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರು ಆರಂಭಿಕ ಸುತ್ತಿನಲ್ಲಿ ಬ್ರೆಜಿಲ್‌ನ ಒರ್ಲಾಂಡೊ ಲುಜ್ ಮತ್ತು ಮಾರ್ಸೆಲೊ ಜೊರ್ಮನ್ ಅವರನ್ನು ಸೋಲಿಸಿದರು.

2 ಗಂಟೆ ಏಳು ನಿಮಿಷ ನಡೆದ ಸೆಣಸಾಟದಲ್ಲಿ ಬ್ರೆಜಿಲ್ ಜೋಡಿ 7-5, 4-6, 6-4 ಸೆಟ್ ಗಳಿಂದ ಸೋಲನುಭವಿಸಿತು. ಭಾರತ–ಆಸ್ಟ್ರೇಲಿಯಾ ಜೋಡಿ ಮೊದಲ ಸೆಟ್ ಅನ್ನು ಟ್ರೈ ಬ್ರೇಕರ್‌ನಲ್ಲಿ ಗೆದ್ದುಕೊಂಡಿತು. ಆದರೆ, ಎರಡನೇ ಸೆಟ್‌ನಲ್ಲಿ ಪುಟಿದೆದ್ದ ಬ್ರೆಜಿಲ್ ಜೋಡಿ ಪ್ರತಿರೋಧ ತೋರಿತು. ಆದರೆ ಮೂರನೇ ಸೆಟ್‌ನಲ್ಲಿ ನಿಖರ ಆಟದ ಮೂಲಕ ಹಿಡಿತ ಸಾಧಿಸಿ, ಎದುರಾಳಿಗೆ ಮುನ್ನಡೆ ಸಾಧಿಸಲು ಅವಕಾಶ ನೀಡದೆ ರೋಹನ್–ಎಬ್ಡೆನ್ ಗೆದ್ದುಕೊಂಡರು.

ಚೆಸ್: ಪ್ರಜ್ಞಾನಂದಗೆ ಮಣಿದ ಕರುವಾನಾ

ಸ್ಟೆವೆಂಜರ್, ನಾರ್ವೆ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯಲ್ಲಿ ವಿಶ್ವದ ಎರಡನೇ ಕ್ರಮಾಂಕದ ಅಮೆರಿಕದ ಫ್ಯಾಬಿಯಾನೊ ಕರುವಾನಾ ವಿರುದ್ಧ ಭರ್ಜರಿ ಗೆಲುವು ಸಾಧಿಸಿದರು. ಟೂರ್ನಿಯ ಐದನೇ ಸುತ್ತಿನ ಮುಕ್ತಾಯದ ಬಳಿಕ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರ 10ರಲ್ಲಿ ಸ್ಥಾನ ಪಡೆದರು.



ಪ್ರಜ್ಞಾನಂದ

ಅಮೆರಿಕದ ಹಿಕಾರು ನಕಾಮುರಾ ಅವರು ವಿಶ್ವ ಚೆಸ್ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರನ್ನು ಸೋಲಿಸಿದರು. ಕಾರ್ಲ್‌ಸನ್ ಅವರು ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಅವರನ್ನು ಮಣಿಸಿದರು.

ಮಹಿಳಾ ವಿಭಾಗದ ಸ್ಪರ್ಧೆಯಲ್ಲಿ ಭಾರತದ ಆರ್.ವೈಶಾಲಿ ಅವರು ಗೆಲುವಿನ ಓಟ ಮುಂದುವರಿಸಿದ್ದಾರೆ. ಭಾರತದ ಸ್ಪರ್ಧಿ ಚೀನಾದ ಟಿಂಗ್ಜಿ ಲೀ ವಿರುದ್ಧ ಆರ್ಮ್‌ಗೆಡನ್‌ನಲ್ಲಿ ಮೇಲುಗೈ ಸಾಧಿಸಿ, 10 ಅಂಕಗಳೊಂದಿಗೆ ಮುನ್ನಡೆ ಕಾಯ್ದುಕೊಂಡರು.

ಈ ವಿಭಿನ್ನ ಟೂರ್ನಿಯಲ್ಲಿ ಡ್ರಾ ಆದ ಪಂದ್ಯಗಳನ್ನು 'ಆರ್ಮ್‌ಗೆಡನ್' ಮಾದರಿಯಲ್ಲಿ ನಿರ್ಧರಿಸಲಾಗುತ್ತದೆ. ಈ ಮಾದರಿಯಲ್ಲಿ ಬಿಳಿ ಕಾಯಿಗಳಿಗೆ 10 ನಿಮಿಷ, ಕಪ್ಪು ಕಾಯಿಗಳನ್ನು ಆಡುವ ಆಟಗಾರನಿಗೆ 7 ನಿಮಿಷ ಇರುತ್ತದೆ. ಒಂದೊಮ್ಮೆ ಪಂದ್ಯ ಡ್ರಾ ಆದರೆ ಕಪ್ಪು ಕಾಯಿಗಳಲ್ಲಿ ಆಡುವ ಆಟಗಾರ ವಿಜೇತ ಎನಿಸುತ್ತಾನೆ.

ಕ್ಲಾಸಿಕಲ್ ಮಾದರಿ ಚೆಸ್‌ನಲ್ಲಿ ಉಕ್ರೇನ್‌ನ ಅನ್ನಾ ಮುಝಿಚುಕ್ ಅವರು ಸ್ವೀಡನ್‌ನ ಪಿಯಾ ಕ್ರಾಮ್ಲಿಂಗ್ ಅವರನ್ನು ಸೋಲಿಸಿದ್ದಾರೆ. ಭಾರತದ ಸ್ಪರ್ಧಿಗಿಂತ ಅನ್ನಾ ಒಂದು ಪಾಯಿಂಟ್ ಹಿಂದೆ ಇದ್ದಾರೆ. ಮಹಿಳಾ ವಿಶ್ವ ಚಾಂಪಿಯನ್ ಚೀನಾದ ಜು ವೆನ್‌ಜುನ್ ಅವರು ಭಾರತದ ಕೊನೇರು ಹಂಪಿ ವಿರುದ್ಧ ಐದನೇ ಗೆಲುವು ದಾಖಲಿಸಿ ಬಳಿಕ 7.5 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.